ಪ್ರಸ್ತಾಪ ಮಾಡುವುದಕ್ಕೆ ರಾಜ್ಯಪಾಲರ ಭಾಷಣದಲ್ಲಿ ನೀವು ಪ್ರತ್ಯೇಕವಾಗಿ ಮಾತನಾಡಿ ಉತ್ತರವನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡೋಣ ಅದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ದಯಮಾಡಿ ಸಹಕರಿಸಿ. ಬೇರೆ ದಾರಿ ಇಲ್ಲ. ಬಿಜಾಪುರ ಜಿಲ್ಲೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಅವರು ಸಂಬಂಧಪಟ್ಟ ಸಚಿವರನ್ನು ಕಳುಹಿಸಿ ಎಂದು ಹೇಳಿದ್ದೇನೆ. ಅಲ್ಲಿಗೆ ನೀರಾವರಿ ಸಚಿವರನ್ನು ಕಳುಹಿಸಿ ಎಂದು ನಾನು ಮತ್ತೆ ಒತ್ತಾಯವನ್ನು ಮಾಡುತ್ತಿದ್ದೇನೆ.

5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ:

"2005 ರ ಜನವರಿ 20ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು, ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ(ಬೆಳ್ಳಾವಿ): ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಬಹಳ ಅದೃಷ್ಟ ಮಾಡಿದ್ದೇನೆ. ರಾಜ್ಯಪಾಲರಿಗೆ ಒಂದು ರೀತಿಯಾದರೆ ನನಗೆ ಅವರಿಗಿಂತ ಹೆಚ್ಚು ಕಷ್ಟವಾಯಿತು. ನನ್ನ ಹೆಸರನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಿಬಿಟ್ಟರು. ನಾನು ದಿವಸ ನೋಟ್ಸ್ ಮಾಡಿಕೊಂಡಿದ್ದನ್ನು ಹೊತ್ತುಕೊಂಡು ಬರುವುದು. ಆದರೆ ದಿನ ಆ ವಿಷಯ ಚರ್ಚೆಗೇ ಬರುತ್ತಿರಲಿಲ್ಲಾ. ಆಗ ಇವತ್ತು ಅದನ್ನು ಬಿಟ್ಟುಬಂದೆ. ತಾವು ಮಾತನಾಡಬೇಕು ಎಂದು ಹೇಳುತ್ತಿದ್ದೀರಿ ಆಯಿತು. ಕಡಗೂ ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸತಕ್ಕಂಥ ಅವಕಾಶ ನನಗೆ ಸಿಕ್ಕಿದೆ. ಸಮ್ಮಿಶ್ರ ಸರ್ಕಾರದ ಎಲ್ಲಾ ಉದ್ದೇಶಗಳನ್ನು ಇಲ್ಲಿ ನಮೂದಿಸಲಾಗಿದೆ. ಲೋಕೋವಿಭಿನ್ನ ರುಚಿ ಅಂತ; ನಿಮಗೆ ಹಾಗೆ ಅನ್ನಿಸುತ್ತೆ, ನನಗೆ ಹೀಗೆ ಅನ್ನಿಸುತ್ತೆ, ನಾನೇನು ಮಾಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಮಾತನಾಡಿ ಸಾರ್. ನಿಮಗೆ ಸಂಪೂರ್ಣ ಸಹಕಾರವನ್ನು ನಾವು ಕೊಡುತ್ತೇವೆ. ನೀವಾದರೂ ಈ ಸರ್ಕಾರದ ಎಂಟು ತಿಂಗಳ ವೈಫಲ್ಯತೆಯನ್ನು ನಮ್ಮೆಲ್ಲರಿಗೂ ಮನದಟ್ಟಾಗುವ ಹಾಗೆ ಮನವರಿಕೆ ಮಾಡುತ್ತೀರಿ ಎನ್ನುವ ವಿಶ್ವಾಸದೊಂದಿಗೆ ನಾವು ನಿಮ್ಮ ಮಾತಿಗೆ ಸ್ವಾಗತವನ್ನು ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಿನ್ನೆಯೇ ಅದರ ಬಗ್ಗೆ ತಾವು ಸೂಚನೆಯನ್ನು ಕೊಟ್ಟಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಿನ್ನೆ ತಾವು ಅಂತರಾಳದ ಮಾತನ್ನು ಆಡಿದಿರಿ. ತಮ್ಮ ಆತ್ಮದ ಶೋಧನೆ ಮಾಡಿಕೊಂಡು ನಿನ್ನೆ ಮಾತನಾಡಿದ್ದೀರಿ. ಇವತ್ತು ಅದಕ್ಕೆ ತದ್ವಿರುದ್ಧವಾಗಿ ಮಾತನಾಡತಕ್ಕಂಥ ದುಸ್ಥಿತಿ ನಿಮಗೆ ಬಂದಿದೆ ಎಂದು ನನಗೆ ಬೇಜಾರು ಆಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಆಗಾಗ ಮಾನ್ಯ ರಮೇಶ್ ಕುಮಾರ್ ಅವರು ಆ ಸ್ಥಿತಿಯಲ್ಲಿ ಮಾತನಾಡತಕ್ಕಂಥ ಅಭ್ಯಾಸ ಇದೆ. ಆದರೆ ಅವರಿಗೆ ಈ ಸ್ಥಿತಿ ಬರಬಾರದಿತ್ತು ಎಂಬುದು ನಮ್ಮೆಲ್ಲರ

ಅಭಿಲಾಷೆ. ಅವರಿಗೆ ಪರಿಸ್ಥಿತಿಗೆ ಹೊಂದಿಕೊಂಡು ಮಾತನಾಡತಕ್ಕಂಥ ಶಕ್ತಿ ಇದೆ ಎಂಬುದು ನಮಗೆ ಗೊತ್ತಿದೆ. ನಮಗೆ ಗೊತ್ತಿದೆ ಅವರ ಶಕ್ತಿಎಷ್ಟು ಇದೆ ಎಂದು. ಆದರೆ ಈ ಸ್ಥಿತಿ ಇವರಿಗೆ ಬರಬಾರದಿತ್ತಲ್ಲಾ ಎಂಬುದು ನಮ್ಮ ಕಷ್ಟ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಏನು ಪರಿಸ್ಥಿತಿ ಬಂದಿದೆ?

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಮಗೇನು ಸ್ಥಿತಿ ಬಂದಿದೆ ಎಂದು ನಿಮಗೆ ಬೇಜಾರು ಆಗಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ನಾನೇನೋ ಸುಸ್ಥಿತಿಯಲ್ಲಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ : ನಮ್ಮ ಸ್ಥಿತಿ ನಮಗೆ ಗೊತ್ತಿದೆ. ಆದರೆ ನಿಮ್ಮ ಸ್ಥಿತಿ ಏನಾಗಿದೆ ಎಂಬುದು ನಿಮಗೆ ಗೊತ್ತಾಗಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್(ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಸಮ್ಮಿಶ್ರ ಸರ್ಕಾರ ಎಂಟು ತಿಂಗಳ ಆಡಳಿತ ನಡೆಸಿದೆ. ಈ ರಾಜ್ಯದಲ್ಲಿ 1983ನೇ ಇಸವಿಯವರೆಗೆ ಏಕ ಪಕ್ಷದ ಆಡಳಿತವನ್ನು ಜನರು ನೋಡಿದ್ದರು. 1983ನೇ ಇಸವಿಯಲ್ಲಿ ಮೊದಲನೇ ಬಾರಿಗೆ ಬದಲಾವಣೆಯನ್ನು ತರತಕ್ಕ ಪ್ರಯತ್ನವನ್ನು ಜನರು ಮಾಡಿದರು. ಆಗ ಭಾರತೀಯ ಜನತಾ ಪಕ್ಷದವರು ಆಗಿನ ಕಾಂಗ್ರೆಸ್ಸೇತರ ಸರ್ಕಾರಕ್ಕೆ ಹೊರಗಡೆಯಿಂದ ಬೆಂಬಲ ಕೊಟ್ಟರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್ ಅವರು ತಮ್ಮ ವ್ಯಕ್ತಿ ಪರಿಚಯದಲ್ಲಿ ಪ್ರಕಟಿಸುವುದಕ್ಕೆ ಕೆಲವು ವಿಚಾರ ಕೊಟ್ಟಿದ್ದೀರಿ. ಈ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಅವರು ಮಾಡಬಹುದೇ ಎಂಬುದು ನನಗೆ ಸ್ವಲ್ಪ ಅನುಮಾನ ಬಂದಿದೆ. ಇದು ಬಹಳ ಪ್ರಾಮುಖ್ಯವಾದುದು. ಮಾನ್ಯ ಮುಖ್ಯಮಂತ್ರಿಗಳು ತಾವು ಕೇಳಬೇಕು. ಬಹಳ ಪ್ರಾಮುಖ್ಯವಾಗಿದೆ. ತಮ್ಮ ಗಮನಕ್ಕೂ ತರುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸಾರ್ ಇಲ್ಲಿ ನೋಡಬೇಕು. ಮಾನ್ಯ ಸಿದ್ಧರಾಮಯ್ಯನವರೇ ಇದೊಂದು ವಿಚಾರ ಮಾತ್ರ ನೀವಿಬ್ಬರೂ ಗಮನಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಗಮನ ಇಟ್ಟು ಕೇಳಲೇ ಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್ ಅವರು ವ್ಯಕ್ತಿ ಪರಿಚಯ ಕೊಟ್ಟಿರುವುದನ್ನು ದಯಮಾಡಿ ಇಬ್ಬರೂ ಗಮನಿಸಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೇಳಲೇಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಮೇಶ್‌ಕುಮಾರ್ ಅವರು ಶಾಸನಸಭೆಯ ಮಾಜಿ ಅಧ್ಯಕ್ಷರು. ಶಾಸನಸಭೆಯ ಆ ವ್ಯಕ್ತಿ ಪರಿಚಯದ ಪುಸ್ತಕಕ್ಕೆ ಕೊಟ್ಟಿರತಕ್ಕಂಥ ದಾಖಲೆ. ಅವರು ಈ ದಾಖಲೆ ಕೊಟ್ಟು ಈ ತರಹ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಭಾಷಣ ಮಾಡಿಸುವವರು ದಯವಿಟ್ಟು ಕೇಳಲೇಬೇಕು ಸಾರ್. ಬಹಳ ಪ್ರಾಮುಖ್ಯವಾಗಿದೆ. ತಾವು ಖಂಡಿತ ಕೇಳಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ : ಪಕ್ಷದ ಗೌರವ ಇದು. ನೀವು ಓದಿ.

ಶ್ರೀ ವಾಟಾಳ್ ನಾಗರಾಜ್ : ಸಾರ್, ಹವ್ಯಾಸಗಳು– ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್ ಅವರೇ ಬರೆದುಕೊಟ್ಟಿರುವುದು.

ಶ್ರೀ ವಾಟಾಳ್ ನಾಗರಾಜ್ : ಅವರೇ ಬರೆದುಕೊಟ್ಟಿರುವುದು. ನನ್ನ ಬಗ್ಗೆ ಕೇಳಿದರೆ ಕುಡಿತ ಇಲ್ಲವೇ ಇಲ್ಲ. ನಾನು ಬರೆದು ಕೊಟ್ಟಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಪೂರ್ತಿ ಹೇಳಿ ಬಿಡಿ ಸಾರ್.

ಶ್ರೀ ವಾಟಾಳ್ ನಾಗರಾಜ್ : ಹೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅದು ಸರಿಯಾಗಿದೆ ಬಿಡಿ

ಶ್ರೀ ವಾಟಾಳ್ ನಾಗರಾಜ್ : ಇದನ್ನು ಕೊಟ್ಟಿರತಕ್ಕವರು ಯಾರು ಎಂದರೆ ಮಾನ್ಯ ಶಾಸಕರಾಗಿರತಕ್ಕಂಥ ರಮೇಶ್ ಕುಮಾರ್ ಅವರು ಅವರ ವ್ಯಕ್ತಿ ಪರಿಚಯಕ್ಕೆ ಕೊಟ್ಟಿರತಕ್ಕಂಥ ಪ್ರಾಮಾಣಿಕವಾದಂತಹ ಪತ್ರ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ ಇದು ರೆಕಾರ್ಡ್‌ಗೆ ಹೋಗುತ್ತದಾ ಎಂದು ಕೇಳುತ್ತಿದ್ದೇನೆ.

Sri J.C.Madhuswamy : ರೆಕಾರ್ಡ್‌ಗೆ ಹೋಗುವುದು ಏನು ಇದೆ?

ಶ್ರೀ ವಾಟಾಳ್ ನಾಗರಾಜ್ : ಆದರೇ ಸಹಿ ಮಾಡಿ ಕೊಟ್ಟಿರುವಂತಹದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರೇ ಸಹಿ ಮಾಡಿ ಹೀಗೆಯೇ ಪ್ರಿಂಟ್ ಆಗಬೇಕು ಎಂದು ಇನ್‌ಸಿಸ್ಟ್ ಮಾಡಿರುವುದು.

ಶ್ರೀ ವಾಟಾಳ್ ನಾಗರಾಜ್ : ಅವರೇ ಸಹಿ ಮಾಡಿ ಹೀಗೆಯೇ ಆಗಬೇಕು ಎಂದು ಹೇಳಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರೇ ಇನ್‌ಸಿಸ್ಟ್ ಮಾಡಿರುವುದು.

ಶ್ರೀ ಎಸ್.ಎಸ್.ಪಾಟೀಲ್ : ಒಂದು ವೇಳೆ ಅವರು ಸಹಿ ಮಾಡಿಯೇ ಕೊಟ್ಟಿದ್ದರೆ ಇದು ನಿಜವಾಗಿಯೂ ನೋವಿನ ಸಂಗತಿ.

ಶ್ರೀ ವಾಟಾಳ್ ನಾಗರಾಜ್ : ಹೌದು ಅವರೇ ಸಹಿ ಮಾಡಿ ಕೊಟ್ಟಿರುವುದು.

ಶ್ರೀ ಎಸ್.ಎಸ್.ಪಾಟೀಲ್ : ಇದು ನೋವಿನ ಸಂಗತಿ. ದಯಮಾಡಿ ಅದನ್ನು ತೆಗೆದು ಹಾಕಬೇಕು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಪಾಟೀಲ್ ಅವರೇ, ನಾವೂ ಅವರು ಬಹಳ ಸ್ನೇಹಿತರು. ಅವರ ಬಗ್ಗೆ ನಾವು ಕೀಳಾಗಿ ಮಾತನಾಡುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ : ಸ್ನೇಹಿತರಾಗಿ ಮಾತನಾಡುವುದು ಬೇರೆ. ಇದು ರೆಕಾರ್ಡ್‌ಗೆ ಹೋಗುವುದು ಬೇರೆ.

ಶ್ರೀ ವಾಟಾಳ್ ನಾಗರಾಜ್ : ನಾವು ಅಲ್ಲಿಂದ ಮಾಹಿತಿ ತೆಗೆದುಕೊಂಡಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಸೆಕ್ರೆಟರಿಯೇಟ್‌ನಿಂದ ಮಾಹಿತಿ ತೆಗೆದುಕೊಂಡಿರುವುದು.

ಶ್ರೀ ಎಸ್.ಎಸ್.ಪಾಟೀಲ್ : ಅಧ್ಯಕ್ಷರೆ, ಇದು ತಪ್ಪಾಗುತ್ತದೆ. ಇದು ಸರಿಯಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅಧ್ಯಕ್ಷರೆ, ಕ್ಷಮಿಸಬೇಕು. ಇದು ತಪ್ಪಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಆಗುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸೆಕ್ರೆಟರಿಯೇಟ್‌ನಿಂದ ತೆಗೆದುಕೊಂಡಿರುವಂತಹ ಮಾಹಿತಿ ಇದು.

ಶ್ರೀ ವಾಟಾಳ್ ನಾಗರಾಜ್ : ಸಭೆಯಿಂದ, ನಮ್ಮ ಶಾಸಕಾಂಗದ ಸಚಿವಾಲಯದವರು ಕೊಟ್ಟಿರುವಂತಹ ಮಾಹಿತಿ ಇದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನಿಂದ ತಂದಿರುವ ಮಾಹಿತಿ ಇದು.

ಶ್ರೀ ವಾಟಾಳ್ ನಾಗರಾಜ್ : ಇದು ಅಲ್ಲಿಂದ ತಂದಿರುವಂತಹ ಮಾಹಿತಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಮ್ಮದಲ್ಲ ಮಾಹಿತಿ ಇದು.

ಶ್ರೀ ವಾಟಾಳ್ ನಾಗರಜ್ : ಶಾಸಕಾಂಗದಿಂದ ತೆಗೆದುಕೊಂಡಿರುವಂತಹ ಮಾಹಿತಿ. ಅವರೇ ಸಹಿ ಮಾಡಿಕೊಟ್ಟಿರುವುದು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ವಾಟಾಳ್ ಅವರೇ, ತಪ್ಪೇನು ಇದೆ?

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಇನಿಷಿಯೇಟ್ ಮಾಡಬಹುದಾ ಎಂಬುದು ಪ್ರಶ್ನೆ.

ಅಧ್ಯಕ್ಷರು : ಆಯಿತು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಇನಿಷಿಯೇಟ್ ಮಾಡಬಹುದಾ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ : ಅವರು ರಾಜ್ಯಪಾಲರ ಭಾಷಣವನ್ನು ಮೂವ್ ಮಾಡಬಹುದಾ? ತಾವು ಇದನ್ನು ಹೇಳಲೇಬೇಕಾಗುತ್ತದೆ. ತಾವು ರೂಲಿಂಗ್ ಕೊಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ : ತಾವು ಹೇಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ : ಇಡೀ ರಾಜ್ಯ ಈ ವಿಚಾರ ನೋಡುತ್ತಿದೆ. ತಾವು ದಯವಿಟ್ಟು ಇದರ ಬಗ್ಗೆ ರೂಲಿಂಗ್ ಕೊಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಇನಿಷಿಯೇಟ್ ಮಾಡಬಹುದಾ ಎಂದು ನೀವು ಕೇಳಬೇಕು.

(ಸದನದಲ್ಲಿ ನಗು)

ಶ್ರೀ ವಾಟಾಳ್ ನಾಗರಾಜ್ : ಆಮೇಲೆ ಇವರ ಬಗ್ಗೆ ತನಿಖೆ ಬೇರೆ ಆಗಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಈ ಸದನದ ನೆರವಿಗೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್ : ಇಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಕೇಳುತ್ತಿದ್ದೀರಿ. ನಾವು ಅವರನ್ನು ಕೇಳುತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಈ ಭಾಷಣವನ್ನು ನೀವು ಅವರ ಕಡೆಯಿಂದ ಆರಂಭ ಮಾಡಿಸುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ತಾವು ಕೇಳುತ್ತಿದ್ದೀರಾ?

ಶ್ರೀ ಸಿದ್ಧರಾಮಯ್ಯ(ಉಪಮುಖ್ಯಮಂತ್ರಿಗಳು) : ಇಲ್ಲ ಇಲ್ಲ. ನಾನು ಕೇಳುತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಕೇಳುವುದಿಲ್ಲ. ನಿಮ್ಮ ಪಕ್ಷದ ವತಿಯಿಂದ ಇನಿಷಿಯೇಷನ್ ಮಾಡುವುದಕ್ಕೆ ಬಿಟ್ಟಿದ್ದೀರಿ. ಅವರು ಆಮೇಲೆ ಎದ್ದು ಭಾಷಣ ಮಾಡಿದರೆ ನಾವು ಕೇಳುತ್ತೇವೆ. ನಾವು ಸರ್ಕಾರದ ಪರವಾಗಿ ಭಾಷಣವನ್ನು ಇನಿಷಿಯೇಟ್ ಮಾಡುವುದಕ್ಕೆ ಬಿಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಅದಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಕೆ.ಎಸ್.ಈಶ್ವರಪ್ಪ : ಅವರೇ ಒಪ್ಪಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಶಾಸಕಾಂಗ ಇಲಾಖೆಗೆ ಅವರು ಸಹಿ ಮಾಡಿ ಕೊಟ್ಟಿರುವಂತಹ ಅಧಿಕೃತವಾದ ಪತ್ರವನ್ನು ಓದುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಇಲ್ಲ ಅವರನ್ನೇ ಕೇಳಿ. ನಮ್ಮನ್ನು ಕೇಳಬೇಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಮಗೆ ಅವರ ಬಗ್ಗೆ ಗೌರವ ಇದೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ : ಅಧ್ಯಕ್ಷರೆ, ಅವರು ಇಲ್ಲ ಎಂದು ಹೇಳಲಿ. ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅವರು ಇಲ್ಲ ಎಂದು ಹೇಳಲಿ.

ಶ್ರೀ ಸಿದ್ಧರಾಮಯ್ಯ : ಸುಸಂಸ್ಕೃತನ ಇಲ್ಲವೋ ಎಂದು ಅವರು ಹೇಳಬೇಕು. ಇದು ನಂಬರ್ ವನ್. ನಂಬರ್ ಟೂ ಎಂದರೆ, ಕೇಳಿರಿ ಇಲ್ಲಿ. ಅವರು ಬರೆದು ಕೊಟ್ಟಿದ್ದರೂ ಅದು ಸಬ್ಜೆಕ್ಟೆಡ್ ಟು ಎಡಿಟಿಂಗ್. ಅದು ಇರುತ್ತದೋ ಇಲ್ಲವೋ ಎಂದು ನಾವು ಎಡಿಟ್ ಮಾಡುತ್ತೇವೆ. ಅವರು ಹೇಳಿರುವುದೆಲ್ಲಾ ಸರಿನೋ ಇಲ್ಲವೋ ಎಂದು ಎಡಿಟ್ ಮಾಡುತ್ತೇವೆ. ಇನ್ನೊಂದು ಸಬ್ಜೆಕ್ಟೆಡ್ ಟು ಸ್ಕ್ರೂಟಿನಿ. ಮಾನ್ಯ ರಮೇಶ್ ಕುಮಾರ್ ಅವರನ್ನು ನಾವು ಬಹಳ ವರ್ಷದಿಂದ ನೋಡಿದ್ದೇವೆ. ಅವರು ಹೇಳಿರತಕ್ಕಂಥ, ಕೊಟ್ಟಿರತಕ್ಕಂಥ ಮಾಹಿತಿಗಳು ಸತ್ಯವೇ ಇಲ್ಲವೇ ಎಂದು ನೋಡಿ ಆಮೇಲೆ ಪ್ರಕಟ ಮಾಡುವುದು. ಇಲ್ಲಿ ಇದನ್ನು ತೆಗೆದುಕೊಂಡು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಾರದು ಎಂದು ಹೇಳುವುದಲ್ಲ. ಎಲ್ಲರೂ ಒಂದೊಂದು ಹಂತದಲ್ಲಿ ಸುಳ್ಳು ಹೇಳಿರಬಹುದು. ಯಾವ ಕಾರಣಕ್ಕೆ ಸುಳ್ಳು ಹೇಳಿದ್ದಾರೆ ಎಂಬುದನ್ನು ಕೇಳಬೇಕು. ಒಳ್ಳೆಯದನ್ನು ಮಾಡುವುದಕ್ಕೋಸ್ಕರ ಒಂದೊಂದು ಸಾರಿ ಸುಳ್ಳನ್ನು ಹೇಳಬೇಕಾಗುತ್ತದೆ. ಅಂತಹ ಸುಳ್ಳನ್ನು ಹೇಳಿರಬಹುದು.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನೀವು ಹೇಳಿದ್ದನ್ನೆಲ್ಲಾ ನಾವು ಕೇಳಿದ್ದೇವಲ್ಲಾ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಉಪ ಮುಖ್ಯಮಂತ್ರಿಗಳೇ, ಈಗ ಭಾಷಣ ಮಾಡಿದ ಮೇಲೆ ಒಪ್ಪುತ್ತೀರೋ ಇಲ್ಲವೋ ಹೇಳಿ.

ಶ್ರೀ ಸಿದ್ಧರಾಮಯ್ಯ : ಯಾವುದು?

ಶ್ರೀ ಜೆ.ಸಿ.ಮಾಧುಸ್ವಾಮಿ : ಈಗ ಅವರೊಂದು ಭಾಷಣ ಮಾಡುತ್ತಾರೆ. ಆಮೇಲೂ ಅಲ್ಲಿ ಸ್ಕ್ರೂಟಿನಿ ಆಗಬೇಕಾ ಅಥವಾ ನೇರವಾಗಿ ಅದನ್ನು ಒಪ್ಪುತ್ತೀರಾ?

ಶ್ರೀ ಸಿದ್ಧರಾಮಯ್ಯ : ಪುಸ್ತಕ ಆಗುವವರೆಗೆ ಅದು ಸ್ಕೂಟಿನಿ ಆಗಿ, ಎಡಿಟ್ ಆಗಿ ಪುಸ್ತಕ ಆಗುವವರೆಗೆ ಅದನ್ನು ನಾವು ಒಪ್ಪಿಕೊಳ್ಳುವ ಹಾಗೆ ಇಲ್ಲ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್(ಮುಖ್ಯಮಂತ್ರಿಗಳು): ಸಭಾಧ್ಯಕ್ಷರೆ ಕೊಟ್ಟಿದ್ದಾರೆ. ಕೆಲವೇ ಜನರು ಇರುತ್ತಾರೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಇದು ಬಹಳ ಸೀರಿಯಸ್ ಆಗಿ ಬಿಟ್ಟರೆ ಇದರ ತಿರುಳು ಸತ್ತು ಹೋಗುತ್ತದೆ.

ಶ್ರೀ ಎನ್.ಧರ್ಮಸಿಂಗ್ : ಮಾನ್ಯ ರಮೇಶ್‌ಕುಮಾರ್ ಅವರು ಇದ್ದಕ್ಕಿದ್ದಂತೆ ಹೇಳಿದ್ದಾರೆ. ಏನೂ ಮುಚ್ಚು ಮರೆ ಇಲ್ಲ.. ಅದಕ್ಕೇ ಮಾನ್ಯ ರಮೇಶ್‌ಕುಮಾರ್ ಅಂತಹವರು ಕಾಂಗ್ರೆಸ್ ಪಕ್ಷದಲ್ಲಿ ಹಿ ಈಸ್ ನಾಟ್ ಎ ಡಿಮಕ್ರಾಟ್, ಯು ಹ್ಯಾವ್ ಟು ಅಪ್ರೀಷಿಯೇಟ್. ಅದಕ್ಕೆ ಅವರು ವಸ್ತು ಸ್ಥಿತಿ, ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರದ ಬಗ್ಗೆ ಏನು ಇದೆ ಎಂದು ಹೇಳತಕ್ಕಂಥ ಶಕ್ತಿ ಇದೆ ಎಂದು ಹೇಳಿ ನಾವು ರಾಜ್ಯಪಾಲರ ಭಾಷಣದ ಮೇಲೆ ಮೂವ್ ಮಾಡಲು ಅನುವು ಮಾಡಿಕೊಟ್ಟಿದ್ದು.

ಶ್ರೀ ಅರಗ ಜ್ಞಾನೇಂದ್ರ : ಇಂತಹವರು ನಿಮ್ಮ ಪಕ್ಷದಲ್ಲಿ ಎಷ್ಟು ಜನ ಇದ್ದಾರೆ ಸಾರ್?

ಶ್ರೀ ಎನ್.ಧರ್ಮಸಿಂಗ್ : ಬಹಳ ಜನ ಇದ್ದಾರೆ. ಅವರು ಏನಾಗಿದ್ದಾರೆ ಎನ್ನತಕ್ಕದ್ದನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಅಧ್ಯಕ್ಷರಿಗೆ ಹೇಳಿದ್ದಾರೆ. ಮತ್ತೆ ನಿಮಗೆ ಗೊತ್ತು. ಈ ಸಭೆಯ ಅಧ್ಯಕ್ಷರಾಗಿ ಅವರು ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ ಎಂಬುದೂ ಕೂಡ ಗೊತ್ತು. ಅದಕ್ಕೇ ಸುಮ್ಮನೆ ವೇಳೆ ಏಕೆ ಹರಣ ಮಾಡುತ್ತೀರಿ? ಅವರಿಗೆ ಅವಕಾಶ ಕೊಟ್ಟು ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಛೇ, ಛೇ. ನಾನು ಅವರನ್ನು ಮಾತನಾಡಬೇಡಿ ಎನ್ನುವುದಕ್ಕೂ ಅಧಿಕಾರ ಇಲ್ಲ. ಮತ್ತು ಅವರು ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ ಎನ್ನುವ ಬಗ್ಗೆ ನನ್ನದೇನೂ ತಕರಾರು ಇಲ್ಲ. ಆದರೆ ಅವರು ಬರೆದು ಕೊಟ್ಟಿರತಕ್ಕ ವಿಚಾರ.

ಅಧ್ಯಕ್ಷರು : ಈಗ ನೋಡೋಣ. ಅವರು ಏನು ಹೇಳುತ್ತಾರೆಂದು.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಅಧ್ಯಕ್ಷರೆ, ತಾವು ವಾಟಾಳ್ ನಾಗರಾಜ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿದರೆ, ನಾನು ಆ ಸಮಿತಿ ಮುಂದೆ ಹಾಜರಾಗಿ ಸಮರ್ಥಿಸಿಕೊಳ್ಳುತ್ತೇನೆ. ಅಲ್ಲಿಯವರೆಗೂ ಈ ವಿಷಯದಲ್ಲಿ ಮಾತನಾಡಲು ಅವಕಾಶವಿದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಕೊಟ್ಟಿದ್ದಾರೆಯೇ, ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಾನು ಹೇಳುತ್ತಿದ್ದೇನಲ್ಲಾ. ನಾನು ಯಾವ ಭಾಷೆಯಲ್ಲಿ ಹೇಳಿದೆ?

ಶ್ರೀ ವಾಟಾಳ್ ನಾಗರಾಜ್ : ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಿದರೆ, ಆ ಸಮಿತಿ ಮುಂದೆ ಬಂದು ಹೇಳುತ್ತೇನೆ ಎಂದು ಸಲಹೆ ಕೊಟ್ಟಿದ್ದಾರೆ. ತಾವು ಸಮಿತಿ ನೇಮಕ ಮಾಡಿದರೆ ನಾನು ಅವರನ್ನು ಆ ಸಮಿತಿಗೆ ಕರೆಯುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಸತ್ಯ ಹೇಳಿದ್ದಾರೆ. ಆದುದರಿಂದ, ಅವರಿಗೆ ಮಾತನಾಡಲು ಅವಕಾಶ ಕೊಡಬಹುದು.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಜನರು ಏಕಪಕ್ಷದ ಆಡಳಿತವನ್ನು 1983ನೇ ಇಸವಿವರೆಗೂ ಬಯಸಿದ್ದರು. ಮೊದಲ ಬಾರಿಗೆ 1983ನೇ ಇಸವಿಯಲ್ಲಿ ದಿವಂಗತ ರಾಮಕೃಷ್ಣ ಹೆಗಡೆಯವರು ಈ ರಾಜ್ಯದ ಮುಖ್ಯಮಂತ್ರಿಯಾದಾಗ ಭಾರತೀಯ ಜನತಾ ಪಕ್ಷದವರು ಹೊರಗಿನಿಂದ ಸಹಕಾರ ಕೊಟ್ಟರು. ಅಲ್ಲಿಯವರೆಗೂ ರಾಜ್ಯದಲ್ಲಿ ಏಕಪಕ್ಷದ ಆಡಳಿತವಿತ್ತು. ಅದೊಂದು ರೀತಿಯ ಸನ್ನಿವೇಶ. ಅನಂತರ, ಒಂದು ಸಲ ಕಾಂಗ್ರೆಸ್ ಪಕ್ಷದ ಆಡಳಿತ ಬಂದರೆ, ಮತ್ತೊಂದು ಸಲ ವಿರೋಧ ಪಕ್ಷದ ಆಡಳಿತ ಬಂತು. ಮೊದಲ ಬಾರಿಗೆ ನಮಗೆ ಸ್ವಾತಂತ್ರ್ಯ ಲಭಿಸಿದ ನಂತರ ಸಮ್ಮಿಶ್ರ ಸರ್ಕಾರದ ಎರಡು ರಾಜಕೀಯ ಪಕ್ಷಗಳು, ಒಬ್ಬರ ವಿರುದ್ಧ ಒಬ್ಬರು ಹೋರಾಟ ನಡೆಸಿ, ಚುನಾವಣಾ ಪೂರ್ವದಲ್ಲಿ ಯಾವುದೇ ರೀತಿಯ ಹೊಂದಾಣಿಕೆ ಇಲ್ಲದೆ, ಚುನಾವಣೆಯಾದ ನಂತರ ಒಂದು ಸಿದ್ಧಾಂತವನ್ನು ಪ್ರಧಾನವಾಗಿಟ್ಟುಕೊಂಡು ಕೋಮುವಾದಿ ಶಕ್ತಿಗಳನ್ನು ಆಡಳಿತದಿಂದ ದೂರವಿಡಬೇಕೆಂಬ ಸಿದ್ಧಾಂತಕ್ಕೆ ಕಟ್ಟುಬೀಳುವ ಮೂಲಕ ಸಮ್ಮಿಶ್ರ ಸರ್ಕಾರ ರಚಿಸತಕ್ಕ ಪ್ರಯತ್ನ ಮಾಡಿ ಎಂಟು ತಿಂಗಳ ಕಾಲ ಆಡಳಿತ ನಡೆಸಿದರು. ಎಲ್ಲವೂ ಸರಿಯಾಗಿದ್ದು, ಒಂದೇ ಪಕ್ಷಕ್ಕೆ ಸಾಕಷ್ಟು ಬೆಂಬಲ ದೊರಕಿ ಆಡಳಿತ ನಡೆಸುವಂಥ ವೇಳೆಯಲ್ಲೂ ಕೂಡ ಯಾವ ರೀತಿಯ ಲೋಪ-ದೋಷಗಳು ಮತ್ತು ತಮ್ಮದೇ ಆದ ಇತಿ-ಮಿತಿಗಳಿದ್ದವು ಎಂಬುದನ್ನು ನಾವೆಲ್ಲರೂ ಗಮನಿಸಿದ್ದೇವೆ. ದಿವಂಗತ ದೇವರಾಜ ಅರಸುರವರ ನಂತರ ವೀರಪ್ಪ ಮೊಯ್ಲಿಯವರು. ಅದಾದ ನಂತರ ಈಗ ಧರ್ಮಸಿಂಗ್ ಅವರ ಆಡಳಿತವಾಗಿದೆ. ಇಡೀ ಸಭೆಯಲ್ಲಿ ಗಮನಿಸಿದರೆ, ಧರ್ಮಸಿಂಗ್ ಅವರನ್ನು ಬಿಟ್ಟರೆ ಮತ್ತೊಬ್ಬ ರಾಮ್‌ಸಿಂಗ್ ಇಲ್ಲ. ಕೃಷ್ಣಸಿಂಗ್ ಇಲ್ಲ. ಭೀಮ್‌ಸಿಂಗ್ ಇಲ್ಲ. ಒಬ್ಬರೇ ಧರ್ಮಸಿಂಗ್. ಅವರು ಮುಖ್ಯಮಂತ್ರಿಯಾಗುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸರ್, ನಾವೂ ಕೂಡ ಇಲ್ಲೊಬ್ಬ ವೀರ್‌ಸಿಂಗ್ ಅನ್ನು ಇಟ್ಟಿದ್ದೇವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಾನು ಏಕೆ ಹೇಳುತ್ತಿದ್ದೇನೆಂದರೆ, ಇದು ಪ್ರಜಾಪ್ರಭುತ್ವದ ವೈಶಿಷ್ಟ್ಯ. ಜಾತಿ, ಕುಲ, ಮತಗಳ ಅಂಕಿ-ಅಂಶಗಳನ್ನೆಲ್ಲಾ ತೆಗೆದುಕೊಂಡು, ಆ ಜಾತಿ ಇಲ್ಲಿ, ಈ ಉಪಜಾತಿ ಇಲ್ಲಿ ಎಂದು ನಾವು ಏನೆಲ್ಲಾ ಲೆಕ್ಕಾಚಾರ ಹಾಕುತ್ತೇವೆ. ಇವುಗಳನ್ನೆಲ್ಲಾ ಮೀರುವ ಮೂಲಕ ನಾವೆಲ್ಲರೂ ಇವೊತ್ತು ಧರ್ಮಸಿಂಗ್ ಅವರನ್ನು ಈ ರಾಜ್ಯದ ಮುಖ್ಯಮಂತ್ರಿಯನ್ನಾಗಿ ಒಪ್ಪಿಕೊಂಡಿದ್ದೇವೆ. ಅವರು ಈ ರಾಜ್ಯದ ಆಡಳಿತ ನಡೆಸುತ್ತಿದ್ದಾರೆ. ಅವರ ಜೊತೆ ನಮ್ಮ ಆತ್ಮೀಯ ಗೆಳೆಯರಾದ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೊಂದು ರೀತಿಯ ರಾಜಕೀಯ ಪ್ರಯೋಗ. ನಮ್ಮಂತಹವರಲ್ಲಿ ಕೆಲವರಿಗೆ ಚಾಯ್ಸ್ ಬಿಡುವ ಮೂಲಕ ಅವರಲ್ಲಿ ಒಬ್ಬರು ಮುಖ್ಯಮಂತ್ರಿ, ಮತ್ತೊಬ್ಬರು ಉಪ ಮುಖ್ಯಮಂತ್ರಿಯಾಗುತ್ತಾರೆಂದು ಹೇಳಿದ್ದರೆ, ನಾವ್ಯಾರೂ ಒಪ್ಪಿಕೊಳ್ಳುತ್ತಿರಲಿಲ್ಲ. ನಮಗ್ಯಾರಿಗೂ ಅಷ್ಟು ದೊಡ್ಡ ಹೃದಯವಿಲ್ಲ. ಪರಿಸ್ಥಿತಿಗಳು ಇಂತಹ ಒಂದು ಸ್ಥಿತಿಗೆ ಇವೊತ್ತು ನಮ್ಮನ್ನು ತಂದು ನಿಲ್ಲಿಸಿದೆ. ನಾವು ಇದನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಇವರು ತಮ್ಮ ಸರ್ಕಾರದ ಪರವಾಗಿ, ರಾಜ್ಯಪಾಲರ ಮುಖಾಂತರ ತಮ್ಮ ಉದ್ದೇಶಗಳನ್ನು ಅಲ್ಲಲ್ಲಿ ಉಲ್ಲೇಖಿಸಿರುವ ಕೆಲವೊಂದನ್ನು ಮಾತ್ರ ನಾನು ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ, ಮಳೆಯ ವಿಚಾರ. ಇಷ್ಟು ಹೊತ್ತು ಕುಡಿಯುವ ನೀರಿನ ವಿಚಾರವಾಗಿ ಮಾತನಾಡಿದೆವು. ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಮಳೆ ಸರಿಯಾಗಿ ಆಗಿರಲಿಲ್ಲ. ಈ ವರ್ಷದಲ್ಲಿ ಸ್ವಲ್ಪ ಉತ್ತಮ ಮಳೆಯಾಗಿದೆ. ರಾಜ್ಯದ ಸಾಕಷ್ಟು ಪ್ರದೇಶಗಳಲ್ಲಿ ಮಳೆಯಾಯಿತು, ಜಲಾಶಯಗಳಿಗೂ ನೀರು ಬಂತು. ಆದರೆ, ದೌರ್ಭಾಗ್ಯವೇನೆಂದರೆ, ಕೋಲಾರ, ತುಮಕೂರು ಒಳಗೊಂಡಂತೆ ರಾಜ್ಯದ ಇನ್ನೂ ಕೆಲವು ಭಾಗಗಳಲ್ಲಿ ಮಳೆಯಾಗಲಿಲ್ಲ. ಆದರೂ ಕೂಡ ಕುಡಿಯುವ ನೀರಿನ ವಿಚಾರದಲ್ಲಿ...ಹೌದು, ನಾನು ಗಲಾಟೆ ಮಾಡಿದೆ. 'ಆತ್ಮಸಾಕ್ಷಿಯಾಗಿ ಮಾತನಾಡಬೇಕು' ಎಂದು ಮಾನ್ಯ ಸದಸ್ಯರಾದ ಈಶ್ವರಪ್ಪನವರು ಹೇಳಿದರು. ಆತ್ಮಸಾಕ್ಷಿಯಾಗಿ ಮಾತನಾಡುವ ಪ್ರವೃತ್ತಿ ಇರುವುದರಿಂದಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ ನಾನು ತಮಾಷೆಗೆ ಹಾಗೆ ಬರೆದುಕೊಟ್ಟೆ. ನೀರಿನ ಸಮಸ್ಯೆ ಇಲ್ಲವೆಂದರೆ, ನಾನು ಆತ್ಮದ್ರೋಹಿಯಾಗುವುದಿಲ್ಲವೇ? ಇರುವ ಸಮಸ್ಯೆಯನ್ನು ನಿಭಾಯಿಸುವುದಕ್ಕೆ ನಾವು ಕೈಗೊಂಡಿರುವ ಪ್ರಯತ್ನ ಪ್ರಾಮಾಣಿಕವಾಗಿದೆಯೇ? ಇಲ್ಲವೇ? ಆಡಳಿತ ನಡೆಸುವವರು ಸರ್ಕಾರದ ಮುಂದಾಳತ್ವ ವಹಿಸಿಕೊಳ್ಳುತ್ತಾರೆ. ತಮ್ಮ ಪ್ರಯತ್ನವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದರೆ, ಅವರ ಸಹಾಯಕ್ಕೆ ನಿಂತು 'ಇನ್ನಷ್ಟು ಮಾಡಿ, ನ್ಯೂನತೆಗಳು ಹೀಗಿವೆ. ನಾವೆಲ್ಲರೂ ಒಟ್ಟಾಗಿ ಕಲೆತು ಹೋದರೆ ಜನರ ಸಮಸ್ಯೆಯನ್ನು ನಿವಾರಿಸಬಹುದು' ಎಂದು ಹೇಳುವುದಕ್ಕೆ ನಮಗೆ ಸುಲಭವಾಗುತ್ತದೆ. ನನ್ನ ಮಟ್ಟಿಗೆ ನಾವು ಆಗಿಂದಾಗ್ಗೆ ಆಗ್ರಹಪೂರ್ವಕವಾಗಿ, ವಿನಯಪೂರ್ವಕವಾಗಿ, ಒತ್ತಾಯಪೂರ್ವಕವಾಗಿ ಸರ್ಕಾರದ ಗಮನಕ್ಕೆ ತರದಿರತಕ್ಕಂಥ ಎಲ್ಲಾ ಸಂದರ್ಭಗಳಲ್ಲೂ ನಮ್ಮ ಮನೋಸ್ಥಿತಿಯನ್ನು ಅರ್ಥಮಾಡಿಕೊಂಡು, ಸಮಸ್ಯೆಯ ತೀವ್ರತೆಯನ್ನು ಕೂಡ ಮನಸ್ಸಿನಲ್ಲಿಟ್ಟುಕೊಂಡು ಕುಡಿಯುವ ನೀರಿನ ಬವಣೆ ತಪ್ಪಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇವೆಂದ ಮಾತ್ರಕ್ಕೆ ಎಲ್ಲಾ ಸಮಸ್ಯೆಗಳೂ ಪರಿಹಾರವಾಗಿವೆ ಎಂದಲ್ಲ. ಆ ನಿಟ್ಟಿನಲ್ಲಿ ಅವರು ಇಟ್ಟಿರತಕ್ಕಂಥ ಹೆಜ್ಜೆ ಪ್ರಾಮಾಣಿಕವಾದುದು ಎಂಬ ಮಾತನ್ನು ಹೇಳಿ ಅವರನ್ನು ಅಭಿನಂದಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ, ಅವರು ಯಾವಾಗಲೂ ನಮ್ಮ ಮೇಲೆ ಸಿಟ್ಟು ಮಾಡಿಕೊಂಡಿಲ್ಲ, ದುಡ್ಡು ಕೊಡುವುದಿಲ್ಲವೆಂದು ಹೇಳಿಲ್ಲ, ಸಮಸ್ಯೆ ಇಲ್ಲವೆಂತಲೂ ಹೇಳಿಲ್ಲ. ಇವೊತ್ತು ಸಹ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಅದೇ ಮಾತನ್ನು ಹೇಳಿದ್ದಾರೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆಡಳಿತ ಸುಧಾರಣಾ ಆಯೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಹಿಂದೆ ಶ್ರೀಮಾನ್ ಎಸ್.ಎಂ.ಕೃಷ್ಣರವರ ಸರ್ಕಾರ ಇದ್ದಾಗ ಆಡಳಿತ ಸುಧಾರಣಾ ಆಯೋಗವನ್ನು ರಚಿಸಿದ್ದರು. ಹಿರಿಯರಾದ ಹಾರನಹಳ್ಳಿ ರಾಮಸ್ವಾಮಿಯವರು ಆಯೋಗದ ಅಧ್ಯಕ್ಷರಾಗಿ ಕೆಲವು ಶಿಫಾರಸ್ಸುಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಅವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿರುವ ಪೂರ್ಣ ಶಿಫಾರಸ್ಸುಗಳನ್ನು ಸರ್ಕಾರ ಇದುವರೆಗೂ ಗಮನಿಸಿದೆಯೋ? ಇಲ್ಲವೋ? ನನಗೆ ಮಾಹಿತಿ ಇಲ್ಲ. ಆಡಳಿತ ವ್ಯವಸ್ಥೆಯಲ್ಲಿ ಸಿಬ್ಬಂದಿಯನ್ನು, ಕೆಲವು ಅನಗತ್ಯ ಕಚೇರಿಗಳನ್ನು ಕುರಿತು ಅವು ಇರಬೇಕೇ? ಬೇಡವೇ ಎಂಬುದರ ಬಗ್ಗೆ ಕ್ರಮ ಕೈಗೊಳ್ಳುವುದು ಬೇರೆ ವಿಷಯವಾಗುತ್ತದೆ. ಆದರೆ, ದಿನನಿತ್ಯದ ಆಡಳಿತದಲ್ಲಿ ಹೊಸದಾಗಿ ಯಾವುದೇ ಬಂಡವಾಳ ಹೂಡದೆ, ಕೆಲವು ಸಣ್ಣಸಣ್ಣ ಬದಲಾವಣೆಗಳನ್ನು ತರುವುದಕ್ಕೆ ಸರ್ಕಾರಕ್ಕೆ ದಿಟ್ಟವಾದ ಒಂದು ಮನಸ್ಸು

ಬೇಕೇ ಹೊರತು ಬಂಡವಾಳ ಬೇಕಿಲ್ಲ. ನಾನು ಕೆಲವು ವಿಚಾರಗಳ ಬಗ್ಗೆ ತಮ್ಮಲ್ಲಿ ಕೇಳುತ್ತೇನೆ. ಮಂತ್ರಿಗಳಾದವರು ತಮ್ಮ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೆಲವರನ್ನು ತರಬೇತುಗೊಳಿಸುವ ಮೂಲಕ ಪ್ರೈವೇಟ್ ಸೆಕ್ರೆಟರಿಯಾದವರು ಹೇಗಿರಬೇಕು, ಯಾವುದಾದರೂ ಸಾಧುವಲ್ಲವೆಂದು ಕಂಡುಬಂದಾಗ ನಿರ್ಭಯವಾಗಿ ಮಂತ್ರಿಗಳಿಗೆ ಅವರು ಹೇಗೆ ಸಲಹೆ ನೀಡಬೇಕು ಎಂಬ ಬಗ್ಗೆ ಒಂದು 'ಪೂಲ್' ಮಾಡುವ ಮೂಲಕ ಯಾರೇ ಮಂತ್ರಿಗಳಾದರೂ ಸಹ ಆ ಪೂಲ್ ನಲ್ಲಿರುವವರನ್ನೇ ಪ್ರೈವೇಟ್ ಸೆಕ್ರೆಟರಿಗಳನ್ನಾಗಿ ಆಯ್ಕೆ ಮಾಡಬೇಕು. ಆದರೆ, ಈಗ ಏನಾಗಿದೆಯೆಂದರೆ, ನಾನು ಮಂತ್ರಿಯಾದೆ. ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟಿನಲ್ಲಿರುವ ಯಾರೋ ಒಬ್ಬರನ್ನು ಕರೆದುಕೊಂಡು ಬಂದು ನನ್ನ ಪ್ರೈವೇಟ್ ಸೆಕ್ರೆಟರಿಯನ್ನಾಗಿ ನೇಮಿಸಿಕೊಳ್ಳುವುದು. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಮಂತ್ರಿಯಾಗುತ್ತಾರೆ. ಅವರ ನಂತರದವರು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿದ್ದರೆ, ಅವರನ್ನು ಕರೆದುಕೊಂಡು ಬಂದು ತಮ್ಮ ಪ್ರೈವೇಟ್ ಸೆಕ್ರೆಟರಿಗಳನ್ನು ನೇಮಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೆಲವರನ್ನು ತರಬೇತುಗೊಳಿಸುವ ಮೂಲಕ ಪ್ರೈವೇಟ್ ಸೆಕ್ರೆಟರಿಯಾದವರು ಹೇಗಿರಬೇಕು. ಫೈಲನ್ನು ಹೇಗೆ ಸಬ್‌ಮಿಟ್ ಮಾಡಬೇಕು, ಮಂತ್ರಿಗಳ ಹತ್ತಿರ ಅವರ ನಡತೆ ಹೇಗಿರಬೇಕು, ಯಾವುದಾದರೂ ಸಾಧುವಲ್ಲವೆಂದು ಕಂಡುಬಂದಾಗ ನಿರ್ಭಯವಾಗಿ ಮಂತ್ರಿಗಳಿಗೆ ಅವರು ಹೇಗೆ ಸಲಹೆ ನೀಡಬೇಕು ಎಂಬ ಬಗ್ಗೆ ಒಂದು 'ಪೂಲ್' ಮಾಡುವ ಮೂಲಕ ಯಾರೇ ಮಂತ್ರಿಗಳಾದರೂ ಸಹ ಆ ಪೂಲ್‌ನಲ್ಲಿರುವವರನ್ನೇ ಪ್ರೈವೇಟ್ ಸೆಕ್ರೆಟರಿಗಳನ್ನಾಗಿ ಆಯ್ಕೆ ಮಾಡಬೇಕು. ಆದರೆ, ಈಗ ಏನಾಗಿದೆಯೆಂದರೆ, ನಾನು ಮಂತ್ರಿಯಾದೆ. ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟಿನಲ್ಲಿರುವ ಯಾರೋ ಒಬ್ಬರನ್ನು ಕರೆದುಕೊಂಡು ಬಂದು ನನ್ನ ಪ್ರೈವೇಟ್ ಸೆಕ್ರೆಟರಿಯನ್ನಾಗಿ ನೇಮಿಸಿಕೊಳ್ಳುವುದು. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಮಂತ್ರಿಯಾಗುತ್ತಾರೆ. ಅವರ ನಂತರದವರು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿದ್ದರೆ, ಅವರನ್ನು ಕರೆದುಕೊಂಡು ಬಂದು ತಮ್ಮ ಪ್ರೈವೇಟ್ ಸೆಕ್ರೆಟರಿಯನ್ನಾಗಿ ನೇಮಿಸಿಕೊಳ್ಳುತ್ತಾರೆ. ಪ್ರೈವೇಟ್ ಸೆಕ್ರೆಟರಿ ಎಂದರೆ, ಅವರು ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿರುತ್ತಾರೆ. ಅವರು ಇಡೀ ಇಲಾಖೆಯ ಜವಾಬ್ದಾರಿ ಹೊತ್ತುಕೊಳ್ಳುವ ಮೂಲಕ ಮಂತ್ರಿಗಳ ಪರವಾಗಿ ನಿಲ್ಲುವವರು. ಆಪ್ತ ಸಹಾಯಕರನ್ನಾಗಿ ಯಾರನ್ನೇ ನೇಮಿಸಿಕೊಳ್ಳಲಿ, ನಮಗೇನೂ ದೊಡ್ಡ ತೊಂದರೆ ಇಲ್ಲ. ಆದರೆ, ಆಪ್ತ ಕಾರ್ಯದರ್ಶಿಯವರನ್ನು ಈ ರೀತಿ ನೇಮಿಸಿಕೊಳ್ಳುವುದಕ್ಕೆ ನಿಮಗಿರುವ ತೊಂದರೆಯೇನು? ಮಂತ್ರಿಗಳಾದವರು ತಮ್ಮ ಸಂಬಂಧಿಕರನ್ನೋ, ಅದೇ ಸಮಾಜದವರನ್ನೋ, ಅವರ ಊರಿನವರನ್ನೋ ತಂದು ಪ್ರೈವೇಟ್ ಸೆಕ್ರೆಟರಿಗಳನ್ನಾಗಿ ನೇಮಿಸಿಕೊಳ್ಳುವುದರ ಬದಲು ಈ ಒಂದು ಸಣ್ಣ ಸುಧಾರಣೆ ತರಲು, ಘೋಷಿಸಲು ನಿಮಗೇನಾದರೂ ಕಷ್ಟವಿದೆಯೇ? ಇರಬಾರದು.

ಎರಡನೆಯದಾಗಿ, ಕಚೇರಿಗಳಲ್ಲಿರುವ ಟೆಲಿಫೋನುಗಳ ಕುರಿತಂತೆ ಪ್ರಸ್ತಾಪಿಸುವುದಾದರೆ, ನಾನು Commissioner of public Instruction ಕಚೇರಿಗೆ ಫೋನ್ ಮಾಡುತ್ತೇನೆ. ಹತ್ತು ಬಾರಿ ರಿಂಗ್ ಆದ ಬಳಿಕ ಯಾರೋ ರಿಸೀವರ್ ತೆಗೆದುಕೊಳ್ಳುತ್ತಾರೆ. ಇತ್ತ ಕಡೆಯಿಂದ ನಾನು, 'ಸಾಹೇಬರು ಇದ್ದಾರೆಯೇ?' ಎಂದು ಕೇಳಿದರೆ, 'ಇಲ್ಲ'ವೆಂದು ಹೇಳುತ್ತಾರೆ. 'ನೀನು ಯಾರು?'

ಎಂದಾಗ, 'ನಾನು ಕೆಂಪಯ್ಯ' ಎನ್ನುತ್ತಾರೆ. 'ಏನಾಗಿದ್ದೀರಿ?' ಎಂದರೆ 'ನಾನು ಅಟೆಂಡರ್, ಸ್ವಾಮಿ' ಎನ್ನುತ್ತಾನೆ. 'ಸಾಹೇಬರು ಯಾವಾಗ ಬರುತ್ತಾರೆ?' ಎಂದರೆ 'ಗೊತ್ತಿಲ್ಲ, ಸ್ವಾಮಿ' ಎನ್ನುತ್ತಾನೆ. ಇದನ್ನು ಹೇಳುವುದಕ್ಕೆ ಆತ ಏಕೆ ಫೋನ್ ತೆಗೆದುಕೊಳ್ಳಬೇಕು? ಒಬ್ಬ ಮಂತ್ರಿ ಮನೆಯೊಳಗೆ, ಅಧಿಕಾರಿ ಮನೆಯೊಳಗೆ ಫೋನನ್ನು ಯಾರು ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಶಿಸ್ತು ರೂಪಿಸುವುದಕ್ಕಾಗುವುದಿಲ್ಲವೇ? ಆತ ಫೋನ್ ತೆಗೆದುಕೊಂಡಾಗ, 'ನಾನು ಇಂತಹ ಕಚೇರಿಯಿಂದ ಮಾತನಾಡುತ್ತಿದ್ದೇನೆ' ಎಂದು ಹೇಳುವುದಕ್ಕೆ ಆತನಿಗೇನು ಕಷ್ಟ? ಇದಕ್ಕೇನಾದರೂ ಬಜೆಟರಿ ಪ್ರಾವಿಜನ್ ಮಾಡಬೇಕೇ?

ಇನ್ನು ಫೈಲ್‌ಗಳು ಮೂವ್ ಆಗುವುದು. ಕೆಲವು ಫೈಲ್‌ಗಳು ಕೆಲವು ಇಲಾಖೆಗಳಲ್ಲಿ ಬಹಳ ಸ್ಪೀಡ್ ಆಗಿ ಮೂವ್ ಆಗುತ್ತವೆ. ಆದರೆ, ಕೆಲವು ಫೈಲ್‌ಗಳಂತೂ ಎಷ್ಟೇ ಒತ್ತಡ ಹಾಕಿ ತಳ್ಳಿದರೂ ಮುಂದಕ್ಕೆ ಹೋಗುವುದಿಲ್ಲ! ಫೈಲ್ಸ್‌ಗಳಿಗೆ ಕಾಲುಗಳು ಇರುವುದಿಲ್ಲ, ಅದು ನಡೆದುಕೊಂಡು ಹೋಗುವುದಿಲ್ಲ, ಮೂರನೆಯವರೇ ಹೊತ್ತುಕೊಂಡು ಹೋಗಬೇಕು, ಏಕೆ ಹೀಗಾಗುತ್ತದೆ? ಇದನ್ನು ನಾನು ಹೆಚ್ಚು ಲಂಬಿಸಲು ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು, ಉಪ ಮುಖ್ಯಮಂತ್ರಿಗಳನ್ನು ಹಾಗೂ ಮಂತ್ರಿಮಂಡಲದ ಎಲ್ಲಾ ಸದಸ್ಯರಲ್ಲಿ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಇಂಥ ಸಣ್ಣ ವಿಚಾರಗಳಲ್ಲಿ ಸ್ವಲ್ಪ ಹೆಚ್ಚು ಜವಾಬ್ದಾರಿಯಿಂದ ಮತ್ತು ಲವಲವಿಕೆಯಿಂದ ಕೆಲಸ ಮಾಡಿದರೆ..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ತಾವು ಆ ಇಲಾಖೆಗಳು ಯಾವುವು ಎಂಬ ಬಗ್ಗೆ ಹೇಳಿದರೆ ನಮಗೆ ಸ್ವಲ್ಪ ಮಾಹಿತಿ ಸಿಗುತ್ತದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಶ್ರೀರಾಮರೆಡ್ಡಿಯವರೆ, ನಾನು ಒಂದು broader perspective ನಲ್ಲಿ ನಾನು ಮಾತನಾಡುತ್ತಿದ್ದೇನೆ. ನಾನು ಯಾರನ್ನೂ ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡುತ್ತಿಲ್ಲ. ನನ್ನ ಕಳಕಳಿ ಏನೆಂದರೆ, ಯಾವುದೇ ಒಂದು ಕಡತ ಸರ್ಕಾರಿ ಕಛೇರಿಗಳಲ್ಲಿ ಇಂಥ ದಿವಸ ಬಂತು, ಇಂಥ ದಿವಸ ಹೋಯಿತು, ಎಲ್ಲೋ ಒಂದು ಜಾಗದಲ್ಲಿ ಹೆಚ್ಚು ಹೊತ್ತು ಇರುತ್ತದೆ. ಒಬ್ಬ ಆಫೀಸರ್ ಇರುತ್ತಾರೆ, ಬಹಳ ಪ್ರಾಮಾಣಿಕರಾಗಿರುತ್ತಾರೆ, ಅವರಿಗೆ ಏನೋ ಒಂದು ರೀತಿಯ ಸಿಟ್ಟು. ಯಾವುದೋ promotion ವಿಚಾರದಲ್ಲಿ ಬೇಜಾರು. ನಾನು ಪೇಪರ್‌ರನ್ನು ಕಳಿಸುವುದಿಲ್ಲ ಒಂದು ತಿಂಗಳು ಇಟ್ಟುಕೊಳ್ಳುತ್ತೇನೆಂದು ಹೇಳುತ್ತಾನೆ, ಮೊನ್ನೆ ಅರಣ್ಯ ಸಚಿವರು ಇದ್ದರು, ಅವರು ಪಿ.ಸಿ.ಸಿ.ಎಫ್. ರವರೊಬ್ಬರನ್ನು ಕರೆಸಿದ್ದರು, ಆತ ನಮ್ಮ ಎದುರಿಗೇ ಕುಳಿತು ನಾನು ಇದುವರೆಗೆ ನಾಲ್ಕು ರೆಕಮಂಡೇಷನ್ಸ್‌ನ್ನು ರಿಜೆಕ್ಟ್ ಮಾಡಿದ್ದೇನೆ ಇದನ್ನೂ ಸ್ಥಳಕ್ಕೆ ಹೋಗುವುದಿಲ್ಲ ಇಲ್ಲೇ ರೆಜೆಕ್ಟ್ ಮಾಡುತ್ತೇನೆಂದು ಹೇಳುತ್ತಾನೆ. ನೀನು ಇಲ್ಲೇ ಕುಳಿತು ರಿಜೆಕ್ಟ್ ಮಾಡುವುದಾದರೆ ಅಲ್ಲಿಗೆ ಏಕೆ ಹೋಗುತ್ತೀಯಾ ಬರೆದುಕೊಟ್ಟುಬಿಡು ಎಂದು ಹೇಳಿದೆ. ಯಾವುದೋ ಒಂದಕ್ಕೆ ಕ್ಲಿಯರೆನ್ಸ್ ಬೇಕಾಗಿತ್ತು. ಅದಕ್ಕೆ ಸಂಬಂಧಿಸಿದವರು ನಿನ್ನೆ ಹೋಗಿ ಕೇಳಿದಾಗ "ಇದನ್ನು ಆರು ತಿಂಗಳು ಕಳಿಸುವುದಿಲ್ಲ Don't come to my office for six months." I am not accusing that officer. ಏನೋ ಒಂದು ರೀತಿಯ ಮಾನಸಿಕ ಅಸಮತೋಲನಕ್ಕೆ ಒಳಗಾಗಿರುವ ಅನೇಕರು ಸರ್ಕಾರಿ ಸೇವೆಯಲ್ಲಿದ್ದಾರೆ. ನನಗೆ Medical Science ನಲ್ಲಿ ಅವರನ್ನು

ಯಾವ ರೀತಿಯಲ್ಲಿ discribe ಮಾಡಬೇಕೋ ಗೊತ್ತಿಲ್ಲ. ಅವರು Neurological patients ಅಥವಾ psychosomatic patients ಅಥವಾ psychiatric patients, I cannot describe them. I am incompetent to do that. Sadist ಎನ್ನುವುದಕ್ಕೆ it almost comes to that. The problem is, ಮುಖ್ಯವಾಗಿರತಕ್ಕ ಒಂದು ಸ್ಥಾನದಲ್ಲಿ ಈ ರೀತಿಯ ಮನಸ್ಸು ಇರತಕ್ಕ ವ್ಯಕ್ತಿ ಅಧಿಕಾರದ ಜವಾಬ್ದಾರಿಯನ್ನು ಹಿಡಿದಾಗ ಜನಸಾಮಾನ್ಯರ ಗತಿ ಏನು? ಆಗ ಏನಾಗುತ್ತದೆಂದರೆ, ಅಯ್ಯೋ ಯಾರಾದರು ದುಡ್ಡು ತಿನ್ನುವವರಿದ್ದರೆ ಪರವಾಗಿಲ್ಲ, ನಾನು ಕಾಸು ಬಿಸಾಕಿ ಕೆಲಸ ಮಾಡಿಕೊಂಡು ಹೋಗಬಹುದು, ಇವನೆಲ್ಲಿಯ ಕಾಟ ಎಂದು ಹೇಳುತ್ತಾರೆ. ಅವನು ಒಂದು ರೀತಿಯ sadist ಆದರೆ ಜನ ಈ ರೀತಿಯ sadist ಆಗುತ್ತಾರೆ. ಆಡಳಿತದ ಸುಧಾರಣೆ Divisional Commissioner's office ಇನ್ನೊಂದು ಮತ್ತೊಂದನ್ನು close ಮಾಡುವುದರಿಂದ ಮಾತ್ರ ಆಗುವುದಿಲ್ಲ. These are all I think measures. ಇದರ ಒಟ್ಟು ಪರಿಣಾಮ ಆಡಳಿತ ಸುಧಾರಣೆಯಾಗಿದೆಯೆಂದು ಆಗುತ್ತದೆ. ವಿಶೇಷವಾಗಿ ಗ್ರಾಮಮಟ್ಟದಲ್ಲಿ ಪಂಚಾಯಿತಿ ಕಾರ್ಯದರ್ಶಿಗಳು, ವಿಲೇಜ್ ಅಕೌಂಟೆಂಟ್‌ಗಳನ್ನು, ಲೈನ್‌ಮ್ಯಾನ್‌ಗಳನ್ನು ಯಾರೂ ಮಾತನಾಡಿಸಲು ಸಾಧ್ಯವಿಲ್ಲ. ಅವರು ಏನು ಹೇಳುತ್ತಾರೋ ಅದೇ ಫೈನಲ್. ಅವರುಗಳು ಯಾರೂ ಹೆಡ್ ಕ್ವಾಟ್ರಸ್‌ನಲ್ಲಿ ಇರುವುದಿಲ್ಲ. ಈಗೇನೋ ಆರ್.ಟಿ.ಸಿ. ಮುಂತಾದವುಗಳನೆಲ್ಲ ಕಂಪ್ಯೂಟರೈಸ್ ಮಾಡಿದ್ದೇವೆ, ಆದರೆ ಅವರು ಇನ್ನೊಂದನ್ನು ಹುಡುಕುತ್ತಾರೆ. ಅವರು ಗ್ರಾಮದಲ್ಲಿ ಒಂದು ರೀತಿಯಾಗಿ ದಳಪತಿಗಳು. ನಮ್ಮ ನಿಮ್ಮ ಅಧಿಕಾರ ಅವರೆದುರು ಏನೂ ನಡೆಯುವುದಿಲ್ಲ. ಕಾರ್ಡಿಯಲ್ ಆಗಿ ಏನೋ ಬುದ್ಧಿವಂತಿಕೆಯಿಂದ ತಮ್ಮಾ ಬಾರಪ್ಪ ನೋಡಪ್ಪಾ ಎಂದು ಹೆಗಲ ಮೇಲೆ ಕೈಯಿಟ್ಟರೆ ಜನರ ಎದುರಿಗೆ ನಮ್ಮ ಮರ್ಯಾದೆ ಉಳಿಯುತ್ತದೆಯೇ ಹೊರತು ನಾವು ಶಾಸಕರು ಎಂದು ಹೇಳಿ ಏನಾದರೂ ಸ್ವಲ್ಪ ಜೋರು ಮಾಡಲು ಹೋದರೆ ನಮ್ಮನ್ನು ಮುಗಿಸೇ ಬಿಡುತ್ತಾರೆ. ಕಂದಾಯ ಸಚಿವರು ಇಲ್ಲಿ ಕುಳಿತಿದ್ದಾರೆ, 1983 ರಿಂದ ಇಲ್ಲಿಯವರೆಗೆ ಹತ್ತು ಹಲವು ಇಲಾಖೆಗಳಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಮ್ಮ ವಿಧಾನಸಭೆಯಲ್ಲಿ ಇವತ್ತು ಇರತಕ್ಕ ಅನೇಕ ಜನ ಮೇಧಾವಿಗಳಲ್ಲಿ, ತಿಳುವಳಿಕಸ್ಥರಲ್ಲಿ ಅವರೂ ಒಬ್ಬರು, ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ವಿಶೇಷವಾಗಿ ರೆವಿನ್ಯೂ ಇಲಾಖೆಯಲ್ಲಿ ಗ್ರಾಮಮಟ್ಟದ ಆಡಳಿತದ ರೂಪ ಬದಲಾವಣೆಯಾಗದೆ ಹೋದರೆ, ಆ ಸ್ಥಳೀಯ ಮಟ್ಟದಲ್ಲಿರತಕ್ಕ ಸಾಮಾನ್ಯ ಮನುಷ್ಯನಿಗೆ ಆಡಳಿತದಲ್ಲಿ ಬದಲಾವಣೆ ಉಂಟಾಗಿದೆ, ಸರ್ಕಾರದಲ್ಲಿ ಬದಲಾವಣೆಯಾಗಿರತಕ್ಕದ್ದರ ಫಲ ಇದು ಎಂದು ಅವನ ಮನಸ್ಸಿಗೆ ಬಾರದಿದ್ದರೆ ನೀವು ರೆವಿನ್ಯೂ ಮಂತ್ರಿಗಳಾಗಿದ್ದಿರಾ, ಮತ್ತೆ ಯಾರಾದರೂ ಹಿಂದೆ ಇದ್ದರಾ, ಮುಂದೆ ಯಾರಾದರೂ ಬರುತ್ತಾರಾ ಎನ್ನತಕ್ಕದ್ದು ದೊಡ್ಡ ವಿಚಾರವಾಗುವುದಿಲ್ಲ. ನೀವು ಇದ್ದೀರಿ ಎಂಬುದು ಜನರಿಗೆ ಗೊತ್ತಾಗಬೇಕಾಗಿದ್ದರೆ ಅದರ effect ಕೆಳಗಡೆ reach ಆಗಬೇಕೆಂದು ಬೇರೆ ಯಾವುದೇ ಉದ್ದೇಶವಿಲ್ಲದೆ ಸರಳವಾದ ಅಭಿಪ್ರಾಯವನ್ನು ತಮ್ಮ ಮುಂದೆ ನಿವೇದಿಸಿಕೊಳ್ಳುತ್ತೇನೆ. ಅನಂತರ Secretariat ನವರು, ಇವರು ಹೀಗೆ ಖಾಯಂ ಆಗಿ ಬೆಂಗಳೂರಿನಲ್ಲಿ ಕುಳಿತುಕೊಳ್ಳುವುದು ಬಹಳ ಅಪಾಯಕಾರಿ. ಕೆಲವರಂತೂ experts ಆಗಿಬಿಟ್ಟಿದ್ದಾರೆ. Note ಹಾಕುವುದೂ ಗೊತ್ತು discard ಮಾಡುವುದೂ ಗೊತ್ತು. Chief Minister order ಮಾಡಿದರೂ

ಕೂಡ Chief Secretary order ಮಾಡಿದರೂ ಕೂಡ if a case worker minds, if a Section Officer minds, ಅವನು ಎಲ್ಲವನ್ನೂ ತಲೆಕೆಳಕು ಮಾಡಬಹುದು. ಒಂದು ಘಟನೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ರಾಜಶೇಖರ್ ಮೂರ್ತಿಯವರು ರೆವಿನ್ಯೂ ಮಂತ್ರಿಯಾಗಿದ್ದರು, ಆಗ ನಾನು ಈ ಸಭೆಯ ಸದಸ್ಯನಾಗಿರಲಿಲ್ಲ, ಒಂದು Housing co-operative Society ನವರು, ಬಹಳ ನೈಜವಾದಂಥ ಸೊಸೈಟಿ, ದುಡ್ಡು ತುಂಬಿ ಎಲ್ಲವನ್ನೂ ಮಾಡಿ land acquire ಮಾಡಿಕೊಂಡರು, acquisition proceedings ಇಷ್ಟು ದಿವಸದೊಳಗೆ complete ಮಾಡಬೇಕು ಇಲ್ಲದಿದ್ದರೆ vitiate ಆಗುತ್ತದೆ, ಒಬ್ಬ ಗುಮಾಸ್ತ ಅವನಿಗೆ ದುಡ್ಡನ್ನು ಕೊಡಲಿಲ್ಲವೆಂದು vitiate ಆಗುವವರೆಗೆ ಬಿಡಲೇ ಇಲ್ಲ, ನಾನು Revenue Commissioner ಹತ್ತಿರ ಹೋದೆ, ಸಿಂಗ್‌ರವರು ಇದ್ದರು, "ನಾನು ಏನು ಮಾಡಲಿ vitiate ಆಗಿಹೋಗಿಬಿಟ್ಟಿದೆ. I have no powers.' ಎಂದು ಹೇಳುತ್ತಾರೆ, Revenue Minister, Chief Minister ಗೆ ಅಧಿಕಾರ ಇಲ್ಲ, ಎಲ್ಲಾ ಆಗಿಹೋಗಿದೆ, ಅವನಿಗೆ ದುಡ್ಡು ಕೊಟ್ಟಿಲ್ಲವೆಂದು ಫೈಲನ್ನು ಪಕ್ಕಕ್ಕೆ ಇಟ್ಟುಬಿಟ್ಟ, ಆ date complete ಆಗಿಹೋಯಿತು, Notify ಮಾಡಲಿಲ್ಲ, porceedings vitiate ಆಗಿಹೋಯಿತು. They had to approach the High Court. ಹೈಕೋರ್ಟ್‌ನಲ್ಲಿ relief ಸಿಗಲಿಲ್ಲ ಅನಂತರ Supreme Court ಗೆ ಹೋಗಬೇಕಾಯಿತು. ಅಂದರೆ ನಾಲ್ಕು ಎಂಜಲು ಕಾಸಿಗೆ ಎಷ್ಟು ಅನಾಹುತ ಮಾಡುತ್ತಾರೆ ನೋಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಖಾತೆಯಲ್ಲಿ ಕಾನೂನು ಹೇಗಿದೆ ಎಂಬ ವಿಚಾರ ಗೊತ್ತಾದ ಮೇಲೆ ಆ ಕಾನೂನಿನ ಅಡ್ಡಿಯನ್ನು ಹೇಗೆ ಸರಿಪಡಿಸಬೇಕು ಎಂಬ ವಿಚಾರವನ್ನು ಒಂದು ಉದಾಹರನೆಯಾಗಿ ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಾನು ಬಗೆಹರಿಸಿಕೊಟ್ಟಿದ್ದೇನೆ ಎನ್ನುವುದೂ ಕೂಡ ಅವರಿಗೆ ಗೊತ್ತಿದೆ. ಆದ್ದರಿಂದ ಸರ್ಕಾರದಲ್ಲಿ ಮಂತ್ರಿಗಳಾದವರಿಗೆ ಅದು ಗಮನಕ್ಕೆ ಬರತಕ್ಕದ್ದು ಬಂದಾಗ ಅದನ್ನು ಸರಿಪಡಿಸುತ್ತೇವೆ. ಕೆಳಹಂತದಲ್ಲಿರತಕ್ಕದ್ದರಲ್ಲಿ ಗಮನಕ್ಕೆ ಬಾರದೆ ಆಗಿರತಕ್ಕ ಇಂಥ ಅನೇಕವು ಆಗುತ್ತದೆ, ತಾವು ಬಹಳ ವರ್ಷಗಳಿಂದ ಇದ್ದಂಥವರು, ತಮಗೆ ಇದೇನು ಗೊತ್ತಿಲ್ಲವೆಂದಲ್ಲ. ಆ ಕಾರಣಕ್ಕಾಗಿ ಅಲ್ಲಿ ಬದಲಾವಣೆಯನ್ನು ತರಬೇಕೆಂದು ತಾವು ಬಯಸುತ್ತೀರಿ, ಆ ದಿಕ್ಕಿನಲ್ಲಿ ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕಾನೂನನ್ನು ಹೇಗೆ ಬೇಕೋ ಹಾಗೆ ತಿರುಚಲು ಕೂಡ ಬರುತ್ತದೆ, ಅತಿ ಬುದ್ಧಿವಂತರಿಂದಲೇ ಕಾಟ. ದಡ್ಡರಿಂದ ನಮಗೇನೂ ತೊಂದರೆಯಾಗುವುದಿಲ್ಲ. ಅತಿ ಬುದ್ಧಿವಂತರಿಂದ ಇಂಥ ತೊಂದರೆಗಳಾಗುತ್ತದೆ.

ಅಧ್ಯಕ್ಷರು : ಅತಿ ಬುದ್ಧಿವಂತರನ್ನು ಯಾವ ರೀತಿ ನಿಯಂತ್ರಣದಲ್ಲಿ ಇಡಬೇಕು ಎಂಬುದು ಪ್ರಶ್ನೆ !

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಾನು ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನನ್ನ ಯಾವುದೇ ಮಾತು ಯಾರನ್ನೇ ಕುರಿತಾಗಿ ಆಗಿರುವುದಿಲ್ಲ. ನಾವು ದಿನನಿತ್ಯದ ಜೀವನದಲ್ಲಿ ಸಾಮಾನ್ಯ ನಾಗರೀಕರಾಗಿ ಅನುಭವಿಸುತ್ತಿರತಕ್ಕದ್ದು, ನಾವು ಈ ಸದನದ ಒಳಗೆ ಹೊರಗೆ ಎಲ್ಲಾ ಕಡೆ ಇದ್ದು ಕೆಲಸ ಮಾಡತಕ್ಕವರು, ನಮ್ಮ ಗಮನಕ್ಕೆ ನಮ್ಮ ಮನಸ್ಸಿಗೆ

ಬಂದಿರತಕ್ಕದ್ದನ್ನು ಶುದ್ಧವಾದ ಮನಸ್ಸಿನಿಂದ ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ನನ್ನ ಆದ್ಯಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಸಚಿವಾಲಯದ ಉದ್ಯೋಗಿಗಳಿಗೆ ಯಾವುದಾದರೂ ಒಂದು ರೀತಿಯ transfer ಅಥವಾ ಮತ್ತೊಂದು system ನ್ನು ರೂಪಿಸಿದ್ದರೆ ನಾವು ಬಯಸಿದಷ್ಟು ಸುಧಾರಣೆ ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ, ಅದರ ಮೇಲೆ ಸರ್ಕಾರದ ಅಭಿಪ್ರಾಯ ಹೇಗೆ ಆಗುತ್ತದೋ ನನಗೆ ಗೊತ್ತಿಲ್ಲ, ಈ ಸದನದ ಸದಸ್ಯನಾಗಿ ನಾನಂತೂ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅವರಿಗೆ ನಮ್ಮನ್ನು ಯಾರನ್ನೂ ಇಲ್ಲಿಂದ ಕದಲಿಸಲು ಆಗುವುದಿಲ್ಲವೆಂದು ಭಾವನೆಯೇನಿದೆ ಅದು ಹೋಗಬೇಕಾಗುತ್ತದೆ. ಸಾರ್ವಜನಿಕ ಜೀವನದಲ್ಲಿ ಸತ್ಯ ಹೇಳುವುದು ಬಹಳ ಕಷ್ಟ, ಒಪ್ಪಿಕೊಳ್ಳುವುದೂ ಬಹಳ ಕಷ್ಟ. ಸತ್ಯ ಹೇಳುವವರು ಮತ್ತು ಒಪ್ಪಿಕೊಳ್ಳುವವರು ಅನೇಕ ರೀತಿಯ ಹಿಂಸೆಗೆ ಗುರಿಯಾಗಬೇಕಾಗುತ್ತದೆ. ನಾವು ಲೋಕಾಯುಕ್ತಕ್ಕೆ declaration ಕೊಡಬೇಕು. Eletion ಗೆ application ಹಾಕುವ ಮೊದಲು declaration ಕೊಡಬೇಕೆಂದು ಹೇಳಿದ್ದಾರೆ. ನಾನು ಕೊಟ್ಟಿದ್ದೇನೋ ಎಂಬುದು ಚರ್ಚೆಯ ವಿಷಯ, ಮಾನ್ಯ ವಾಟಾಳ್‌ರವರ ಅಧ್ಯಕ್ಷತೆಯಲ್ಲಿ ಸಭೆಯಾಗಲಿ ನಾನು ಬಂದು ಸಮರ್ಥನೆಮಾಡಿಕೊಂಡಿದ್ದೇನೆ. ಇಲ್ಲಿ ನಾವು ಎಷ್ಟು ಜನ ಸತ್ಯಹರಿಶ್ಚಂದ್ರರಿದ್ದೇವೆ? ಒಬ್ಬ 5 ವರ್ಷಗಳ ಕೆಳಗೆ ಒಂದು foot path ನಲ್ಲಿ ಅಂಗಡಿ ಇಟ್ಟುಕೊಂಡಿದ್ದ. ಅಲ್ಲಿಂದ 10 ವರ್ಷಗಳಾದ ಮೇಲೆ ಸ್ವತಂತ್ರವಾಗಿ ಒಂದು ಅಂಗಡಿ ಇಟ್ಟುಕೊಳ್ಳುವಂತಹ ಸ್ಟೇಜಿಗೆ ಬಂದಿದ್ದಾನೆ. ಅವನು ಪ್ರತಿ ದಿವಸ ಆ foot path ಅಂಗಡಿಯಿಂದ ಸ್ವಂತ ಅಂಗಡಿ ಇಟ್ಟುಕೊಳ್ಳುವಂತಹ ಸ್ಟೇಜಿಗೆ ಹೇಗೆ ಬಂದ ಎಂಬುದನ್ನು ಇಡೀ ಸಮಾಜ ನೋಡಿದೆ, ಅದಕ್ಕೆ ಗೊತ್ತಾಗಿದೆ. ಆದರೂ ನಿನ್ನೆ, ಮೊನ್ನೆ ಏನೂ ಇಲ್ಲದೇ ಇದ್ದು, ಯಾವುದೋ ಕಾರಣದಿಂದ ಆಕಸ್ಮಿಕವಾಗಿ ಒಂದು ಸ್ಥಾನ ಸಿಕ್ಕಿತು, ಒಂದು ಅವಕಾಶ ಸಕ್ಕಿತು ಎಂದು ಹೇಳಿ, ಕೆಲವೇ ದಿವಸಗಳಲ್ಲಿ ನಮ್ಮ ಇಡೀ ಕುಟುಂಬದ ಜೀವನದ ಶೈಲಿ, ನಮ್ಮ ಜೀವನದ ಶೈಲಿ ಎಲ್ಲಾ ಬದಲಾಗಿ, ಮೂರು-ಮೂರು ತಲೆಮಾರುಗಳಿಗೆ ಆಗುವಷ್ಟನ್ನು ನಾವು ಗಳಿಸಿದಾಗ, ಪ್ರಾಮಾಣಿಕ ಎಂದು affidavit ಹಾಕುವುದಕ್ಕೆ ಏನು ಕಷ್ಟ? ಯಾವುದು ಸತ್ಯ? ಚುನಾವಣೆಗಾಗಿ ನಾವು ಖರ್ಚು ಮಾಡತಕ್ಕಂಥ ಲೆಕ್ಕ ಏನು ಚುನಾವಣಾ ಆಯೋಗಕ್ಕೆ ಕೊಡುತ್ತಿದ್ದೇವೋ, ಅದು ಸತ್ಯವೇ? ಈ ಸತ್ಯ ಮಾಡುವುದಕ್ಕೆ ಎಲ್ಲಿಗೆ ನಾವು ಹೋಗಬೇಕು? ಧರ್ಮಸ್ಥಳಕ್ಕೆ ಹೋಗಬೇಕೇ? ತಿರುಪತಿಗೆ ಹೋಗಬೇಕೇ? ಅಥವಾ ಎದೆ ಮುಟ್ಟಿಕೊಂಡು ಮಾತನಾಡಬೇಕೇ? ಸತ್ಯ ಮತ್ತು ಸುಳ್ಳು ಎರಡೂ ಒಟ್ಟಿಗೆ ನಮ್ಮಲ್ಲೇ ಇವೆ. ಸತ್ಯ ನಮಗೆ ಅನುಕೂಲವಾಗುವುದಾದರೆ, ನಾವು ಸತ್ಯವಂತರು ಆಗುತ್ತೇವೆ. ಸುಳ್ಳು ನಮ್ಮನ್ನು ಕಷ್ಟದಿಂದ ಪಾರು ಮಾಡುವುದಾದರೆ, ಆ ಸತ್ಯಕ್ಕೆ ಸುಳ್ಳಿನ ಆಶ್ರಯವನ್ನು ನಾವು ಪಡೆದುಕೊಳ್ಳುತ್ತೇವೆ. ಯಾರು ಹೆಚ್ಚು ಸುಳ್ಳನ್ನು ಅವಲಂಬಿಸುತ್ತಾರೆ? ಯಾರು ಹೆಚ್ಚು ಸತ್ಯವನ್ನು ಅವಲಂಬಿಸುತ್ತಾರೆ? ಇದೇ ವ್ಯತ್ಯಾಸ. ಮಾನ್ಯ ಹೆಚ್.ನರಸಿಂಹಯ್ಯನವರಿಗೆ ಏಕೆ ನಾವು ಶ್ರದ್ಧಾಂಜಲಿ ಅರ್ಪಿಸುತ್ತೇವೆ, ರಜಾ ಕೂಡ ಕೊಡುತ್ತೇವೆ ಎಂದರೆ, ಆ ಸತ್ಯ ಹೇಳತಕ್ಕಂಥ ಧೈರ್ಯವಿದೆಯಲ್ಲಾ ಮನುಷ್ಯನಿಗೆ, ಅದಕ್ಕೆ. ತನ್ನ ತಾಯಿ ಯಾರದೋ ಮನೆಯಲ್ಲಿ ಕೆಲಸಕ್ಕಿದ್ದರು, ಮುಸುರೆ ತಿಕ್ಕುತ್ತಿದ್ದರು, ಅವರು ಮನೆಯಲ್ಲಿ ಕೊಟ್ಟಂತಹ ಹಳಸಿ ಹೋದ ಅನ್ನವನ್ನು ತೆಗೆದುಕೊಂಡು ಬಂದು ತನಗೆ ಇಟ್ಟರೆ, ಅದನ್ನು ತಿಂದು ತಾವು ಶಾಲೆಗೆ ಹೋಗುತ್ತಾರೆ. ಆ ಸತ್ಯವನ್ನು ಒಪ್ಪಿಕೊಳ್ಳತಕ್ಕಂಥ ಧೈರ್ಯ ಇರಬೇಕು. ನಾನು ಅದನ್ನೇ ಮೊನ್ನೆ ಶ್ರದ್ಧಾಂಜಲಿ

ಅರ್ಪಿಸುವಾಗ ಹೇಳಲಿದ್ದು. ಅಕ್ರಮವಾಗಿ ಗಳಿಸಿದ್ದನ್ನು Voluntary disclosure scheme ನಲ್ಲಿ ಹಾಕಿಕೊಂಡು ಬಿಡುತ್ತಾರೆ. ಇದೆಲ್ಲಾ ಸಕ್ರಮ ಮಾಡಿ ಎಂದು ಹೇಳುತ್ತಾರೆ. Anyway I don't want to go deep into that. Old age pensions ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗೆ ನೋಡಿಕೊಳ್ಳತಕ್ಕಂಥವರು ದಿಕ್ಕಿರುವುದಿಲ್ಲ ಅಥವಾ ಒಂದು ವೇಳೆ ಒಬ್ಬರೋ, ಇಬ್ಬರೋ ಮಕ್ಕಳಿದ್ದರೂ ಕೂಡ, ಅವರ ಜೀವನ ನಡೆಸಿಕೊಂಡು ಹೋಗುವುದೇ ಅವರಿಗೆ ಕಷ್ಟವಾಗಿರುತ್ತದೆ, ವೃದ್ಧಾಪ್ಯದಲ್ಲಿರುತ್ತಾರೆ, ಇನ್ನು ಹೆಚ್ಚು ದುಡಿಯುವುದಕ್ಕೆ ಶರೀರದಲ್ಲಿ ರಕ್ತ ಇರುವುದಿಲ್ಲ, ಅಂತಹವರು ತಮಗೆ ಏನೋ ಸಾಯುವುದಕ್ಕೆ ಮೊದಲು ಬದುಕಬೇಕು ಎನ್ನುವಂತಹ ಆಸೆಗೆ, ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಸರ್ಕಾರದ ನೆರವನ್ನು ಆಶ್ರಯಿಸುತ್ತಾರೆ. ಅವರಿಗೆ ಇವತ್ತೇನು ನಾವು ಹಣವನ್ನು ಕೊಡುತ್ತಿದ್ದೇವೆ, ಅದು ಸಾಲದು. ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಬೇಕಾಗಿದ್ದರೆ, ಏನಾದರೂ ನ್ಯೂನತೆಗಳು ಇದ್ದರೆ, ಬಿಗಿ ಮಾಡಿ. ಅನರ್ಹರು ಸೇರಿಕೊಂಡಿದ್ದರೆ, ಅವರನ್ನು ತೆಗೆಯುವುದಕ್ಕೆ ಏನು ಬೇಕೋ ಅದನ್ನು ತಾವು ಮಾಡಿ. ಆದರೆ ಆ ವರ್ಗದ ಜನರಿಗೆ ನಾವೇನು ಹಣವನ್ನು ಕೊಡುತ್ತಿದ್ದೇವೆ, ಅದನ್ನು ಕನಿಷ್ಠ 100 ರೂಪಾಯಿಗಳಷ್ಟಾದರೂ ಹೆಚ್ಚಿಗೆ ಮಾಡಬೇಕು ಎಂದು ನಾನು ಆ ಜನರ ಪರವಾಗಿ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ :- ಸಾರ್, ಅದರ ಜೊತೆಗೆ ಏನು ಪ್ರಾಬ್ಲಂ ಆಗಿದೆ ಎಂದರೆ, desert ಮಾಡಿ ಹೋಗಿ ಬಿಟ್ಟಿರುತ್ತಾರೆ, ಮಕ್ಕಳು. ಮಕ್ಕಳಿದ್ದಾರೆ ಎನ್ನುವ ಒಂದೇ ಕಾರಣಕ್ಕೆ ಕೆಲವರಿಗೆ ಕೊಡುತ್ತಲೇ ಇಲ್ಲ. ಅವರು ಸಾಕುತ್ತಿಲ್ಲ. ಇಬ್ಬರೋ ಅಥವಾ ಮೂರು ಜನರೋ, ದಾಖಲೆ ಮೇಲೆ ಮಾತ್ರ ಮಕ್ಕಳಿರುತ್ತಾರೆ. ಅವರ್ಯಾರೂ ನೋಡಿಕೊಳ್ಳುವುದಿಲ್ಲ, ಅಂತಹವರಿಗೆ ವಿಶೇಷ ಪ್ರಕರಣಗಳೆಂದು ಭಾವಿಸಿ ಕೊಡಬೇಕು. ಎರಡನೆಯದಾಗಿ, ಅಲ್ಪ ಸ್ವಲ್ಪ ಕೃಷಿ ಜಮೀನು ಇದೆ ಎಂದರೆ reject ಮಾಡಿ ಬಿಡುತ್ತಾರೆ. ಅದರಿಂದ ಅವರಿಗೆ ಜೀವನ ಮಾಡುವುದಕ್ಕಾಗುವುದಿಲ್ಲ. ಅದೂ ಕೂಡ ಮಕ್ಕಳು ತೆಗೆದುಕೊಂಡು ಹೋಗಿ ಬಿಡುತ್ತಾರೆ. ಅಂತಹವುಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅವರ ಸಹಾಯಕ್ಕೆ ಸರ್ಕಾರ ಬರಬೇಕು.

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸರ್ಕಾರ ಬಹಳ ಮುಕ್ತ ಮನಸ್ಸಿನಿಂದ ಇದೆ. ಇದು ಎಲ್ಲರ ಅನುಭವಕ್ಕೆ ಬಂದಿರತಕ್ಕಂಥದ್ದೂ ಕೂಡ ಆಗಿದೆ. ಅವರು ಉತ್ತಮವಾದ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇಷ್ಟರಲ್ಲೇ ಅದರ ಬಗ್ಗೆ ಉತ್ತರ ಕೊಡುವ ಸಂದರ್ಭದಲ್ಲಿ ಆ ಬಗ್ಗೆ ಹೆಚ್ಚು ಹೇಳುತ್ತೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ವಿನಂತಿ. ಅವರು ಗೃಹ ಸಚಿವರೂ ಕೂಡ ಆಗಿದ್ದಾರೆ. ಇತ್ತೀಚಿಗೆ ಬೆಂಗಳೂರಿನಲ್ಲಿ ಈ posters ಬಹಳ ಜಾಸ್ತಿಯಾಗಿವೆ. ಯಾರ್ಯಾರದೋ ಹುಟ್ಟುಹಬ್ಬಗಳು! ಯಾವನು ಅವನು ಎಂಬುದು ನಮಗೆ ಗೊತ್ತೇ ಇಲ್ಲ. ನನಗೆ ಸ್ವಲ್ಪ ಕಣ್ಣು ಕರೆಕ್ಟಾಗಿ ಕಾಣುವುದಿಲ್ಲ. ನಾನು ಕನ್ನಡಕ ಹಾಕಿಕೊಳ್ಳುವುದು, ನೋಡುವುದು, ಇದೇನು ಸುಭಾಷ್‌ಚಂದ್ರಬೋಸ್‌ದು ಇರಬಹುದಾ? ಭಗತ್ ಸಿಂಗ್‌ದು ಇರಬಹುದಾ ಅಥವಾ ಇದೇನಾದರೂ ಮಾರ್ಕ್ಸ್‌ದು ಇರಬಹುದಾ? ಬಸವಣ್ಣನವರದ್ದು ಇರಬಹುದಾ?

ಅಂಬೇಡ್ಕರ್‌ರವರದು ಇರಬಹುದಾ ಎಂದು ನೋಡುವುದು. ಸಿ.ಎಂ.ಮನೆ ಮುಂದೆಯೇ ಹಾಕಿದ್ದಾರೆ, ಇವತ್ತು ಯಾವನದೊ ಒಬ್ಬನದು ನೋಡಿದೆ. ಡೆಪ್ಯುಟಿ ಸಿ.ಎಂ.ರವರ ಮನೆ ಮುಂದೆ ಕೂಡ ಹಾಕಿದ್ದಾರೆ. ಆಮೇಲೆ ಏನು ಮಾಡುತ್ತಾರೆ ಎಂದರೆ, ಪತ್ರಿಕೆಗೆ ಜಾಹೀರಾತು ಕೊಟ್ಟು ಬಿಡುತ್ತಾರೆ. ಮುಖ್ಯಮಂತ್ರಿಗಳ ಫೋಟೋ, ಸೋನಿಯಾ ಗಾಂಧಿಯವರ ಫೋಟೋ, ಉಪ ಮುಖ್ಯಮಂತ್ರಿಗಳ ಫೋಟೋ ಹಾಕಿಬಿಟ್ಟು, ಮಧ್ಯದಲ್ಲಿ ಅವನ life size ಫೋಟೋ ಹಾಕಿಬಿಟ್ಟು, ಅವರ ಹುಟ್ಟು ಹಬ್ಬಕ್ಕೆ ಶುಭಾಶಯಗಳು ಎಂದು ಹಾಕಿಸಿರುತ್ತಾರೆ. ಈ ಘನ ಪುರುಷರೆಲ್ಲಾ ಯಾರು? ಇವರು ಸಮಾಜಕ್ಕೆ ಸಲ್ಲಿಸಿದ ಸೇವೆ ಏನು? ಏನೂ ಗೊತ್ತಾಗುತ್ತಾ ಇಲ್ಲ. ಇದಕ್ಕೆ ಏನಾದರೂ ಒಂದು ತಡೆ ಕಂಡು ಹಿಡಿಯದೇ ಹೋದರೆ, ಈ ಮುಟ್ಠಾಳರನ್ನೆಲ್ಲಾ ನಾವು ಪಟ್ಟಿ ಮಾಡಿ, ಒಳಕ್ಕೆ ಕಳುಹಿಸದೇ ಹೋದರೆ, ಮಾನಸ್ಥರು ಯಾವಾಗಲಾದರೂ ಒಂದೊಂದು ಸಲ ನಾವು ಫೋಟೋ ಹಾಕಿಕೊಳ್ಳಬೇಕಾದರೆ, ನಾವು ಹೇಗೆ ಹಾಕಿಕೊಳ್ಳಬೇಕು ಎಂಬುದನ್ನು ನೀವೇ ಹೇಳಿ. ನಿಮ್ಮ ಹುಟ್ಟುಹಬ್ಬಕ್ಕೆ ನಿಮಗೊಂದು poster ಹಾಕಬೇಕೆಂದು ನನಗೆ ಆಸೆಯಾಗುತ್ತದೆ. ನನಗೆ ಭಯವೇನು ಗೊತ್ತೇ? ನಿಮ್ಮನ್ನೂ ಈ ಪಟ್ಟಿಗೆ ಎಲ್ಲಿ ಸೇರಿಸಿ ಬಿಡುತ್ತಾರೋ ಅಂತ. ನಿಮಗ್ಯಾರೂ poster ಹಾಕುವುದಿಲ್ಲ. ಹಾಕುವುದಾದರೆ ನಾನೇ ಹಾಕಬೇಕು. ಅದಕ್ಕೂ ನೋಡಿ ಇಲ್ಲಿ ತೊಂದರೆ ಬರುತ್ತದೆ. ಎಲ್ಲೆಲ್ಲಿ ಹಾಕುತ್ತಾರೆ ? ಯಾವ ಪೇಪರ್‌ನಲ್ಲಿ ನೋಡುತ್ತೀರಿ? Advertisement ಗೆ ದುಡ್ಡು ಎಲ್ಲಿಂದ ತರುತ್ತಾರೆ? ಕೆಲವು ಶಾಸಕರು ಮುಖ್ಯಮಂತ್ರಿಗಳನ್ನು ಮುತ್ತಿಕೊಂಡಿದ್ದಾರೆ. ಅವರನ್ನು ದಮ್ಮಯ್ಯ ಅನ್ನುತ್ತೇನೆ, ದಯವಿಟ್ಟು 10 ನಿಮಿಷ ಅವರನ್ನು ಬಿಡಿ. ಇಷ್ಟೊಂದು ಗಂಭಿರವಾಗಿ ನಾನು ಮಾತನಾಡುವಾಗಲೂ ಹೀಗೆ ಮಾಡಿದರೆ ಹೇಗೆ? ಆಮೇಲೆ ಬನ್ನಿ , ನಿಮ್ಮ ಕೆಲಸ ಏನೇನಿದೆಯೋ, ಎಲ್ಲವನ್ನೂ ಕೂಡ ನಾನೇ ಮಾಡಿಸಿಕೊಡುತ್ತೇನೆ!

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಅವರ ಭಾಷಣವನ್ನು ಆಲಿಸಬೇಕು. ಶಾಸಕರು ದಯಮಾಡಿ ಮುಖ್ಯಮಂತ್ರಿಗಳಿಗೆ disterb ಮಾಡಬಾರದು.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು poster ಬಗ್ಗೆ ಏನು ಹೇಳಿದರು, ಅದು ಬರೀ ಕಾಂಗ್ರೆಸ್‌ನವರಿಗೆ ಮಾತ್ರ ಅನ್ವಯಿಸುತ್ತದೆಯೇ ಎಂದು ನಾನು ಅವರಿಗೊಂದು clarification ಕೇಳುತ್ತಿದ್ದೇನೆ. ಏಕೆಂದರೆ ತಾವು ಹೇಳಿದಂತೆ, ಮುಖ್ಯಮಂತ್ರಿ, ಅವರ ಜೊತೆಗೆ ಸೋನಿಯಾ ಗಾಂಧಿಯವರು, ಮಧ್ಯದಲ್ಲಿ ಅವರ ಫೋಟೋ ಎಂದರೆ, it only applies to Congress.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ರಾಜೇಂದ್ರನ್‌ರವರೆ, ಹಾಗೇನೂ ಇಲ್ಲ. ಈ ತರಹದ crimes ಅನ್ನು commit ಮಾಡತಕ್ಕಂಥ tendency ಇರತಕ್ಕಂಥವರು ......

ಶ್ರೀ ಜೆ.ಸಿ.ಮಾಧುಸ್ವಾಮಿ: ಸಾರ್, ಒಂದು ನಿಮಿಷ. ಮುತ್ತಪ್ಪ ರೈ ಅವರದ್ದು, ಅವರ ಮನೆಯವರದ್ದು ಹಾಕಿ, ಅದರ ಪಕ್ಕಕ್ಕೆ ಸನ್ಮಾನ್ಯ ಮಂತ್ರಿಗಳಾದ ಚನ್ನಿಗಪ್ಪನವರದು ಹಾಕಿದ್ದಾರೆ ಸಾರ್, ನಾವು ಹೋಗುವ ರೋಡಿನಲ್ಲಿ. ನಾನು ಹುಡುಗಾಟಕ್ಕೆ ಹೇಳುತ್ತಿಲ್ಲ. ತಾವು ಅದನ್ನು ನೋಡಬೇಕು. ಪೀಣ್ಯಾದಲ್ಲಿ, ಯಶವಂತಪುರಂನಲ್ಲಿ ಮುತ್ತಪ್ಪ ರೈದು, ಅವರ ಮನೆಯವರದ್ದು ಫೋಟೋ ಹಾಕಿ, ಕೆಳಗೆ ಸಣ್ಣದಾಗಿ ಚೆನ್ನಿಗಪ್ಪನವರ ಫೋಟೋ ಹಾಕಿದ್ದಾರೆ ......

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಮಾಧುಸ್ವಾಮಿಯವರೇ, ಚನ್ನಿಗಪ್ಪನವರ ಜೊತೆಗೆ ಇನ್ನೊಬ್ಬರದ್ದೂ ಹಾಕಿದ್ದಾರೆ, ಅದನ್ನು ತಾವು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಬ್ಬ ಮಾಜಿ ರೌಡಿ 'ಅಭಿನವ ಕೆಂಪೇಗೌಡ ' ಎಂದು ಹಾಕಿಸಿಕೊಂಡಿದ್ದಾರೆ. ನಾವೇನು ಮಾಡುವುದಕ್ಕಾಗುತ್ತದೆ?

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಾನೇನು ಹೇಳುತ್ತೇನೆ ಎಂದರೆ, ಸಿದ್ದರಾಮಯ್ಯನವರು ಇದಕ್ಕೆ ಬಜೆಟರಿ ಪ್ರಾವಿಷನ್ ಮಾಡಬೇಕಾಗಿಲ್ಲ, ಮುಖ್ಯಮಂತ್ರಿಗಳು ಯಾರ ಹಂಗಿನಲ್ಲೂ ಇರಬೇಕಾಗಿಲ್ಲ. ಸಿಂಪಲ್ಲಾಗಿ ಇದಕ್ಕೆ ಒಂದು ಶಾಸನವನ್ನಾದರೂ ಮಾಡಿ ಇದನ್ನು ನಿಗ್ರಹಿಸತಕ್ಕಂಥ ಪ್ರಯತ್ನ ಮಾಡಬೇಕು. ಮಾನ್ಯ ರಾಜೇಂದ್ರನ್‌ರವರೇ, ನಿಮ್ಮ ಪ್ರಶ್ನೆಗೆ ನಾನೇನು ಹೇಳುತ್ತೇನೆ ಎಂದರೆ, ಈ tendency ಇರ ಕ್ಕಂಥವರು, ಈ ತರಹದ crimes ಮಾಡತಕ್ಕಂಥವರು, ಅವರಿಗೆ ಎಲ್ಲಿ ಹೋಗಿ ನುಸುಳಿಕೊಳ್ಳಬೇಕು ಎಂಬುದು ಗೊತ್ತು. ಬಿ.ಜೆ.ಪಿ.ಗೆ ಹೋಗಬೇಕಾ ? ಜೆ.ಡಿ.ಗೆ ಹೋಗಬೇಕಾ? ಜೆ.ಡಿ.(ಎಸ್)ಗೆ ಹೋಗಬೇಕಾ? ಕಾಂಗ್ರೆಸ್‌ಗೆ ಹೋಗಬೇಕಾ? ಆಯಾ ಸಂದರ್ಭಕ್ಕೆ ತಕ್ಕಂತೆ ಹೋಗುತ್ತಿರುತ್ತಾರೆ. ಆದುದರಿಂದ ಆ ಪಕ್ಷಗಳ ಮೇಲೆ ನಾವು ಆರೋಪಣೆ ಮಾಡುವುದಕ್ಕಾಗುವುದಿಲ್ಲ. ಇಂತಹವರ ಮೇಲೆ ನಮಗೆ ನಿಗಾ ಇರಬೇಕೆಂದು ನಾನು ಹೇಳಬೇಕು ಅಷ್ಟೆ. ಸಮಯ ಮತ್ತು ಸಂದರ್ಭಕ್ಕೆ ತಕ್ಕಂತೆ ಅವರು ಹೋಗುತ್ತಿರುತ್ತಾರೆ. ಅವರ ಮೇಲೆ ನಾವು ಎಲ್ಲಾದರೂ ಒಂದು ಕಡೆ ಕ್ರಮ ಜರುಗಿಸಿದರೆ, ಈ ಗೋಡೆಗಳೂ ಕೂಡ ಒಂದಷ್ಟು ನಾಜೂಕಾಗಿರುತ್ತವೆ, ಸ್ವಲ್ಪ ಅಂತಹ ಜನರಿಗೆ ಭಯ ಕೂಡ ಬರುತ್ತದೆ. ಬೇಕಾದರೆ ನೀವು ಈ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿದರೂ ಚಿಂತೆ ಇಲ್ಲ, ಇದನ್ನು ಮಾಡಬೇಕು ಎಂದು ನಾನು ಮನವಿ ಮಾಡುತ್ತೇನೆ. ನಾನು ಕೋಲಾರ ಜಿಲ್ಲೆಯಿಂದ ಬಂದಿದ್ದೇನೆ. ನಿನ್ನೆ ಕೂಡ ನಾನು ಸ್ವಲ್ಪ ಆವೇಶದಲ್ಲಿ ಮಾತನಾಡಿದೆ. ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳೆರಡನ್ನು 'ತೋಟಗಾರಿಕೆ ಜಿಲ್ಲೆ ' ಗಳೆಂದು ಡಿಕ್ಲೇರ್ ಮಾಡಲಾಗಿದೆ. ನಮ್ಮಲ್ಲಿ sprinklers ಗೆ ಮತ್ತು drip irrigation ಗೆ ಸಬ್ಸಿಡಿ ಕೊಡುತ್ತಾರೆ. ಅದು ಕೆಲವು ಸನ್ನಿವೇಶಗಳಲ್ಲಿ 100%, ಕೆಲವು ಸನ್ನಿವೇಶಗಳಲ್ಲಿ 50% ಇರುತ್ತದೆ. ಅತ್ಯಂತ ವಿಷಾದದಿಂದ ನಾನು ಈ ಸದನಕ್ಕೆ ತಿಳಿಸಬಯಸುವುದೇನೆಂದರೆ, ಇದುವರೆವಿಗೆ ಈ ಯೋಜನೆ ನಮ್ಮಲ್ಲಿ, ನಮಗೆ ಲಭ್ಯವಾಗಿಲ್ಲ. ನಮ್ಮ ರೈತರ್‍ಯಾರೂ ಹಾಕುವುದಕ್ಕೆ ಮುಂದೆ ಬಂದಿದ್ದಾರೆ ಅಥವಾ ಹಾಕಿದ್ದಾರೆ, ಅವರಿಗೆ ಹಣ ಬಂದಿಲ್ಲ. ನಾವು ಒಂದು ಕೇಳಿದರೆ ಅವರು ಹತ್ತು ಹೇಳುತ್ತಾರೆ. ಸ್ವತಃ ನನಗೇ ಸಿಕ್ಕಿಲ್ಲ. ನಾನು ವಿನಂತಿ ಮಾಡಿಕೊಳ್ಳುತ್ತೇನೆ, ನೀವು ನಮ್ಮಲ್ಲಿ ಒಂದು ಹೊಸ ಶಾಸನವನ್ನೇ ತೆಗೆದುಕೊಂಡು ಬನ್ನಿ. ನೀರನ್ನು ಖನಿಜ ಎಂದು ಡಿಕ್ಲೇರ್ ಮಾಡಿ, ನೀರು ಇಡೀ ರಾಜ್ಯದ ಸೊತ್ತು ಎಂದು ಡಿಕ್ಲೇರ್ ಮಾಡಿ, ನೀರು ಬಳಕೆ ಮೇಲೆ ನಿಮ್ಮ ಅಧಿಕಾರವನ್ನು ನೀವು ಇಟ್ಟುಕೊಳ್ಳಿ, wet crops ಮಾಡಕೂಡದು ಎಂದು ಹೇಳಿ. Recharging ಗೆ alternative ವ್ಯವಸ್ಥೆ ಇಲ್ಲದೆ. underground water exploitation ಇವತ್ತು ಆಗುತ್ತಿದೆ. ನಾವು ಹೀಗೆ ಹೋಗುತ್ತಾ ಹೋದರೆ ಹೇಗೆ? ಕೋಲಾರ ಜಿಲ್ಲೆಯೊಳಗೆ drip water sprinkler ಅನ್ನು compulsory ಮಾಡಬೇಕು, ಇಲ್ಲದಿದ್ದರೆ ನಾವು ಇಥಿಯೋಪಿಯಾ ಆಗತಕ್ಕಂಥ ಸಂಭವ ಇದೆ. ಈಗ ನಾವು 800–1000 ಅಡಿಗೆ ಹೋಗುತ್ತಿದ್ದೇವೆ. ಇವತ್ತು ನಡೆಯುತ್ತಿರತಕ್ಕಂಥ ಭೋರ್‌ವೆಲ್, ನಾಳೆ ನಡೆಯುತ್ತದೆ ಎನ್ನತಕ್ಕಂಥ ವಿಶ್ವಾಸ ನಮಗೆ

ಇಲ್ಲ. ಎಲ್ಲಿಯವರೆಗೆ ಪ್ರಕೃತಿ ಮೇಲೆ ನಾವು ಈ ಯುದ್ಧವನ್ನು ಸಾರಬೇಕು? ಸಹಿಸಿಕೊಂಡು ಹೋಗಬೇಕು? ಅದಕ್ಕೆ ಒಂದು ಖಾಸಗಿ ವಿಧೇಯಕವನ್ನೇ ಮಂಡನೆ ಮಾಡಬೇಕೆಂದು ನಾನು ತಯಾರು ಮಾಡಿಕೊಳ್ಳುತ್ತಿದ್ದೇನೆ. ಈಗ ಸಧ್ಯಕ್ಕೆ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನಾನು ನಿಂತಿರುವುದರಿಂದ ತಕ್ಷಣ ನಮಗೆ ರೈತರಿಗೆ ಸಿಗತಕ್ಕಂತಹ ಬೆನಿಫಿಟ್ ಎಂದರೆ ಉಪ ಮುಖ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ, ನಮ್ಮ ರೈತರಿಗೆ ಬರಬೇಕಾದ ಹಣ ಸ್ಪ್ರಿಂಕ್ಲರ್ ಮತ್ತು ಡ್ರಿಪ್ ಇರಿಗೇಷನ್ಗೆ ಬರತಕ್ಕಂಥದ್ದು ಅದನ್ನು ಕೂಡಲೇ ಕಂಪಲ್ಸರಿ ಆಗಿ ಬಿಡುಗಡೆ ಮಾಡುವುದು ಕೋಲಾರ ಜಿಲ್ಲೆ ಮಟ್ಟಿಗೆ ನೀರು ಬಳಕೆಯ ಮೇಲೆ ಸರ್ಕಾರ ಯಾವುದಾದರೂ ಒಂದು ರೀತಿ ಹತೋಟಿ ಇಟ್ಟುಕೊಳ್ಳದೆ ಹೋದರೆ ಕಷ್ಟವಾಗುತ್ತದೆ. ಈ ಒಂದು ಮಾತನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಅನೇಕ ಜನ ಮಾತನಾಡುವವರಿದ್ದಾರೆ, ನಾನೇ ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ ಹೋದರೆ ಕಷ್ಟವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ಪದೇ ಪದೇ ಏಳಬಾರದು. ಏಜೆನ್ಸಿ ರಿನೀವಲ್ ಮಾಡಿಲ್ಲವೆಂದು ಯಾರಿಗು ಸಬ್ಸಿಡಿ ರಿಲೀಸ್ ಆಗಿಲ್ಲ. ಡ್ರಿಪ್ ಇರಿಗೇಷನ್ ಬಗ್ಗೆ ತಾವು ಹೇಳುತ್ತೀರಿ ಎಂದು ಕಾಯುತ್ತಿದ್ದೆವು. ರೈತರಿಗೆ ನೇರವಾಗಿ ಕೊಡುವ ಸ್ಥಿತಿ ನಿರ್ಮಾಣವಾಗಬೇಕು. ಯಾರೋ 10 ಜನ ಏಜೆನ್ಸಿ ರಿನೀವಲ್ ಆಗಿಲ್ಲವೆಂದು ವರ್ಷ ಮುಗಿಯುತ್ತಾ ಬಂದರು ಡ್ರಿಪ್ ಸಬ್ಸಿಡಿ ರಿಲೀಸ್ ಆಗಿಲ್ಲ ಎನ್ನುವುದು ಯಾರಾದರೂ ಗಮನಿಸಬೇಕು.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಸಂಬಂಧಿಸಿದವರು ಯಾರಿದ್ದಾರೆ ಅವರು ನೋಟ್ ಮಾಡಿಕೊಳ್ಳುತ್ತಾರೆಂದು ನನಗನ್ನಿಸುತ್ತದೆ. ನಾನು ಸೂಕ್ಷ್ಮವಾಗಿ ಅಷ್ಟೇ ಮಾತನಾಡಿ, ಅದಕ್ಕೆ ಸಂಬಂಧಿಸಿದಂತೆ ಪಶು ಸಂಗೋಪನೆ, ನಮ್ಮಲ್ಲಿ ಪಶು ಸಂಗೋಪನೆ ಆಧರಿಸಿ ಜೀವನ ನಡೆಸತಕ್ಕಂತಹ ಅತಿ ಸಣ್ಣ ಕುಟುಂಬಗಳು ಬಹುಶಃ ಶೇಕಡ 40ಕ್ಕಿಂತ ಹೆಚ್ಚಿಗೆ ನಮ್ಮ ಜಿಲ್ಲೆಯಲ್ಲಿ ಇವೆ. ಅನೇಕ ಜನ ಹೆಣ್ಣು ಮಕ್ಕಳು ವಿಧವೆಯರು ಇದ್ದಾರೆ ಅವರು ತಮ್ಮ ಕುಟುಂಬ ಪೋಷಣೆಗೆ ಡೈರಿ ಮೇಲೆ ಆಧಾರ ಪಟ್ಟಿದ್ದಾರೆ. ನಾನು ಮೊನ್ನೆ ನನ್ನ ಗೆಳೆಯರಾದ ಮಿರಾಜುದ್ದೀನ್‌ರವರು ಉತ್ತರ ಕೊಡುವಾಗ ನಾನು ಸಿಟ್ಟಿಗೆದ್ದೆ. ನಮ್ಮ ಆಸ್ಪತ್ರೆಯಲ್ಲಿ ಬೇಕಾದ ಔಷಧಿ ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಪಶುವೈದ್ಯ ಚಿಕಿತ್ಸಾಲಯಗಳು ಇನ್ನೂ ಹೆಚ್ಚು ಬೇಕಾಗಿವೆ. ನಾವು ಇದರ ಕಡೆ ಗಮನ ಕೊಡದೆ ಹೋದರೆ ಇದನ್ನೇ ನೆಚ್ಚಿಕೊಂಡು ಜೀವನ ಮಾಡತಕ್ಕಂತಹವರು ನಮ್ಮವರು ಯಾರಿದ್ದಾರೆ ಅವರಿಗೆ ಕಷ್ಟವಾಗುತ್ತದೆ. ವಿಶೇಷವಾಗಿ ಹಂದಿ ಸಾಕಾಣಿಕೆ ಮಾಡತಕ್ಕಂತಹವರಿಗೆ ಇವತ್ತು ಲಾಸ್ ಆಗಿತ್ತಿದೆ. ಮಾರಾಟ ಮಾಡತಕ್ಕಂಥವರಿಗೆ ಲಾಭವಾಗುತ್ತಿದೆ. ಹಂದಿ ಸಾಕತಕ್ಕಂತಹವರು ಬೆಂಗಳೂರು ಸುತ್ತ ಮುತ್ತಲು ಇರತಕ್ಕಂತಹವರಿಗೆ ಹೋಟೆಲ್ ವೇಸ್ಟ್ ಇನ್ನೊಂದು ಸಿಗುತ್ತದೆ. ಸುಲಭದಲ್ಲಿ ಅವನು ಸಾಕಬಹುದು. ಬೆಂಗಳೂರಿನಿಂದ ಸ್ವಲ್ಪ ದೂರದಲ್ಲಿ ಹೋಗಿ ನಮ್ಮ ಹಳ್ಳಿಗಳ ಹತ್ತಿರ ಹಂದಿ ಸಾಕಾಣಿಕೆ ಮಾಡಬೇಕಾದರೆ ನಾವು ಎಲ್ಲಾ ಫೀಡ್ಸ್ ಕೊಂಡು ಕೊಳ್ಳಬೇಕಾಗುತ್ತದೆ. ದುಬಾರಿಯಾಗುತ್ತದೆ. ಮೆಕ್ಯಾನಿಕಲ್ ಸ್ಲಾಟರ್ ಹೌಸ್ ಇವರು ಇಟ್ಟರೆ ಆಗ ಹಂದಿ ಸಾಕುವವನು ಅಲ್ಲಿ ತಂದು ಹಂದಿ ಮಾರಾಟ ಮಾಡಿದರೆ ಅವರಿಗೆ ಪೂರ್ಣ ಲಾಭ ಸಿಗುತ್ತದೆ. ಇವತ್ತು ಹಂದಿ ಸಾಕತಕ್ಕಂತಹವರಿಗೆ ಶ್ರಮವಾಗುತ್ತಿದೆ. ಮೆಕ್ಯಾನಿಕಲ್ ಸ್ಲಾಟರ್ ಹೌಸ್‌ನಲ್ಲಿ ಬಂದು ಅದನ್ನು ಸ್ಲಾಟರ್ ಮಾಡಿ ತೆಗೆದುಕೊಂಡು ಹೋಗಿ ಸಾಸೇಜಸ್ ಮಾಡಿ ಮಾರುವವನಿಗೆ ಪೂರ್ಣ ಲಾಭ ಸಿಗುತ್ತಿದೆ.

ಯಾರೋ ಸ್ವಾಮಿಗಳು ಮೆಕಾನಿಕಲ್ ಸ್ಲಾಟರ್‌ಹೌಸ್ ಮಾಡುವುದಕ್ಕೆ ವಿರೋಧ ಮಾಡುತ್ತಾರೆ. ಅವರು ತಿನ್ನುವುದು ಬೇಡ. ನಾವು ಅವರ ಮಠದಲ್ಲಿ ಏನೂ ಸ್ಲಾಟರ್‌ಹೌಸ್ ಮಾಡುವುದಿಲ್ಲ. ಮೆಕಾನಿಕಲ್ ಸ್ಲಾಟರ್ ಹೌಸ್ ಬೇಡವೆಂದು ಹೇಳುವುದಕ್ಕೆ ಅವರು ಯಾರು? ಅವರು ಹಂದಿ ಸಾಕಿದ್ದಾರೆಯೇ? ಹಂದಿ ಸಾಕುವವರ ಕಷ್ಟ ಇವರಿಗೆ ಗೊತ್ತಿದೆಯಾ? The Government must take a bold initiative in this regard. It is my fervent appeal to the government. ಅನೇಕ ಜನ ಪಾಪ ಅವರು ಇಲ್ಲಿ ಸಂಘ ಮಾಡಿಕೊಂಡು ಬಂದು ಧರಣಿ ಮಾಡುವ ಹಾಗೆ ಇಲ್ಲ. ಅವರಿಗೆ ಸಂಘ ಮಾಡುವುದು ಗೊತ್ತಿಲ್ಲ. ಅವರಷ್ಟಕ್ಕೆ ಅವರೇ ಒಂದು ರೀತಿಯ ಸೈಲೆಂಟ್ ಸಫರಿಂಗ್ ಮಾಡುತ್ತಿದ್ದಾರೆ. ಇದು ಬರೀ ಹಂದಿ ಸಾಕಾಣಿಕೆಗೆ ಅಷ್ಟೇ ನಿಲ್ಲುವುದಿಲ್ಲ, ಕುರಿ ಸಾಕಾಣಿಕೆ ಕೂಡ ಇದು ಕಷ್ಟವಾಗುತ್ತದೆ. ಮೊನ್ನೆ ಬಕ್ರೀದ್ ಬಂದಾಗ ಮಧ್ಯವರ್ತಿಗಳಿಗೆ ಲಾಭವೋ ಲಾಭ? ಬಕ್ರೀದ್, ಕ್ರಿಸ್‌ಮಸ್ ಇವು ಬಂದಾಗ ಬಹಳ ದೊಡ್ಡ ಪ್ರಮಾಣದಲ್ಲಿ ಮಾರಾಟ ಆಗುತ್ತವೆ. ಕೆಲವರು ಅದೇ ಕೆಲಸವಾಗಿ ಸಿಂಧನೂರು ಮತ್ತು ರಾಯಚೂರು ಕಡೆಗೆ ಹೋಗಿ ಕುರಿ ತೆಗೆದುಕೊಂಡು ಬರುತ್ತಾರೆ. ಈ ಭಾಗದಲ್ಲಿ ಸಿಗುವುದಿಲ್ಲ. ಇದರ ವಿಚಾರದಲ್ಲಿ ಕೂಡ ಮೆಕಾನಿಕಲ್ ಸ್ಲಾಟರ್ ಹೌಸ್ ಪ್ರತಿ ಡಿಸ್ಟ್ರಿಕ್ಟ್‌ನಲ್ಲಿ ಮಾಡುವುದಕ್ಕೆ ವೆಟರ್ನರಿ ಡಿಪಾರ್ಟ್‌ಮೆಂಟ್‌ನವರು ಧೈರ್ಯ ಮಾಡಬೇಕೆಂದು ಮುಖ್ಯ ಮಂತ್ರಿಗಳು ಇದರಿಂದ ಶಾಶ್ವತವಾಗಿ ಚರಿತ್ರೆಯ ಒಂದು ಭಾಗವಾಗಿ ಉಳಿಯುತ್ತಾರೆ. ಅಸಂಘಟಿತರಾಗಿರತಕ್ಕಂಥವರು ಶ್ರಮದಿಂದ ದುಡಿಯತಕ್ಕಂತಹವರು ಆ ವರ್ಗದ ಜನರಿಗೆ ಇದು ನೆರವಾಗುತ್ತದೆ. ಅವರ ಮನಸ್ಸಿನಲ್ಲಿ ನೀವು ಶಾಶ್ವತವಾಗಿ ಉಳಿಯುತ್ತೀರಿ. ಒಂದು ಸಾರಿ ಮೆಕಾನಿಕಲ್ ಸ್ಲಾಟರ್ ಹೌಸ್ ಬಂದರೆ ಅಲ್ಲಿ ಅದನ್ನು ಪ್ಯಾಕೇಜ್ ಮಾಡುವುದು, ಹೊರಗಡೆ ಎಕ್ಸ್‌ಪೋರ್ಟ್ ಮಾಡುವುದು ಸುಲಭವಾಗುತ್ತದೆ. ನಮ್ಮ ರೈತರಿಗೆ ನಾಲ್ಕು ಕಾಸು ಬರುತ್ತದೆ. ಇವತ್ತು ಗುಲಾಬಿ ಕಳುಹಿಸುತ್ತಿದ್ದೇವೆ. ಹೀರೇಕಾಯಿ ಕಳುಹಿಸುತ್ತಿದ್ದೇವೆ. ನಾವು ಧೈರ್ಯವಾಗಿ ಇದನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಮುಂದೆ ಬರಬೇಕು. ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಪಾರವಾದ ಬೇಡಿಕೆ ಇದೆ. ಎಲ್ಲರಿಗೂ ಕೆಲಸ ಕೊಡಿಸಿ ಅಂದರೆ ಎಷ್ಟು ಜನರಿಗೆ ಕಂಡಕ್ಟರ್ ಮಾಡುತ್ತೀರಿ? ಎಷ್ಟು ಜನರಿಗೆ ವಿಲೇಜ್ ಅಕೌಂಟೆಂಟ್ ಮಾಡುತ್ತೀರಿ ಮತ್ತು ಎಷ್ಟು ಜನರಿಗೆ ಬಿಲ್ ಕಲೆಕ್ಟರ್ ಮಾಡುತ್ತೀರಿ? ಇದಕ್ಕಿಂತ ದೊಡ್ಡ ಉದ್ಯೋಗ ಇನ್ನೊಂದು ಬೇಕಾಗಿಲ್ಲ. ಇದಕ್ಕೆ ಹೊಂದಿಕೊಂಡಂತೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಅವರ ಸಿ ಅಂಡ್ ಡಿ ಕ್ಲಾಸ್ ಫಾರೆಸ್ಟ್‌ನಲ್ಲಿ ಕನಿಷ್ಟ ಹುಲ್ಲು ಬೆಳೆಯುವುದಕ್ಕೆ ನಮಗೆ ಅವಕಾಶ ಮಾಡಿ ಕೊಡಬೇಕು. ಇವತ್ತು ನಮ್ಮ ಅಗ್ರಿಕಲ್ಚರ್ ಯೂನಿವರ್ಸಿಟಿಯವರ ಹೊಸ ಸಂಶೋಧನೆಯ ಫಲ ಮತ್ತು ಬೇರೆಯವರು ಮಾಡಿರತಕ್ಕಂಥದ್ದರ ಫಲ, ಅನೇಕ ಹೊಸ ತಳಿಯ ಹುಲ್ಲು ಬಂದಿದೆ. ಜಮೀನು ಇಲ್ಲದೆ ಇರುವವರು ಹಸು ಇಟ್ಟುಕೊಂಡಿರತಕ್ಕವರಿಗೆ ಗ್ರಿನ್ ಫಾರೆಸ್ಟ್ ಸಿಗುವುದಿಲ್ಲ. ಅಂತಹವರಿಗೆ ಅವರೇ ಮಾರ್ಕೆಟ್ ಮಾಡಿಕೊಡಬಹುದು. ಬಹಲ ದಿವಸಗಳಿಂದ ಹೇಳುತ್ತಿದ್ದೇನೆ, ಸಿ ಅಂಡ್ ಡಿ ಕ್ಲಾಸ್ ಫಾರೆಸ್ಟ್ ಅಲ್ಲಿ ಏನೂ ಇಲ್ಲ. ಸುಮ್ಮನೆ ಖರ್ಚು ತೋರಿಸುತ್ತಾರೆ. ಅಷ್ಟು ಗುಂಡಿ ಹೊಡೆಯುತ್ತಾರೆ, ಆ ಹಣ ತೆಗೆದುಕೊಂಡು ಹೋಗುತ್ತಾರೆಯೇ ಹೊರತು ಯಾರಿಗೂ ಪ್ರಯೋಜನ ಇಲ್ಲ. ಇಲಾಖೆಯವರು ಪ್ರಗತಿ ತೋರಿಸುವುದಿಲ್ಲ, ಖರ್ಚು ತೋರಿಸಿತ್ತಾರೆ. ಇದನ್ನು ಕನಿಷ್ಟ ಪಂಚಾಯಿತಿಗಳಿಗೆ ಹ್ಯಾಂಡ್‌ಓವರ್

ಮಾಡಿ ಸಿ ಅಂಡ್ ಡಿ ಕ್ಲಾಸ್ ಫಾರೆಸ್ಟ್ ಏನಿದೆ, hand it over to the respective panchayats and taluk panchayats. ಅವರೇ ಹುಲ್ಲನ್ನು ಬೆಳೆಯಲು ಇದರಿಂದ ರೈತರಿಗೆ ಹುಲ್ಲು ಬೆಳೆಯಲಿಕ್ಕೆ ಅನುಕೂಲವಾಗುತ್ತದೆ ಅನ್ನುವ ಮಾತನ್ನು ಹೇಳುತ್ತೇನೆ. ಇನ್ನು ಮೀನುಗಾರಿಕೆ ಬಗ್ಗೆ ಹೇಳಬೇಕೆಂದರೆ, ಗೆಳೆಯರಾದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಇದ್ದಾಗ ಸ್ವಲ್ಪ ಕೆಲಸ ಇತ್ತು. ನಾನು ಇನ್‌ಲ್ಯಾಂಡ್ ಫಿಶರೀಸ್ ಬಗ್ಗೆ ಮಾತ್ರ ಮಾತನಾಡುತ್ತೇನೆ. ಇನ್‌ಲ್ಯಾಂಡ್ ಫಿಶರೀಸ್ ಯಾವ ಪ್ರಮಾಣದಲ್ಲಿ ನಾವು ಪ್ರೋತ್ಸಾಹಿಸಬೇಕಾಗಿತ್ತು, ಆ ಪ್ರಮಾಣದಲ್ಲಿ ಪ್ರೋತ್ಸಾಹಿಸಿಲ್ಲ. ಅವತ್ತಿನಿಂದ ಇವತ್ತಿನವರೆಗೆ ಎಷ್ಟು ಹೊತ್ತು ಕೇಳಿದರೂ ರಾಹು ಇದೆ, ಕಟ್ಲಾ ಇದೆ ಎಂದು ಹೇಳುತ್ತಾರೆ. ಮುರನೇ ವರೈಟಿ ಇಲ್ಲವೇ ಇಲ್ಲ. ಏಕೆ ಹೀಗೆ ಆಗಿದೆ, ಹೊಸ ತಳಿಗಳು ಬಂದಿಲ್ಲವಾ? ನಮ್ಮಲ್ಲಿ ಮಳೆ ಬಂದಾಗ ಕೆರೆ ಕುಂಟೆಗಳಲ್ಲಿ ಕಲ್ಯಾಣಿಗಳಲ್ಲಿ ಅಲ್ಲಲ್ಲಿ ಪಂಚಾಯಿತಿಗಳಲ್ಲಿ ಯುವಕ ಸಂಘಗಳಿಗೆ ಅವಕಾಶ ಮಾಡಿ ಕೊಟ್ಟರೆ ಒಂದು ಅಷ್ಟು ಹಣ ಸಂಪಾದನೆ ಮಾಡಬಹುದು. ಸ್ಥಳೀಯವಾಗಿ ಇದನ್ನು ಉತ್ಪಾದನೆ ಮಾಡತಕ್ಕಂತಹ ಅಭ್ಯಾಸ ಇರತಕ್ಕಂತಹ ಜನರಿಗೆ ಹೆಚ್ಚು ದುಬಾರಿ ಇಲ್ಲದೆ ಬಹಳ ಯೋಗ್ಯವಾದ ಆಹಾರ ಕೂಡ ಸಿಗುತ್ತದೆ. ಮೀನುಗಾರಿಕೆ ವಿಚಾರ ಏನು ಹೇಳಿದ್ದಾರೆ ಇದು ಸಂಪೂರ್ಣ ಸಮಾಧಾನ ತರತಕ್ಕಂಥದ್ದು ಅಲ್ಲ. ಮೀನುಗಾರಿಕೆ ವಿಚಾರದಲ್ಲಿ ವಿಶೇಷವಾಗಿ ಒಳನಾಡು ಮೀನುಗಾರಿಕೆ, ಇನ್‌ಲ್ಯಾಂಡ್ ಫಿಶರೀಸ್ ಬಗ್ಗೆ ಮುಖ್ಯ ಮಂತ್ರಿಗಳು ಸ್ವತಃ ಆಸಕ್ತಿ ವಹಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಯಾವ ವರ್ಗದ ಜನರ ಬಗ್ಗೆ ಮಾತನಾಡುತ್ತೇನೆ ಅದು ಹಂದಿ ಆಗಬಹುದು. ಮೀನು ಆಗಬಹುದು ಮತ್ತು ಪಶು ಸಂಗೋಪನೆ ಆಗಬಹುದು. ಇವರು ಅಸಂಘಟಿತರು, ಶೋಷಿತರು. ಈ ವರ್ಗಗಳ ಪ್ರತಿನಿಧಿಗಳಾಗಿ, ಆಶಾಕಿರಣವಾಗಿ ಇವತ್ತು ಸರ್ಕಾರ ನಡೆಸುತ್ತೇವೆಂದು ಬಂದಿದ್ದೀರಿ. ನೀವು ಆ ವರ್ಗಗಳ ನೇತಾರತ್ವವನ್ನು ವಹಿಸಿಕೊಂಡಿದ್ದೀರಿ. ಅವರಿಗೆ ಏನಾದರೂ ನಿಮ್ಮ ನೆನಪು ಉಳಿಯತಕ್ಕಂತಹ ಸಹಾಯ ಆಗಬೇಕಾದರೆ ಈ ಇಲಾಖೆಗಳಲ್ಲಿ ನಾನು ಕೊಡತಕ್ಕಂತಹ ಸಲಹೆಗಳ ಬಗ್ಗೆ ಹಾಗೂ ಇನ್ನಿತರ ಸದಸ್ಯರು ಕೊಡುವ ಸಲಹೆಗಳನ್ನು ಆಧಾರವಾಗಿಟ್ಟುಕೊಂಡು ಪುನಶ್ಚೇತನಗೊಳಿಸುವುದು ಇಲಾಖೆಗಳ ಬಗ್ಗೆ ಆ ವರ್ಗದ ಜನರಿಗೆ ಪ್ರೀತಿ ವಿಶ್ವಾಸ ನಂಬಿಕೆ ಹುಟ್ಟಿಸಿದರೆ ಆಗ ಸರ್ಕಾರ ಯಶಸ್ಸು ಸಾಧಿಸಿದ ಹಾಗಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಾರೆ ಎನ್ನತಕ್ಕಂತಹ ವಿಶ್ವಾಸವನ್ನು ನಾನು ಹೊಂದಿದ್ದೇನೆ. ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಇಷ್ಟನ್ನೇ ಹೇಳುತ್ತೇನೆ, ಮೊದಲಬಾರಿಗೆ ದಿವಂಗತ ಅಬ್ದುಲ್ ನಜೀರ್‌ಸಾಬ್‌ರವರಿಗೆ ಹುಚ್ಚು ಹಿಡಿದಿತ್ತು. ಆತನನ್ನು ಬಹಳ ಜನ ಲೇವಡಿ ಮಾಡಿದರು. ನಾಗರತ್ನಮ್ಮನವರ ಸೆರಗು ಹಿಡಿದುಕೊಂಡು ಹಿಂದುಗಡೆಯಿಂದ ಬರುತ್ತಾನೆ, ಯಾವ ಚುನಾವಣೆ ಫೇಸ್ ಮಾಡಿದ್ದಾನೆ ಎಂದು ಹೇಳಿದರು. ನಾವು ಬಿಟ್ಟು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆ ವಿಧೇಯಕವನ್ನು ಈ ಸದನದಲ್ಲಿ ಪಾಸ್ ಮಾಡಬೇಕೆಂದರೆ, ಶ್ರೀ ಮಾನ್ ಎಂ.ಪಿ.ಪ್ರಕಾಶ್‌ರವರು ಇದ್ದಾರೆ, ಅತ್ಯಂತ ಆತಂಕಕಾರಿ ಕ್ಷಣಗಳು ಉಂಟಾಯಿತು. ಪಾಸ್ ಆಗುತ್ತದೋ ಇಲ್ಲವೋ, ಬಿದ್ದು ಹೋಗುತ್ತದೆಯೊ ಏನೋ ಎನ್ನುವ ಸ್ಥಿತಿಗೆ ಬಂದಿತ್ತು. ಪಾಸ್ ಆಗಿ ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ರಚನೆ ಮಾಡಿದ ಮೇಲೆ ಚುನಾವಣೆ ಘೋಷಣೆ ಆಗಿ ಫಲಿತಾಂಶ

ಬಂದ ಮೇಲೆ ಕೆಲವು ಕಡೆ ರಾಜಕೀಯವಾಗಿ ಅದು ಏರುಪೇರಾಯಿತು. ಕೆಲವರು ಗೆಲ್ಲುವುದಕ್ಕೆ ಆಗಲಿಲ್ಲ, ಕೆಲವರು ಸೋತರು. ತಕ್ಷಣ ಆಗಿನ ಶಾಸಕಾಂಗ ಪಕ್ಷದಲ್ಲಿ ಆಡಳಿತ ಪಕ್ಷದಲ್ಲಿ ಒಂದು ದೊಡ್ಡ ಪ್ರತಿಭಟನೆ ಪ್ರಾರಂಭ ಆಯಿತು. ಆ ಎಲ್ಲಾ ಅಧಿಕಾರವನ್ನು ನಾವು ಮಂಡಲ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಿದರೆ ನಾವು ಶಾಸಕರು ಏಕೆ ಇರಬೇಕು ಎಂದು ಹೇಳಿದರು. ಒಂದು ಕಡೆ ಶಾಸಕರು ಒಂದು ದೊಡ್ಡ ಗುಂಪು ನಾವು ರಾಜೀನಾಮೆ ಕೊಡುತ್ತೇವೆಂದು, ಮತ್ತೊಂದು ಕಡೆ ಇದನ್ನು ಏನಾದರೂ ಹೆಚ್ಚು ಕಡಿಮೆ ಮಾಡಿದರೆ ನಾನು ರಾಜೀನಾಮೆ ಕೊಡುತ್ತೇನೆಂದು ನಜೀರ್‌ಸಾಬ್‌ರವರು. ಕೊನೆಗೆ ಏನೋ ಮಾಡಿ ಖಾಜಿ ನ್ಯಾಯಕ್ಕೆ ಬಂದು ಕೆಲವು ಪಂಚಾಯಿತಿಗಳು ಅಲ್ಲ, ಎಲ್ಲಾ ಪಂಚಾಯಿತಿಗಳಲ್ಲಿ ಆ ಜಿಲ್ಲೆಯ ಜನಸಂಖ್ಯೆಯ ಶೇಕಡ ಒಂದರಷ್ಟು ಕಡಿಮೆ ಇರತಕ್ಕಂತಹ ಜನ ಯಾರಿದ್ದಾರೆ ಅನ್ ರೆಪ್ರಸೆಂಟೆಡ್ ಎಂದು ಹೇಳಿ ಅವರಿಂದ ಇಬ್ಬರನ್ನು ನಾಮಿನೇಟ್ ಮಾಡುವುದು. ಕೆಲವರಿಗೆ ಆ ಬ್ಯಾಲೆನ್ಸ್ ಅಡ್ಜಸ್ಟ್ ಆಯಿತು ಅದು ಅಲ್ಲಿಗೇ ನಿಂತು ಹೋಯಿತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ದಿವಂಗತ ದೇವರಾಜ್ ಅವರು ಭೂಸುಧಾರಣಾ ಶಾಸನವನ್ನು ಈ ವಿಧಾನಸಭೆಯಲ್ಲಿ ಮಂಡಿಸಿ ಅದನ್ನು ಶಾಸನವಾಗಿ ತರಬೇಕಾದರೆ ಅದನ್ನು ಅನುಷ್ಠಾನಕ್ಕೆ ತರಬೇಕಾದರೆ ನಾನಾ ರೀತಿಯಲ್ಲಿ ಜನರ ಶಾಪಕ್ಕೆ ಒಳಗಾಗಿದ್ದಾರೆ. ವಾಚಾಮಗೋಚರ ಬೈಯ್ದಿದ್ದಾರೆ. ಆದರೆ ಶತಶತಮಾನಗಳಿಂದ ಶೋಷಣೆಗೆ ಒಳಗಾದವರು ಸಂತೋಷವಾಗಿದ್ದಾರೆ. ಬಯ್ಯತಕ್ಕಂಥ ಸಂಖ್ಯೆ, ವರ್ಗ, ಫಲಾನುಭವಿಗಳ ಸಂಖ್ಯೆ ಮತ್ತು ವರ್ಗ ನಾವು ಯಾವದೇ ಒಂದು ಸುಧಾರಣೆ ಕ್ರಮವನ್ನು ತೆಗೆದುಕೊಂಡಾಗ ಫಲಾನುಭವಿಗಳು ಯಾರಿರುತ್ತಾರೆ ಅವರು ಮೂಕರು, ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅವರು ಎಲ್ಲೋ ಒಂದು ಕಡೆ ಇರುತ್ತಾರೆ. ನಮ್ಮ ಆದ್ಯ ಕರ್ತವ್ಯ ಆ ವರ್ಗದ ಜನರ ಬೇಡಿಕೆಗಳನ್ನು ನಾವು ನಮ್ಮ ಮನಸ್ಸಿನಲ್ಲೇ ಇಟ್ಟುಕೊಂಡು ನಮ್ಮದೆಂದು ನಾವು ಮಾಡಬೇಕಾಗುತ್ತದೆ. ವಿಕೇಂದ್ರಿಕರಣ ಎಂದು ಹೇಳಿದರೆ ನಾವು ನಮ್ಮ ತಲೆ ಕಡಿದುಕೊಂಡು ಅವರಿಗೇನೋ ಕೊಡುತ್ತಿದ್ದೇವೆಂದು ಅಲ್ಲ, ಕನಿಷ್ಟ ಪಕ್ಷ ಅಲ್ಲಿ ತಮ್ಮನ್ನು ತಾವೇ ಪರಿಪಾಲನೆ ಮಾಡಿಕೊಳ್ಳುವುದಕ್ಕೆ, ಅಲ್ಲಿ ಒಂದು ಚರಂಡಿ ಹೋಗಿದ್ದರೆ, ಅದರ ಕೆಲಸ ಮಾಡಿಕೊಳ್ಳುವುದಕ್ಕೆ, ಒಂದು ಗೋಡೆ ಬಿದ್ದು ಹೋದರೆ ಕಟ್ಟಿಕೊಳ್ಳುವುದಕ್ಕೆ, ಒಂದು ಅಗತ್ಯವಾಗಿ ರಸ್ತೆ ರಿಪೇರಿ ಮಾಡಿಕೊಳ್ಳುವುದಕ್ಕೆ ಅವರನ್ನು ನಾವೇ ನಂಬದೆ ಹೋದರೆ, ಅವರಿಗೆ ನಾವು ಅಧಿಕಾರವನ್ನು ಕೊಡದೆ ಹೋದರೆ, ಅವರನ್ನು ಆ ಕೆಲಸಕ್ಕೆ ತಯಾರು ಮಾಡದೆ ಹೋದರೆ, ನಮ್ಮನ್ನು ಅವರು ಇಲ್ಲಿಗೆ ಕಳುಹಿಸಿದ್ದಾರೆ. ಎಷ್ಟು ದಿವಸ ನಾವು ಇಲ್ಲೆ ಇರುತ್ತೇವೆ? ನಮ್ಮ ನಂತರ ಇನ್ನೊಬ್ಬರು ಬರಬೇಕಲ್ಲಾ, ತಯಾರಾಗಬೇಕಲ್ಲಾ. ಆ ದೃಷ್ಟಿಯಿಂದ ಮಂಡಲ ಪಂಚಾಯತ್ ಆಗಿನ ಜಿಲ್ಲಾ ಪರಿಷತ್ತುಗಳಿಗೆ ಏನು ಅಧಿಕಾರ ಇತ್ತು, ಈ ಸದನದಲ್ಲಿ ಅನೇಕ ಜನ ಜಿಲ್ಲಾಪರಿಷತ್ತು ಅಧ್ಯಕ್ಷರಾಗಿದ್ದವರು, ಸದಸ್ಯರಾಗಿದ್ದವರು ಬಂದಿದ್ದಾರೆ ಎಂದು ಕಾಣುತ್ತದೆ. ಇವತ್ತು ವಿಕೃತಗೊಂಡಿದೆ. ಇವತ್ತು ಅಧಿಕಾರಿಗಳಿಗೆ ಹೆಚ್ಚು ಅಧಿಕಾರ ಇದೆ. ಅಧಿಕಾರೇತರರು ಯಾರಿದ್ದಾರೆ, ಜನಪ್ರತಿನಿಧಿಗಳು ಯಾರಿದ್ದಾರೆ, ಈ ಸಂಸ್ಥೆಗಳಲ್ಲಿ ಅವರಿಗೆ ಪುನಃ ಹಿಂದಿನ ವ್ಯವಸ್ಥೆಯಲ್ಲಿ ಇದ್ದಂತಹ ಅಧಿಕಾರವನ್ನು ಪ್ರದತ್ತ ಮಾಡಬೇಕು. ಬರೀ ಅಧಿಕಾರವನ್ನು ಕೊಟ್ಟರೆ ಸಾಲುವುದಿಲ್ಲ, ಸಂಪನ್ಮೂಲಗಳ ಸಹಿತ ಅಧಿಕಾರವನ್ನು ಕೊಡ ಬೇಕಾಗುತ್ತದೆ. ಅವರಿಗೆ, ನೀವು ಬಸ್ಸು ನಡೆಸಿರಿ, ಹಾಸ್ಪಿಟಲ್ ನಡೆಸಿರಿ ಎಂದು ಹೇಳಬೇಡಿ . ಅವರ

ಊರ ಆಡಳಿತವನ್ನು ಆ ಪಂಚಾಯತ್ ವ್ಯಾಪ್ತಿಯೊಳಗೆ ಬರತಕ್ಕಂಥ ಅವರ ಇತಿಮಿತಿಯೊಳಗೆ ಇರತಕ್ಕಂಥ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಅವರನ್ನು ಶರಬೇತು ಮಾಡಿ. ಆಗ ವಿಕೇಂದ್ರಿಕರಣದ ಬಗ್ಗೆ ವಿಶ್ವಾಸ ಮತ್ತು ಗೌರವ ಬರುತ್ತದೆ. ಈಗ ಏನಾಗಿದೆ ಪರಸ್ಪರ ಒಂದು ರೀತಿಯಾಗಿ ಅವರು ತಪ್ಪುಗಳನ್ನು ಮಾಡುತ್ತಾರೆ. ನಾವು ಬಯ್ಯುತ್ತೇವೆ. ನಮ್ಮ ಪರ್ಸನಲ್ ಎಕ್ಸ್‌ಪಿರೀಯನ್ಸ್ ಬೇರೆ ಆಗಿದೆ. ನಾವು ಹೇಳೋದು ಒಂದು, ಮಾಡೋದು ಒಂದು ಇರು ಎಲ್ಲೋ ಒಂದು ಕಡೆ ಹಳಿ ತಪ್ಪುತ್ತಿದೆ. ಅದು ಲಾಸ್ಟ್‌ಗೆ ಎಲ್ಲಿ ಹೋಗಬಹುದು ಎಂದರೆ ಯಾರು ವಿಕೇಂದ್ರಿಕರಣದ ವಿರುದ್ಧ ಇದ್ದಾರೆ, ಅವರು ಇದರ ಪೂರ್ಣ ಲಾಭವನ್ನು ಪಡೆದುಕೊಂಡು ಈ ಸಿದ್ಧಾಂತ ಸರಿಯಿಲ್ಲವೆಂದು ಹೇಳತಕ್ಕಂಥ ಹಂತ ತಲುಪಬಹುದು. ಅದು ಆಗಬಾರದು. ಅವುಗಳಿಗೆ ಹೆಚ್ಚು ಶಕ್ತಿಯನ್ನು ತುಂಬಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತಿದ್ದೇನೆ. ಇನ್ನು ಸಹಕಾರ ಸಂಸ್ಥೆಗಳು, ಮಾನ್ಯ ಎಸ್‌ಎಸ್.ಪಾಟೀಲ್‌ರವರು ಇಲ್ಲಿದ್ದಾರೆ. ನಾನು ಸಭಾಧ್ಯಕ್ಷನಾಗಿದ್ದಾಗ ಅವರು ಸಹಕಾರ ಸಚಿವರಾಗಿದ್ದರು. ಮೈಸೂರಿನಲ್ಲಿ ಒಂದು ಕಡೆ ನನಗೂ ಅವರಿಗೂ ವಾದ ವಿವಾದವಾಯಿತು. ಸಹಕಾರ ಸಂಸ್ಥೆಗಳಲ್ಲಿ ಎಲ್ಲಿಯವರೆಗೆ ದೇಶದ ಬಹು ಪಾಲು ಜನರನ್ನು ಸದಸ್ಯರನ್ನಾಗಿ ಮಾಡುವುದಿಲ್ಲ, ನಾವು ಗ್ರಾಮ ಮಟ್ಟದಲ್ಲಿ ಇರತಕ್ಕಂಥ ಸಹಕಾರಿ ಸಂಘಗಳನ್ನು, ಅವರನ್ನು ಒಳಪಡಿಸಿಕೊಂಡು ನಡೆಸುವುದಿಲ್ಲ ಅಲ್ಲಿಯವರೆಗೆ ಸಹಕಾರ ಚಳುವಳಿ ಕೂಡ ಯಾವುದೋ ಒಂದು ಪ್ರತಿಷ್ಠಿತ ವರ್ಗದ ಚಳುವಳಿಯಾಗಿರುತ್ತದೆಯೋ ಹೊರತು ಇಡೀ ಸಮುದಾಯಕ್ಕೆ ಅದು ವಿಸ್ತರಿಸುವುದಿಲ್ಲ. ಇವತ್ತು ನಮ್ಮಲ್ಲಿ ಸಹಕಾರ ಸಂಘಗಳ ಸದಸ್ಯರ ಸಂಖ್ಯೆ, ಪಡೆದಿರುಕೊಂಡಿರತಕ್ಕಂಥ ಸಾಲದ ಮೊತ್ತ, ಅದರಿಂದ ಪ್ರಯೋಜನವಾಗಿರತಕ್ಕಂಥ ಕುಟುಂಬಗಳ ಸಂಖ್ಯೆ, ರಾಜ್ಯದ ಒಟ್ಟು ಜನಸಂಖ್ಯೆ ಲೆಕ್ಕ ಹಾಕಿಕೊಂಡಾಗ ನಾವು ಎಲ್ಲೋ ಒಂದು ಕಡೆ ಎಡವಿದ್ದೇವೆ ಎಂದು ಮೇಲ್ನೋಟಕ್ಕೆ ಒಪ್ಪಿಕೊಳ್ಳುತ್ತೇವೆ. ನಾನು ಸಹಕಾರ ತತ್ವವನ್ನು ವಿರೋಧಿಸುತ್ತಿಲ್ಲ. ಅದರ ಪರವಾಗಿ ಇದ್ದೇನೆ. ಚೈನಾ ದೇಶದಲ್ಲಿ commune system ಇದೆ. ಆ ಭಾಗದಲ್ಲಿ ಇರತಕ್ಕಂಥ ಜನ ಏನು communes ಪೊಸಿಷನ್‌ನಲ್ಲಿ ಅದರ ಜಾಗಕ್ಕೆ ನಮ್ಮ ಸಹಕಾರ ಸಂಘಗಳು ಬರುವುದಾದರೆ ಅವುಗಳಂತೆ ಅತ್ಯಂತ ಜನಪ್ರಿಯವಾಗುತ್ತದೆ. ಒಂದು ಸಹಕಾರ ಸಂಘ, ಮತ್ತೊಂದು ಗ್ರಾಮ ಪಂಚಾಯತ್, ಇವೆರಡು ಒಂದಕ್ಕೊಂದು ಕಾಂಪ್ಲಿಮೆಂಟರಿಯಾಗಿ ಕೆಲಸ ಮಾಡಿದಾಗ ನಾವು ಯಾವ ಡೀಸೆಂಟ್ರಲೈಸೇಷನ್ ಎಂದು ಬಯಸುತ್ತಿದ್ದೇವೋ, ಯಾವ ಶುದ್ಧ ಆಡಳಿತವನ್ನು ಬಯಸುತ್ತಿದ್ದೇವೋ, ಅದು ಎಮರ್ಜ್ ಆಗುತ್ತದೆ. ಇವತ್ತು ಪಂಚಾಯತಿಗಳಿಗೆ ಸಹಕಾರ ಸಂಘಗಳಿಗೆ ಸಂಬಂಧ ಇಲ್ಲ. ಅದು ಆಗಬಾರದು ಎನ್ನುವ ಮಾತನ್ನು ಹೇಳುತ್ತಾ ಸಹಕಾರ ಸಂಘಗಳಲ್ಲಿ ಸಹಕಾರಿ ಚಳುವಳಿಯ ವ್ಯಾಪ್ತಿಯಲ್ಲಿ ಹೆಚ್ಚು ಜನರನ್ನು ತೊಡಗಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಪ್ರೋತ್ಸಾಹ ಕೊಟ್ಟು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಕೆರೆಗಳ ಜೀರ್ಣೋದ್ಧಾರ ವಿಚಾರ ಹೇಳಿದ್ದೇನೆ. ನಾನು ಕೆರೆಗಳ ಬಗ್ಗೆ ಹೇಳಿದ್ದೆ, ನೀವು ಇದಕ್ಕೆ ಒಂದು ಸಪರೇಟ್ ಆಗಿರತಕ್ಕಂಥ ಆಕ್ಟ್‌ನ್ನು ಮಾಡದೇ ಹೋದರೆ..

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಿಮ್ಮ ಭಾಷಣವನ್ನು ನಾವು ಬಹಳ ನಿರೀಕ್ಷೆ ಮಾಡಿಕೊಂಡು ಕುಳಿತಿದ್ದೇವೆ, ಆರಂಭದಲ್ಲಿ ಇದು ಎಲ್ಲೋ ಹೋಗುತ್ತದೆಂದು ಕಾಯುತ್ತಾ ಕುಳಿತಿದ್ದೇವೆ. ನಾವು ಹೊರಗೆ ಹೋಗುವುದಕ್ಕೆ ತಯಾರಾಗಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಈಗ ಕಾಡಿಗೆ ಹೋಗಿದ್ದೆ, ಮೀನಿಗೆ ಹೋಗಿದ್ದೆ, ಹಂದಿಯನ್ನು ಸಾಕಿದೆ. ಕೆರೆಗೆ ಬಂದು ಬಿದ್ದಿದ್ದೇನೆ. ಹಳ್ಳಿಯಲ್ಲಿ ಇದೆ ತಾನೇ ಇರುವುದು?

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ನಮ್ಮನ್ನು ತೇಲಿಸುವ ಭಾಷಣ ಮಾಡಿ ನೀವೇ ಬಿದ್ದು ಹೋದರೆ ನಾವು ಹೇಗೆ ತೇಲುವುದು?

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಇಲ್ಲ ನಾನು ನಿಮ್ಮನ್ನು ಬಿಟ್ಟು ಬೀಳುವ ಪ್ರಶ್ನೆ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅದಕ್ಕೆ ನಾವು ನಿಮ್ಮ ಮೇಲೆ ಬಿದ್ದು ಬಿಡುತ್ತೇವೆ. ಸ್ವಲ್ಪ ಮೇಲೆ ಬರುವುದಾಗಲೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಈಗ ನಮ್ಮನ್ನೆಲ್ಲಾ ಎತ್ತುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಬಿದ್ದರೆ ಎಲ್ಲರೂ ಒಟ್ಟಿಗೆ ಬೀಳೋಣ.

ಶ್ರೀ ವಾಟಾಳ್ ನಾಗರಾಜ್: ನಾವು ಅಷ್ಟೊತ್ತಿನಿಂದ ಕೇಳುತ್ತಿದ್ದೇವೆ, ಇನ್ನೂ ಮೇಲೆ ಹೋಗುತ್ತದೆ ಏನೋ ಎಂದು, ನೀವು ಈಗ ಕೆರೆಗೆ ಬರುತ್ತಿದ್ದೀರಿ, ಸರಿಯಿಲ್ಲ ಅದು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅವರು ಇಲ್ಲಿದ್ದರೆ ಆ ರೀತಿ ಕಂಟಿನ್ಯೂ ಮಾಡುತ್ತಿದ್ದರು, ಅವರು ಅಲ್ಲಿರುವುದರಿಂದ ಆ ರೀತಿ ಮಾತನಾಡುವುದಕ್ಕಾಗುತ್ತಿಲ್ಲ ಅವರಿಗೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ ಕೆರೆಗಳು ನಮ್ಮ ಪಾಳೆಗಾರರು ಇದ್ದ ಕಾಲದಲ್ಲೆ ಮತ್ತು ಮಹಾರಾಜರ ಕಾಲದಲ್ಲಿ ಅವರು ಕಟ್ಟಿರತಕ್ಕಂಥ ಕೆರೆಗಳು ಇವತ್ತು ಇವೆ. ಯಾವ ಕೆರೆಗೂ ಕೂಡ ಟ್ಯಾಂಕ್ ಏರಿಯಾ ಎಷ್ಟು ಎಂದು ಇವತ್ತಿಗೂ ಯಾರಿಗೂ ಗೊತ್ತಿಲ್ಲ. ಎಲ್ಲಾ ಒತ್ತುವರಿ ಮಾಡಿಬಿಟ್ಟಿದ್ದಾರೆ. ಒಂದು ಕಡೆ ಸಿಲ್ಟ್ ಅಪ್ ಆಗಿದೆ. ಇನ್ನೊಂದು ಕಡೆ ಎನ್‌ಕ್ರೋಚ್‌ಮೆಂಟ್ ಆಗಿದೆ. ನಾನು ಏನು ಹೇಳುತ್ತೇನೆ ಎಂದರೆ ಕೋಲಾರ ಜಿಲ್ಲೆಯಲ್ಲಿ ನೀವೇನು ಉಪಕಾರ ಮಾಡಬಲ್ಲಿರಿ? ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಸಾವಿರಾರು ಕೋಟಿ ರೂಪಾಯಿ ಹಾಕುತ್ತಿದ್ದೇವೆ. ದಯಮಾಡಿ ಒಂದೊಂದು ತಾಲ್ಲೂಕಿಗೆ 20–20 ಕೆರೆ ತೆಗೆದುಕೊಳ್ಳಿ. ಇದಕ್ಕೆ ಫಸ್ಟ್ ಜೆಸಿಬಿ ಮೆಷಿನರಿ ತೆಗೆದುಕೊಂಡು ಬನ್ನಿ. ಎಲ್ಲೆಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ ಜೆಸಿಬಿ ತೆಗೆದುಕೊಂಡು ಬಂದು ಅದನ್ನು ಕಂಪ್ಲೀಟಾಗಿ ತೆಗೆದು ಬಿಟ್ಟು ಅದಕ್ಕೆ ಬೌಂಡರಿ ಫಿಕ್ಸ್ ಮಾಡಿಬಿಡಿ. ಯಾರು ಟ್ಯಾಂಕ್ ಏರಿಯಾಗೆ ಪುನಃ ಬರುತ್ತಾರೆ ಅವರಿಗೆ ಜೈಲು ಶಿಕ್ಷೆಯನ್ನು ನಮೂದು ಮಾಡಿ. ನೀವು ಸ್ಲೂಯೆಸ್ ನೋಡುವುದಿಲ್ಲ. ಫೀಡರ್ ಚಾನಲ್ ನೋಡುವುದಿಲ್ಲ, ಬಂಡ್ ನೋಡುವುದಿಲ್ಲ, ವೇಸ್ಟ್‌ವೇರ್ ನೋಡುವುದಿಲ್ಲ, ಟ್ಯಾಂಕ್ ಏರಿಯಾ ನೋಡುವುದಿಲ್ಲ. ಅನೇಕ ಜನರಿಗೆ ಕೆರೆ ಎಂದರೆ ಕಲ್ಪನೆನೇ ಇಲ್ಲ. ಒಂದು ಕೆರೆಗೆ ಬರತಕ್ಕಂಥ ರಾಜ ಕಾಲುವೆ ಏನು ಇರುತ್ತದೆ, ಫೀಡರ್ ಚಾನಲ್ ಏನಿರುತ್ತದೆ ಅದು ಸಿಲ್ಟ್ ಆಪ್ ಆದರೆ ನೀರು ಎಲ್ಲಿಂದ ಬರಬೇಕು? ಬರತಕ್ಕಂಥ ನೀರು ಸರಿಯಾಗಿ ಹೊರಗೆ ಬಿಡುವುದಕ್ಕೆ ಸ್ಲೂಯೆಸ್ ಚಾನಲ್ ಕೆಟ್ಟು ಹೋಗಿದ್ದರೆ ಆ ನೀರನ್ನು ನಿಯಂತ್ರಣ ಮಾಡುವುದು ಹೇಗೆ? ಎಷ್ಟು ನಾವು ದಾಖಲೆಗಳಲ್ಲಿ ನಮೂದು ಮಾಡಿದ್ದೇವೆ? ತರಿ ಇಷ್ಟು ಎಕರೆ ಈ ಕೆರೆ ವ್ಯಾಪ್ತಿ ಅಚ್ಚುಕಟ್ಟಿಗೆ ಬರುತ್ತದೆ ಎಂದೇಳಿ ಅದರಲ್ಲೆ ಅರ್ಧ ಭಾಗಕ್ಕಿಂತ ಅಚ್ಚುಕಟ್ಟು ಕಡಿಮೆಯಾಗುತ್ತದೆ. ಇದರ ಬಗ್ಗೆ ರೆವಿನ್ಯೂ ಮಿನಿಸ್ಟರ್, ಫೈನಾನ್ಸ್ ಮಿನಿಸ್ಟರ್ ಎಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಕಡೇಪಕ್ಷ ಕೆರೆಗಳನ್ನು ಜೀರ್ಣೋದ್ಧಾರ

ಮಾಡುವುದಕ್ಕೆ ನೀವು ಕೈ ಹಾಕಿದರೆ ಬಹುಶಃ ವಿಶೇಷವಾಗಿ ಹಳೇ ಮೈಸೂರು ಭಾಗದಲ್ಲಿ, ನನಗೆ ಉತ್ತರ ಕರ್ನಾಟಕ ಹಾಗೂ ಬಾಂಬೆ ಕರ್ನಾಟಕದಲ್ಲೆ ಕೆರೆಗಳು ಎಷ್ಟಿವೆ ಎಂಬ ಕಲ್ಪನೆ ಇಲ್ಲ. ಅದಕ್ಕೆ ಯಾರೂ ತಪ್ಪಾಗಿ ತಿಳಿದುಕೊಳ್ಳುವುದು ಬೇಡ. ಈ ಭಾಗದಲ್ಲಿ ಹೆಚ್ಚಾಗಿದ್ದಾವೆ, ಈ ಕೆರೆಗಳ ಜೀರ್ಣೋದ್ಧಾರ ಮಾಡಿದರೆ ಸಾಮಾನ್ಯ ವರ್ಗದ ರೈತರಿಗೆ ನೀವು ಮಾಡಿದಂತಹ ದೊಡ್ಡ ಉಪಕಾರವಾಗುತ್ತದೆ. ಇನ್ನು ಜಲ ಸಂವರ್ಧನೆ ಯೋಜನೆ, ನಮ್ಮ ಗೆಳೆಯರಾದಂತಹ ರಾಮಸ್ವಾಮಿಯವರಿಗೆ ಹೇಳುತ್ತೇನೆ, ಇವರದ್ದು ಏನು ಕಾರುಬಾರು ನಡೆದಿದೆ ಎಂದು ನನಗೆ ಗೊತ್ತಾಗಿಲ್ಲ. ನಾನು ಒಂದು ದಿವಸ ಅವರ ಆಫೀಸಿಗೆ ಹೋಗಿ ಬಂದೆ. ನಮ್ಮ ತಾಲ್ಲೂಕು ಆ ಲಿಸ್ಟ್‌ನಲ್ಲಿ ಇಲ್ಲವೆಂದು ಹೇಳುತ್ತಾರೆ. ಏಕೆ ಇಲ್ಲವೆಂದು ಕೇಳಿದರೆ ನಿಮ್ಮಲ್ಲಿ ಮ್ಯಾಂಗೋ ಪ್ಲಾಂಟೇಷನ್ ಜಾಸ್ತಿ ಇದೆ ಅದಕ್ಕೆ ಸೇರಿಸಿಲ್ಲವೆಂದು ಹೇಳುತ್ತಾರೆ. ಅದಕ್ಕೆ ನಾನು ಇಲ್ಲಪ್ಪ , ಇಡೀ ತಾಲ್ಲೂಕಿನ ಮ್ಯಾಫ್ ನೀವು ನೋಡಿಲ್ಲ ನೀವು, ಕೆಲವು ಭಾಗಗಳಲ್ಲಿ ಮಾವಿನ ಹಣ್ಣಿನ ತೋಟಗಳು ಇವೆ ನಿಜ. ಆದರೆ ತೀರಾ ಹೀನ ಸ್ಥಿತಿಯಲ್ಲಿ ಇದೆ ಬರ ತಾಲ್ಲೂಕೆಂದು ಘೋಷಣೆ ಮಾಡಿ ನೀವು ಎಂದು ಹೇಳಿದಾಗ ಅವರು ಮುಂದಿನ ವರ್ಷ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಶ್ರೀರಾಮರೆಡ್ಡಿಯವರ ತಾಲ್ಲೂಕು ಇದೆ. ಈ ಜಲ ಸಂವರ್ಧನೆ ಯೋಜನೆ ಏನಿದೆ ಅದಕ್ಕೆ ಇನ್ನೂ ಹೆಚ್ಚು ಶಕ್ತಿಯನ್ನು ತುಂಬಲಿ. ಅದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆದರೆ ಆಗತ್ಯತೆಯನ್ನು ಗುರುತಿಸಿ ನಾವು ಹಾಕತಕ್ಕಂಥ ಬಂಡವಾಳದಿಂದ ಬರತಕ್ಕಂಥ ಮರು ಪ್ರಯೋಜನವನ್ನು ಆಲೋಚನೆ ಮಾಡಿ ಅವರು ಮುಂದೆ ಹೋದರೆ ಬಹುಶಃ ರೈತಾಪಿ ಜನಾಂಗಕ್ಕೆ ಹೆಚ್ಚು ಸಹಾಯವಾಗುತ್ತದೆ. ವಿಶೇಷವಾಗಿ ಕೋಲಾರ ಜಿಲ್ಲೆಯ ಜನ, ಈ ಟ್ಯಾಂಕ್‌ಗಳ ಜೀರ್ಣೋದಾರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ದೊಡ್ಡಮನಸ್ಸು ಮಾಡಿದರೆ ಅವರು ಚಿರಸ್ಥಾಯಿಯಾಗಿ ನಮ್ಮ ಜನರ ಮನಸ್ಸಿನಲ್ಲಿ ಉಳಿಯುತ್ತಾರೆ. ಇದಕ್ಕೆ ತಾವು ಪ್ರಯತ್ನವನ್ನು ಮಾಡಬೇಕೆನ್ನುವ ಮಾತನ್ನು ಹೇಳಿ, ಅವರ ಬಗ್ಗೆ ನಾನೇನೂ ಇನ್ನು ಒಳ್ಳೆಯ ಮಾತುಗಳನ್ನು ಹೇಳಿಲ್ಲ. ಅದನ್ನು ಕೊನೆಯಲ್ಲಿ ಹೇಳುತ್ತೇನೆ. ಏಕೆಂದರೆ ನನ್ನದು ಎಲ್ಲಾ ಜವಾಬ್ದಾರಿ ಮುಗಿಸಿಬಿಡುತ್ತೇನೆ. ಸಣ್ಣ ನೀರಾವರಿ ಇಲಾಖೆಗೆ ಹೆಚ್ಚು ಹಣವನ್ನು ಕೊಡಿ. ಸಣ್ಣ ನೀರಾವರಿ ಇಲಾಖೆ ಮುಖಾಂತರ ನಮ್ಮ ಕಾಲುವೆ ರಿಪೇರಿ ಮಾಡಿಕೊಳ್ಳುವುದಕ್ಕಾಗುತ್ತದೆ. ನಾವೇನೂ ಹೆಚ್ಚು ಕೇಳುತ್ತಿಲ್ಲ. ಇನ್ನು ಮಾನ್ಯ ಮಹದೇವಪ್ರಸಾದ್‌ರವರನ್ನು ನಾನು ಅಭಿನಂದಿಸಬೇಕು. ಅವರು ಆಹಾರ ಖಾತೆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಏಕೆ ಹಾಗೆ ಮಾಡಿದರು ಎಂಬುದು ಗೊತ್ತಿಲ್ಲ. ನಾನು ಆಗಲೇ ಹೇಳಿದೆನಲ್ಲಾ ಈ ಸೆಕ್ರೆಟರಿಗಳು ಮಾಡುವ ಕೆಲಸ. ಒಂದು ಮನೆಯಲ್ಲಿ ಐದಾರು ಕಾರ್ಡುಗಳನ್ನು ಕೊಟ್ಟಿದ್ದಾರೆ. ಕೂಲಿಗೆ ಹೋಗಿ ಬರತಕ್ಕಂಥವನಿಗೆ ಕಾರ್ಡ್ ಇಲ್ಲ. ಬಹಳ ದೊಡ್ಡ ವ್ಯತ್ಯಾಸವಾಗಿತ್ತು. ಎಲ್ಲಾ ಹಳ್ಳಿಗಳಲ್ಲಿ ಜನ ಗಲಾಟೆ ಮಾಡುತ್ತಿದ್ದರು. ಅವರು ಈ ಸಮೀಕ್ಷೆಗೆ ಆರ್ಡರ್ ಮಾಡಿದ್ದಾರೆ. ಈಗ ಏನೋ ಈ ಚುನಾವಣೆ ಘೋಷಣೆಯಾಗಿರುವುದರಿಂದ ಅದಕ್ಕೆ ಏಕೆ ಅಡ್ಡ ಬರಬೇಕು? ನನಗೆ ಅರ್ಥವಾಗುವುದಿಲ್ಲ. ನೀತಿಸಂಹಿತೆ ಅದಕ್ಕೆ ಏಕೆ ಅಡ್ಡ ಬರಬೇಕು? ಬಡವರ ಮನೆಗಳಿಗೆ ಹೋಗಿ ಸಮೀಕ್ಷೆ ಮಾಡಿ ಅವನು ಬಡವ ಹೌದೋ ಅಲ್ಲವೋ ಎಂದು ಹೇಳಿ ಅವನ ಮನೆಯಲ್ಲಿ ಇರತಕ್ಕಂಥವರ ಹೆಸರು ಬರೆದುಕೊಂಡು ಅವರಿಗೆ ಹಸಿರು ಕಾರ್ಡು ಕೊಡುವುದಕ್ಕೆ, ಇವನು ಯೋಗ್ಯ ಅಲ್ಲವೇ ಎಂದು

ಸಮೀಕ್ಷೆ ಮಾಡುವುದಕ್ಕೆ ನೀತಿ ಸಂಹಿತೆ ಏಕೆ ಅಡ್ಡ ಬರಬೇಕು? ಈ ಕೆಲವು ಅಧಿಕಾರಿಗಳಿಗೆ ಸ್ಪಿರಿಟ್ ಆಫ್ ದ ಲಾ ಅರ್ಥವಾಗುವುದಿಲ್ಲ. ಲೆಟರ್ ಅಷ್ಟೆ, ಆಮೇಲೆ ಇವರು ಅಧಿಕಾರಿಗಳು ಅಲ್ಲವಾ? ಆದುದರಿಂದ ತಾವು ಹೇಳಿದ್ದೇ ಫೈನಲ್ ಎಂದು ತಮ್ಮಷ್ಟಕ್ಕೆ ತಾವೇ ಭ್ರಮಿಸಿಕೊಳ್ಳುತ್ತಾರೆ. ಇನ್ನು ನೋಡಿ ಒಂದೂವರೆ ತಿಂಗಳು ಗೋಳು ಹಾಕಿಬಿಡುತ್ತಾರೆ. ಮೋಟಾರ್ ತಗುಲಿಸಿ ಬೇಕಾದರೂ ನೀತಿ ಸಂಹಿತೆ, ಕಾರ್ಡು ಕೊಡಬೇಕಾದರೆ ನೀತಿ ಸಂಹಿತೆ, ಯಾವನಾದರೂ ಸತ್ತು ಹೋಗಿದ್ದರೆ, ಅದಕ್ಕೆ ಡೆತ್ ಸರ್ಟಿಫಿಕೇಟ್ ಕೊಡಬೇಕಾಗಿದ್ದರೂ ಕೂಡ ಅದಕ್ಕೆ ನೀತಿ ಸಂಹಿತೆ. ಇವರಿಗೆ ಕಾಮನ್ ಸೆನ್ಸ್ ಇರುವುದಿಲ್ಲ ಇವರೆಲ್ಲಾ ಜಿರಲೆಗಳು, ಕಾಗದ ತಿನ್ನುವವರು ಇವರು. ಆಹಾರ ತಿನ್ನುವುದಿಲ್ಲ ಇವರು. ಅದಕ್ಕೆ ಅವರಿಗೆ ಜಿರಲೆ ಎಂದು ನಾನು ಕರೆಯುತ್ತಿದ್ದೇನೆ. ಈ ಜಿರಲೆಗಳ ಕಾಟದಿಂದ ಸ್ವಲ್ಪ ವಿಮೋಚನೆ ಕೊಡಿಸಿ. ಆ ಕೆಲಸ ಜರೂರಾಗಿ ಏನು ಆಗಬೇಕಾಗಿದೆ ಅದಕ್ಕೆ ನೀತಿ ಸಂಹಿತೆ ಎನ್ನುವ ನೆಪ ಅದಕ್ಕೆ ಅಡ್ಡ ಬರುವುದು ಬೇಡ. ಬಡವರ ಸಮೀಕ್ಷೆ ಆದಷ್ಟು ಶೀಘ್ರ ಆಗಿ ಅವರಿಗೆ ಕಾರ್ಡನ್ನು ಕೊಟ್ಟರೆ ಯಾರು ತಮ್ಮ ಇಡೀ ಶರೀರದ ಶ್ರಮ ಹಾಕಿದರೂ ಕೂಡ ಅವರ ಹೊಟ್ಟೆ ತುಂಬಾ ತಿನ್ನುವುದಕ್ಕೆ ಆಗುತ್ತಿಲ್ಲ, ಯಾರಿಗೆ ನೀವು ಸಹಾಯಧನ ಕೊಡುತ್ತಿದ್ದೀರಿ, ಆ ವರ್ಗದ ಜನರಿಗೆ ಫಲ ಸಿಗುತ್ತದೆ. ಧೈರ್ಯ ಮಾಡಿ, ಇಡೀ ಸದನ ನಿಮ್ಮೊಟ್ಟಿಗೆ ಇರುತ್ತದೆ. ಯಾರೂ ಇದನ್ನು ನೀತಿಸಂಹಿತೆ ವ್ಯಾಪ್ತಿಯೊಳಗೆ ಬರುತ್ತದೆಂದು ಹೇಳುವುದಿಲ್ಲ. ಯಾರಾದರೂ ಪ್ರಜ್ಞೆ ಇಲ್ಲದೆ ಇರತಕ್ಕಂಥ ಅಧಿಕಾರಿಗಳು ಹೇಳುತ್ತಾರೆ ಎಂದರೆ ನೀವು ಮೂರು ದಿವಸ ಉಪವಾಸ ಇರು, ಆಮೇಲೆ ನಿನ್ನ ಹತ್ತಿರ ಮಾತನಾಡುತ್ತೇನೆ ಎಂದು ಉತ್ತರ ಹೇಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನೀತಿ ಸಂಹಿತೆ ಎಂದು ಹೇಳಿದರೆ ಅದು ಪಟ್ಟಣ ಪ್ರದೇಶಕ್ಕೆ ಇಲ್ಲವಂತೆ, ಗ್ರಾಮೀಣ ಪ್ರದೇಶಕ್ಕೆ ಮಾತ್ರ. ಮಂತ್ರಿಗಳು ಪಟ್ಟಣದಿಂದ ಹೊರಟು ತಮ್ಮ ಕಾರು ಗ್ರಾಮಾಂತರದಲ್ಲಿ ನಿಲ್ಲಿಸಬೇಕು. ಮತ್ತೆ ಬೇರೆ ಕಾರು ಹತ್ತಿಕೊಳ್ಳಬೇಕು. ಮತ್ತೆ ಪುನಹ ಈ ಕಾರಿನ ಹತ್ತಿರ ಬರಬೇಕು. ಇನ್ನು ಕುಡಿಯುವ ನೀರಿಗೂ ಎಲ್ಲಾದರೂ ಕೊಳವೆ ಬಾವಿ ಹಾಕಿಸಬೇಕೆಂದರೆ ಹಾಕಿಸಕೂಡದು.

ಶ್ರೀ ಬಸವರಾಜ್ ರಾಯರೆಡ್ಡಿ : ಕುಡಿಯುವ ನೀರಿಗೆ ಹಾಗೂ ಬರಗಾಲ ಕಾಮಗಾರಿಗೆ ಏನೂ ತೊಂದರೆ ಇಲ್ಲ.

ಶ್ರೀ.ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇನ್ನು ಪ್ರಾಥಮಿಕ ಆರೋಗ್ಯ, ಹಿಂದೆ ನನ್ನ ಗೆಳೆಯರಾದಂತಹ ಮಹದೇವಪ್ಪನವರು ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದರು. ಈಗ ಮಾನ್ಯ ಚೆಲುವರಾಯ ಸ್ವಾಮಿಯವರಿಗೆ ಕೊಟ್ಟಿದ್ದಾರೆ. ಏನು ನಮ್ಮ ದುರಾದೃಷ್ಟವೋ ಏನೋ ಗೊತ್ತಿಲ್ಲ. ಈ ಹಳ್ಳಿಗಳಿಗೆ ಡಾಕ್ಟರ್‌ಗಳು ಬರುವುದೇ ಇಲ್ಲ. ಅಲ್ಲಿಗೂ ಪಾಪ ಜಿಲ್ಲಾಧಿಕಾರಿಗಳು ಸ್ಥಳೀಯವಾಗಿ ಇರತಕ್ಕಂಥವರನ್ನು ನೇಮಕ ಮಾಡಬಹುದೆಂದು ಹೇಳುತ್ತಾರೆ. ಅಷ್ಟೆಲ್ಲಾ ಆದರೂ ಕೂಡ ಬರುತ್ತಿಲ್ಲ. ನನಗೆ ಏನು ಅನ್ನಿಸುತ್ತದೆ. ಎಂದರೆ ಪಾಪ ಅವನು ಕಾಲೇಜಿಗೆ ಹೋಗಿ ಬದುಕಿನ ಶೈಲಿನೇ ಬದಲಾಗಿರುತ್ತದೆ. ಒಳ್ಳೆಯ ವಯಸ್ಸು ನೋಡಿ, ಮಾನಸಿಕವಾಗಿ ಅವನು ಆ ಲೈಫ್ ಸ್ಟೈಲ್‌ಗೆ ಅಡ್ಜಸ್ಟ್ ಆದವನು, ಹಳ್ಳಿಗೆ ಬಂದರೆ ಆ ಹಳ್ಳಿಯವರೆಲ್ಲಾ ಕೆಳಗಿನವರು

ಕಂಡ ಹಾಗೆ ಕಾಣುತ್ತಾರೆ. ಅವನ ಮನಸ್ಸು ಒಪ್ಪುವುದಿಲ್ಲ, ಅವನು ಕೆಲಸ ಮಾಡುವುದಕ್ಕೆ ಅವನಿಗೆ ಸೂಟಬಲ್ ಆಗಿರುವುದು ಇಲ್ಲೆ ಎಂ.ಜಿ.ರೋಡ್‌ನಲ್ಲಿ ಜ್ಞಾನತಪ್ಪಿ ಬಿದ್ದುಕೊಂಡರೆ ಚೆನ್ನಾಗಿ ಇರುತ್ತದೆ. ಅಲ್ಲಿ ನಮ್ಮ ಹಳ್ಳಿಗೆ ಬಂದರೆ ಮರ್ಯಾದೆ ಕೊಡುತ್ತಾರೆ ಅವನಿಗೆ. ಆದರೆ ಅವನಿಗೆ ಮರ್ಯಾದೆ ಬೇಕಾಗಿಲ್ಲ. ಅವನಿಗೆ ಈ ಬೀದಿಯಲ್ಲಿ ಬಿದ್ದುಕೊಂಡಿರುವುದು ಬೇಕು. ನೀವು ಎಲ್‌ಎಂಪಿ ಏನಾದರೂ ರೀ-ಇಂಟ್ರಡ್ಯೂಸ್ ಮಾಡುತ್ತೀರಾ? ಹಳೇ ಕಾಲದ ಎಲ್‌ಎಂಪಿ ಏನಿತ್ತು ಪ್ರಿಯೂನಿವರ್ಸಿಟಿ ಆದಮೇಲೆ ಮೂರು ವರ್ಷದ ಕೋರ್ಸ್ ಮಾಡಿಕೊಂಡು ಅವನಿಗೆ ಅಲ್ಲಿ ನೀವು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಸ್ಟಾರ್ಟ್ ಮಾಡಿಬಿಡಿ; ಮೆಡಿಕಲ್ ಕಾಲೇಜುಗಳ ಬದಲು ಹಳ್ಳಿಗಳಲ್ಲಿ ಏನು ಟ್ರೀಟ್‌ಮೆಂಟ್ ಕೊಡುತ್ತಾರೆ? ಮಾನ್ಯ ಅಧ್ಯಕ್ಷರೆ, ಹಳ್ಳಿಗಳಲ್ಲಿ ಕೆಮ್ಮು, ನೆಗಡಿ, ಬೇಧಿ, ವಾಂತಿ, ಸಣ್ಣಪುಟ್ಟದಾಗಿ ಜ್ವರ ಬರಬಹುದು. ಅವನ ಬುದ್ಧಿಶಕ್ತಿಗೆ ಮೀರಿದಂತೆ ಒಂದು ಸ್ವಲ್ಪ ಡಯಾಗ್ನೈಸ್ ಮಾಡಿದರೆ ಮೇಲಕ್ಕೆ ಹೋಗಿ ಎಂದು ಹೇಳಬಹುದು. ಇವರು ಬಾರದೆ ಇರುವುದರ ಕಾರಣ ಏನಾಗಿದೆ ಎಂದರೆ ಕ್ವಾಕ್ಸ್ ಡಾಕ್ಟರ್‌ಗಳು ಹೆಚ್ಚಾಗಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮೆಡಿಕಲ್ ಕಾನ್ಸಿಲ್ ಆಕ್ಟ್ ಒಪ್ಪಿಕೊಂಡು ನೀವು ಎಲ್‌ಎಂಪಿ ಹೇಗೆ ಇಂಟ್ರಡ್ಯೂಸ್ ಮಾಡಿಸುತ್ತೀರಾ? When you have accepted medical Council Act, it is to be on par with other states.

ಶ್ರೀ ಎಂ.ಪಿ.ಪ್ರಕಾಶ್ : ಲೈಸೆನ್ಸಿಯೇಟೆಡ್ ಮೆಡಿಕಲ್ ಪ್ರಾಕ್ಟಿಷನರ್ ಎಂದು ಹೇಳಿ ಎರಡು ವರ್ಷಕ್ಕೆ ಮಾಡಿ ಬೇರ್ ಫೂಟ್ ಡಾಕ್ಟರ್ ಕಾನ್ಸೆಪ್ಟ್ ಎಂದು ಮಾಡಬಹುದು. It was a course for two years.

ಶ್ರೀ ಜೆ.ಸಿ.ಮಾಧುಸ್ವಾಮಿ: ಅಫ್‌ಕೋರ್ಸ್ ಈಗಲೂ ನಿಮ್ಮ ಹತ್ತಿರ ರಿಜೆಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್ಸ್ ಇದ್ದಾರೆ ಅವರು ಆದರೆ ಗೌರ್ನಮೆಂಟ್ ಪ್ರಾಕ್ಟೀಸ್ ಮಾಡುವ ಹಾಗೆ ಇಲ್ಲ. ಮತ್ತೆ ಎಂಬಿಬಿಎಸ್ ಏಕೆ ಮಾಡಿದರು ಎಂದರೆ ಮೆಡಿಕಲ್ ಕಾನ್ಸಿಲ್ ಆಕ್ಟ್ ಆದಮೇಲೆ only he is authorised to practice and give treatment and he can treat outside the state of Karnataka also. ಹಾಗಾಗಿ lmp ಮತ್ತೆ ಹೇಗೆ ತರುತ್ತೀರಿ?

Sri K.R.Rameshkumar: I think we have also as member.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಗೌರವಾನ್ವಿತ ಸದಸ್ಯರಾದಂತಹ ರಮೇಶ್‌ಕುಮಾರ್ ಅವರು ಬಹಳ ಮಾರ್ಮಿಕವಾಗಿ ಹೇಳುತ್ತಿದ್ದಾರೆ. ಈಗ ಎಂಬಿಬಿಎಸ್ ಮಾಡಿರತಕ್ಕಂಥವರು ಹಳ್ಳಿಗೆ ಹೋಗದೆ ಇರತಕ್ಕಂಥವರು ಸತ್ಯಸಂಗತಿಯಾಗಿದೆ. ಆದರೆ ಇದಕ್ಕೆ ಪರಿಹಾರ ಹುಡುಕತಕ್ಕಂಥ ಸಂದರ್ಭದಲ್ಲಿ ನಾವೇ ಏನಾದರೂ ತಪ್ಪು ಮಾಡಬಹುದು ಎನ್ನುವ ಮಾತನ್ನು ಹೇಳಲು ಇಚ್ಛೆಪಡುತ್ತಿದ್ದೇನೆ. ಈಗಾಗಲೇ ಇದಕ್ಕೆ ಎಲ್‌ಎಂಪಿ ಅಥವಾ ಬೇರ್ ಫೂಟ್ ಡಾಕ್ಟರ್ ಎಂದು ಮಾಡಬಹುದು ಎನ್ನುವ ವಿಚಾರವನ್ನು ಮಾನ್ಯ ಸಚಿವರು ಕೂಡ ಹೇಳಿದರು. ಆ ರೀತಿ ಮಾಡಿದರೆ ಸಮಾಜಕ್ಕೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಲ್ಲ. ಈಗ ವಿಶೇಷವಾಗಿ ನಾವು ಅದಕ್ಕೆ ಸಲೂಷನ್ ಹುಡುಕಬೇಕಾದರೆ ಈಗೇನು ಎಂಬಿಬಿಎಸ್ ಮಾಡಿರುತ್ತಾರೆ.

ಅವರಿಗೆ ಕಂಪಲ್ಸರಿಯಾಗಿ ಇಂಟರ್ನ್ ಶಿಫ್ ಎಂದು ಹೇಳಿ ಎರಡು ವರ್ಷ ರೂರಲ್ ಪಿ.ಹೆಚ್.ಸಿ.ಗೆ ಹಾಕಬೇಕು ಎನ್ನುವುದು ಹಿಂದಿನ ಸರ್ಕಾರದ ಪ್ರಸ್ತಾವವಾಗಿತ್ತು. ಎರಡು ವರ್ಷ ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಪಿಹೆಚ್‌ಸಿ ಯಲ್ಲೆ ಇಂಟರ್ನ್‌ಶಿಫ್ ಜೊತೆಗೆ ಸ್ಟೈಫಂಡ್ ಕೊಟ್ಟರೆ ಖುಷಿಯಾಗಿ ಹೋಗುತ್ತಾರೆ. ಇಂಟರ್ನ್‌ಶಿಫ್ ಮಾಡಿದವರಿಗೆ ನೀವು ಎಂಟ್ರೆನ್ಸ್‌ನಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಮಾಡುವವರಿಗೆ ಅವಕಾಶ ಕೊಡುತ್ತೇವೆಂದು ಮಾಡಿದರೆ ಖಂಡಿತವಾಗಿ ಆ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ನನ್ನ ಭಾವನೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಶಾಸಕರ ಅನುಭವದ ಪ್ರಕಾರ ಯಾರೂ ಕೂಡ ಎಂಬಿಬಿಎಸ್ ಡಾಕ್ಟರ್ ಹಳ್ಳಿಗೆ ಹೋಗುತ್ತಿಲ್ಲ. ಈ ಸಿದ್ಧಾಂತ, ಈ ಚೌಕಟ್ಟಿನ ಒಳಗೆ ನಾವು ನುಗ್ಗಿ ಜನರನ್ನು ರೋಗಕ್ಕೆ ಬೆಲೆ ಕೊಡುವುದು ಬೇಡ. ಏನು ಮಾನ್ಯ ರಮೇಶ್‌ಕುಮಾರ್‌ರವರು ಉತ್ತಮವಾದ ಸಲಹೆಯನ್ನು ಕೊಡುತ್ತಿದ್ದಾರೆ, ಪಾಲಿಟೆಕ್ನಿಕ್ ಡಿಪ್ಲೊಮೊ ಎಂದು ಮೂರು ವರ್ಷದ ಕೋರ್ಸ್ ಇಟ್ಟು ಕೊಂಡಿದ್ದೇವೆ. ಸಾಮಾನ್ಯ ಬಡ ಕುಟುಂಬದ ರೈತರ ಮಕ್ಕಳು ಅಲ್ಲೆ ಹೋಗಿ ಕಲಿತು ಸಣ್ಣಪುಟ್ಟ ಉದ್ಯೋಗ ಮಾಡಿಕೊಂಡು ಅಲ್ಲೆ ಕೆಲಸಕ್ಕೆ ಸೇರುತ್ತಾರೆ. ಈಗ ಏನಾಗಿದೆ ಬಹುಶಃ, ಇದು ಶ್ರೀಮಂತರ ಪರ ಮೇಲ್ಜಾತಿ ಪರ ಮೇಲ್ವರ್ಗದ ಪರವಾಗಿ ಇರತಕ್ಕಂಥ ಭಾವನೆಗಳು ಎಂದು ನಾವೆಲ್ಲಾ ಹೇಳತಕ್ಕಂಥಾದ್ದು. ಎಂಬಿಬಿಎಸ್‌ಗೆ ಹೋಗುವವರು ಯಾರು? ಪಟ್ಟಣ ಪ್ರದೇಶದಲ್ಲಿ ಇಂಗ್ಲೀಷ್ ಕಲಿತು ಸ್ವಲ್ಪ ಶ್ರೀಮಂತರ ಮಕ್ಕಳು ಎಂಬಿಬಿಎಸ್ ಪಾಸಾಗಿರುತ್ತಾರೆ. ಬಡವರ ಮಕ್ಕಳು ಇವತ್ತಿಗೂ ಕೂಡ ಅದಕ್ಕೆ ಎಂಬಿಬಿಎಸ್‌ಗೆ ಹೋಗುವುದಕ್ಕೆ ಆಗುತ್ತಿಲ್ಲ. ಇದೇನಾದರೂ ಕಾನೂನು ತಂದರೆ ಮಾನ್ಯ ರಮೇಶ್‌ಕುಮಾರ್ ಹೇಳಿದ ಹಾಗೆ ಬಹುಶಃ ಈ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿ ಆಗುತ್ತದೆ ಮತ್ತು ಇಡೀ ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚಿನ ಬದಲಾವಣೆ ಆಗುವುದಕ್ಕೆ ಸಾಧ್ಯವಿದೆ. ದಯಮಾಡಿ ಸರ್ಕಾರದವರು ಇದರ ಬಗ್ಗೆ ನೋಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ ಹಾಗೆ ಮಾಡಿದರೆ ದುರಂತ ಸೃಷ್ಟಿಯಾಗುತ್ತದೆ, ಸಾಮಾಜಿಕ ಕ್ರಾಂತಿ ಆಗುವುದಿಲ್ಲ. ಹಳ್ಳಿಗೆ ಮಾತ್ರ ಎಲ್‌ಎಂಪಿ ಡಾಕ್ಟರ್ ಇರಬೇಕು, ಪಟ್ಟಣದಲ್ಲಿ ಎಂಬಿಬಿಎಸ್‌ನವರು ಇರಬೇಕೆಂದು ಹೇಳಿ ದೊಡ್ಡ ದುರಂತ ಸೃಷ್ಟಿ ಮಾಡುವುದಕ್ಕೆ ಹೋಗುತ್ತಿದ್ದೀರಿ. ಯಾವುದೇ ಹಳ್ಳಿಯವರು ಅಲ್ಲಿಗೆ ಟ್ರೀಟ್‌ಮೆಂಟ್‌ಗೆ ಹೋಗುವುದಿಲ್ಲ. ಸರ್, ಈಗಾಗಲೇ ಆಗಿಬಿಟ್ಟಿದೆ, ಆರು ವರ್ಷ 12 ವರ್ಷ ಹಾಗೂ 12 ವರ್ಷ ಮೇಲ್ಪಟ್ಟು ಎಂದು ಡಾಕ್ಟರ್‌ಗಳಲ್ಲಿ ನೀವು ವರ್ಗೀಕರಣ ಮಾಡಿ, ಆರು ವರ್ಷದ ಒಳಗೆ ಇರುವವರಿಗೆ PHU ನಲ್ಲಿ ಆರು ವರ್ಷದಿಂದ 12 ವರ್ಷದೊಳಗೆ ಇರುವವರಿಗೆ ಪಿಹೆಚ್‌ಸಿ ಯಲ್ಲಿ ಇರಬೇಕು. 12 ವರ್ಷದ ಮೇಲೆ ಇರುವವರಿಗೆ ಜನರಲ್ ಹಾಸ್ಪಿಟಲ್‌ನಲ್ಲಿ ಇರಬೇಕೆಂದು ಅವರಿಗೆ ಅನುಭವ ಆದ ಹಾಗೆ ಅವರನ್ನು ನಗರಕ್ಕೆ ಕೂರಿಸಿಬಿಟ್ಟಿದ್ದೀರಿ. ತಾವು ಮಾತ್ರ ಹಳ್ಳಿಯವನನ್ನು ತುಳಿದ ಹಾಗೆ ಆಗುತ್ತದೆ. ಯಾರೂ ಇವತ್ತು ದಡ್ಡರಿಲ್ಲ ನಿಮ್ಮ ಎಂಬಿಬಿಎಸ್ ಡಾಕ್ಟರ್ ಹತ್ತಿರ ಹೋಗುತ್ತಿಲ್ಲ, ಎಂ.ಡಿ.ಯವರನ್ನು ಹುಡುಕುತ್ತಾರೆ. ಇನ್ನು ಎಲ್‌ಎಂಪಿ ಅವರ ಹತ್ತಿರ ಯಾರು ಹೋಗುತ್ತಾರೆ? ಹಳ್ಳಿಯಲ್ಲಿ ವಾಸ ಆಗಿರುವವರು ಯಾರೂ ಇವತ್ತು ಹೋಗುವುದಿಲ್ಲ. ತಾವು ಕಡ್ಡಾಯ ಮಾಡಿ. ಎಂಬಿಬಿಎಸ್ ಡಿಗ್ರಿ ಕನ್‌ಫರ್ಮ್ ಮಾಡಬೇಡಿ. ಎರಡು

ವರ್ಷ ಅಥವಾ ಮೂರು ವರ್ಷ ರೂರಲ್‌ನಲ್ಲಿ ಮಾಡಲಿಲ್ಲವೆಂದರೆ MBBS ಡಿಗ್ರಿ ಕನ್‌ಫರ್ಮ್ ಮಾಡುವುದಿಲ್ಲ ಎಂದು ಒಂದು ಆಕ್ಟ್ ಮಾಡಿ. You go, work and come back ಅಂತ ಹೇಳಿ.

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಜನರು ಪಿಜಿ ಆದವರನ್ನು ಹುಡುಕಿಕೊಂಡು ಹೋಗುತ್ತಿದ್ದಾರೆ. ಈಗ ಸ್ಪೆಷಲೈಸೇಷನ್ ಬಂದಮೇಲೆ ಜನರೂ ಕೂಡ ಬುದ್ಧಿವಂತರಾಗಿದ್ದಾರೆ. ಎಲ್ಲೆಲ್ಲಿ ಹೋಗಬೇಕು ಎನ್ನುವುದನ್ನು ನಿರ್ಧಾರ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಈಗ ಹೊಸ ಕಾನೂನು ಏನೂ ಮಾಡಬೇಕಾಗಿಲ್ಲ. ಇದ್ದಂತಹ ಕಾನೂನನ್ನೆ ಜಾರಿಗೆ ತಂದರೆ, ಈಗ ರೂರಲ್ ಸರ್ವೀಸ್ ಏನಿದೆ ಅದನ್ನೇ ಜಾರಿಗೆ ತಂದರೆ ಸಾಕಾಗುತ್ತದೆ. ಸಿಇಟಿ ಬಗ್ಗೆ ಚರ್ಚೆಯಾದಾಗ ವಿಶ್ವೇಶ್ವರ ಹೆಗಡೆ ಒಂದು ಮಾತು ಹೇಳಿದರು. ಈಗ ಸಿ.ಇ.ಟಿ.ನಲ್ಲಿ ಮೆರಿಟ್ ಸ್ಟೂಡೆಂಟ್ಸ್‌ಗೆ ರಿಸರ್ವೇಷನ್‌ನಲ್ಲಿ ಸೀಟನ್ನು ಕೊಡದೆ ಇದ್ದರೆ ನಮ್ಮ ವೈದ್ಯಕೀಯ ವೆಚ್ಚ ಜಾಸ್ತಿಯಾಗುತ್ತದೆ ಎಂದು. ನಾನು ಒಂದು ಮಾತು ಹೇಳಿದ್ದೆ. ನಾವು ಇವರಿಗೆ ರಿಸರ್ವೇಶನ್‌ನಲ್ಲಿ ಸೀಟನ್ನು ಕೊಟ್ಟು, ಅವರನ್ನು ವೈದ್ಯರನ್ನಾಗಿ ಮಾಡಿದ್ದೇವೆ. ಅವರು ವೈದ್ಯರಾದ ಮೇಲೆ ಹಳ್ಳಿಯಲ್ಲಿ ಸರ್ವೀಸ್ ಅನ್ನು ಮಾಡುತ್ತಾರಾ ಅಥವಾ ಕಡಿಮೆ ಖರ್ಚಿನಲ್ಲಿ ಔಷಧವನ್ನು ಕೊಡುತ್ತಾರಾ? ಇದು ಯಾವುದೂ ಆಗುತ್ತಾ ಇಲ್ಲ. ನಾವು ನಮ್ಮ ಕರ್ತವ್ಯವನ್ನು ಮಾತ್ರ ಮಾಡುತ್ತಿದ್ದೇವೆ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗ ಡಾಕ್ಟರ್‌ಗಳು ಹಳ್ಳಿಗೆ ಹೋಗದ ಕಾರಣ, RMP-Registered Medical Practitioner. ಎಂದು ಸರ್ಟಿಫೀಕೇಟ್ ಅನ್ನು ಪಡೆಯುತ್ತಾರೆ. ಇವರು ಎಲ್ಲೋ ಒಂದು ಕಡೆ ಕಾಂಪೌಂಡರ್ ಆಗಿ ಕೆಲಸವನ್ನು ಮಾಡುತ್ತಿರುತ್ತಾರೆ. ಅವನು ಹಳ್ಳಿಗೆ ಹೋಗಿ ಪ್ರಾಕ್ಟೀಸ್ ಮಾಡುತ್ತಿರುತ್ತಾರೆ. ಅವನು ಎಷ್ಟೋ ಜನರನ್ನು ಸಾಯಿಸುತ್ತಾನೆ, ಎಷ್ಟೋ ಜನರಿಗೆ ತಪ್ಪು ಔಷಧಿಯನ್ನು ಕೊಡುತ್ತಾನೆ. ಇವರು ನಮ್ಮ ದೈವ ಎಂದು ಇವರು ಸತ್ತು ಹೋಗುತ್ತಾರೆ, ಹಾಗಾಗಿ ಹಳ್ಳಿಗಳಲ್ಲಿ ಆರ್.ಎಂ.ಪಿ.ಗಳ ಹಾವಳಿ ಬಹಳ ಇದೆ. ಇದನ್ನು ತಡೆಗಟ್ಟಬಹುದು. ಅದಕ್ಕೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತೆ ಮಾಡಿದರೆ, ಇದನ್ನು ತಡೆಗಟ್ಟಬಹುದು.

ಡಾ: ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಈಗ 1,600ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಸುಮಾರು 500 ಪ್ರಾಥಮಿಕ ಆರೋಗ್ಯ ಘಟಕಗಳು (ಪಿ.ಹೆಚ್.ಎಸ್) ಇವೆ. ಈ ಎಲ್ಲಾ ಕಡೆಗಳಲ್ಲೂ ಎಂ.ಬಿ.ಬಿ.ಎಸ್. ವೈದ್ಯರುಗಳನ್ನು ಹಾಕಿ, ಎಂದು ಜನರು ಕೇಳುತ್ತಿದ್ದಾರೆ. ಇದರಲ್ಲಿ 500 ರಿಂದ 600 ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇವೆ. ಇಲ್ಲಿ ಡಾಕ್ಟರ್‌ಗಳು ಇಲ್ಲವೇ ಇಲ್ಲವೆಂದು ಅಲ್ಲ. ಅಲ್ಲಿಗೆ ಹೋದರೂ ಅವರು ಅಲ್ಲಿ ಉಳಿಯುತ್ತಿಲ್ಲ. ಈ ರೀತಿಯ ಸನ್ನಿವೇಶಗಳು ಇವೆ. ನಾವು ಈಗ ಮಾತನಾಡುತ್ತಿರುವಂಥಾದ್ದು. ಗ್ರಾಮೀಣ ಪ್ರದೇಶದ ಜನರಿಗೆ, ಈ ಅಭಿವೃದ್ಧಿ ಹೊಂದಿರುವ ಭಾರತ, ಪ್ರಾಥಮಿಕ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತನ್ನು ಕೊಡಬೇಕು. ನಾವು ಪ್ರಾಥಮಿಕ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತನ್ನು ಕೊಡಬೇಕೆಂದರೆ ಸ್ಪೆಷಲೈಸೇಷನ್ ಮುಖಾಂತರ ಅವರಿಗೆ ಆರೋಗ್ಯವನ್ನು ಕೊಡಬೇಕೆಂದು ಏನೂ ಅಲ್ಲ. ಪ್ರಾಥಮಿಕ ಆರೋಗ್ಯದ ಮೂಲ ಉದ್ದೇಶವೇ, prevention, promotion and the curative aspect is the final aspect. ಇದನ್ನು

ಮಾಡುವಾಗ ನಮ್ಮದೇ ಆದಂತಹ ಭಾರತೀಯ ವೈದ್ಯ ಪದ್ಧತಿಗಳು ಇವೆ. ನಾವು ಭಾರತೀಯ ವೈದ್ಯ ಪದ್ಧತಿಯನ್ನು ಪುನಃಶ್ಚೇತನಗೊಳಿಸಿ, ಅದಕ್ಕೆ ಪ್ರೋತ್ಸಾಹ ಕೊಟ್ಟು, ಬೆಂಬಲವನ್ನು ಕೊಡುವ ಮುಖಾಂತರ, ಗ್ರಾಮೀಣ ಪ್ರದೇಶದ ಜನರಿಗೆ ಪ್ರಾಥಮಿಕ ಆರೋಗ್ಯದ ಮೂಲ ಗುಣ ಲಕ್ಷಣಗಳನ್ನು ಒದಗಿಸುವುದಕ್ಕೆ, ಮಾನ್ಯ ಎಲ್ಲಾ ಸದಸ್ಯರುಗಳು ಕೂಡಿ ಒಂದು ನಿರ್ಧಾರವನ್ನು ಮಾಡಿದರೆ, ನಮ್ಮದೇ ಆದಂತಹ ಪದ್ಧತಿಯನ್ನು, ಈ ಗ ಅಂತರಾಷ್ಟ್ರೀಯ ಮಟ್ಟದಲ್ಲಿ ಬಳಕೆಯಾಗುತ್ತಿದೆ. ನಮ್ಮ ದೇಶದಲ್ಲಿ ಬಳಕೆಯಾಗುವಂಥಾದ್ದಕ್ಕೆ ಹೆಚ್ಚು ಒತ್ತನ್ನು ಕೊಡುವುದಕ್ಕೆ ಅವಕಾಶ ಇದೆ. ಮಾನ್ಯ ಸದಸ್ಯರು ಪಿ.ಹೆಚ್.ಸಿ.ಕೊಡಿ, ಆಯುರ್ವೇದ ಆಸ್ಪತ್ರೆ ಮಾಡಿ, ಅಂತಹ ಒಂದು ವಾದಕ್ಕೆ ತಿಲಾಂಜಲಿಯನ್ನು ಇಟ್ಟು, ಭಾರತೀಯ ವೈದ್ಯ ಪದ್ಧತಿಯನ್ನು ಪುನರುಜ್ಜೀವನಗೊಳಿಸಲು ಒಂದು ಸಮಗ್ರವಾದಂತಹ ಚರ್ಚೆಯನ್ನು ಮಾಡಿ, ಪ್ರಾಥಮಿಕ ಆರೋಗ್ಯದ ಸವಲತ್ತುಗಳನ್ನು ಜನರಿಗೆ ಕೊಡುವಂತಹ ಸಾಧ್ಯತೆಗಳು ಇವೆ. ನಮ್ಮ ಪದ್ಧತಿಗಳಿಗೆ ಪುನರುಜ್ಜೀವನಗೊಳಿಸುವಂತಹ ಕೆಲಸವಾಗಬೇಕು.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೆ, ಈಗ 1.40ಗಂಟೆಯಾಗಿದೆ, ಇನ್ನು ತಾವು ಎಷ್ಟು ಕಾಲಾವಕಾಶವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇನ್ನು 15 ನಿಮಿಷಗಳಲ್ಲಿ ಮುಗಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರು ಮಾತನಾಡುವುದಕ್ಕೆ ಮೊದಲು, ಈಗ ವ್ಯಕ್ತಿ ಪರಿಚಯದಲ್ಲಿ ಅವರೇನು ಕೊಟ್ಟಿದ್ದಾರೆ ಅದು ನಾವು ಮಾತನಾಡಿದ್ದು ಎಲ್ಲಾ ದಾಖಲೆಗೆ ಹೋಗಿದೆ. ಅದನ್ನು ಕಡತದಿಂದ ತೆಗೆಸುವುದು ಸೂಕ್ತವೋ ಅಲ್ಲವೋ ಎಂಬುದನ್ನು ತಾವು ಯೋಚನೆ ಮಾಡಬೇಕು. ನಾವು ಇಲ್ಲಿ ಮಾತನಾಡುವಂಥಾದ್ದು ಎಲ್ಲಾ ದಾಖಲೆಗಳಿಗೆ ಹೋಗಿ, ಪ್ರೆಸ್‌ನಲ್ಲಿ ಬಂದು, ಎಲ್ಲಾ ಮುಗಿದು ಹೋದ ಮೇಲೆ ನಾವು ತೆಗೆಸಿ ಎಂದು ಹೇಳುವಂಥಾದ್ದು, ಅದರಲ್ಲಿ ಅರ್ಥವಿಲ್ಲ. ಆದುದರಿಂದ ಮೊದಲೇ ತಾವು ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಆಯಿತು, ಅದನ್ನು ತೆಗೆಸೋಣ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ತಾವುಗಳು ಬಹಳ ಹಿರಿಯರು ಇದ್ದೀರಿ, ತಾವು ಇದನ್ನು ರೈಸ್ ಮಾಡುವಾಗ, ತಮಾಷೆಯಾಗಿ ಪ್ರಸ್ತಾಪ ಮಾಡಿದ್ದೀರಿ, ಎಂದು ಅಂದುಕೊಂಡಿದ್ದೆವು. ಈಗ ಅದನ್ನು ತೆಗೆಯಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ ಇಲ್ಲ, ತಮಾಷೆಗಲ್ಲ. ಅವರು ಕೊಟ್ಟಿದ್ದರು. ನಾವು ಬೇಡವೆಂದು ಬೇಡಿಕೊಂಡೆವು. ಅದಕ್ಕೆ ನಾವು ಹುಡುಗಾಟವನ್ನು ಮಾಡಿಲ್ಲ. ಅವರು ಇನ್‌ಸಿಸ್ಟ್ ಮಾಡಿದ್ದರು. ಅದಕ್ಕೆ ನಾವು ರಿಕ್ವೆಸ್ಟ್ ಮಾಡುತ್ತಿದ್ದೇವೆ. ಆ ಪತ್ರವನ್ನು ಸಹ ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು. ಪತ್ರವನ್ನು ವಾಪಸ್ಸು ತೆಗೆದುಕೊಂಡು ರೆಕಾರ್ಡ್‌ನಿಂದ ತೆಗೆದು ಹಾಕುವುದು ಒಳ್ಳೆಯದು. ನಾವು ಹುಡುಗಾಟವನ್ನು ಆಡಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವಂಥಾದ್ದನ್ನು ನಾವು ಹೇಳಿದ್ದೇವೆ. ಅದನ್ನು ಮತ್ತೆ ಹಿಂದಕ್ಕೆ ಪಡೆಯಬೇಕೆಂದು ಹೇಳುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ಅವರಿಗೆ ಬೇಡವೆಂದು ಹೇಳಿದೆವು.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ ಮತ್ತು ವಾಟಾಳ್ ನಾಗರಾಜ್‌ರವರೆ, ತಾವು ಇದನ್ನು ತಮಾಷೆಗೆ ಏನೋ ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಏನೋ ಉತ್ತರವನ್ನು ಕೊಟ್ಟರು. ಅದು ಚರ್ಚೆಯು ಆಯಿತು. ಈಗ ಅದು ಕಡತಕ್ಕೂ ಹೋಗಿದೆ. ಅದನ್ನು ನಾನು ಕಡತದಿಂದ ತೆಗೆಸಿ ಹಾಕುತ್ತೇನೆ. ಆದರೆ ನಮ್ಮ ಮಾಧ್ಯಮ ಮಿತ್ರರು, ಇದ್ದಾರೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ತಾವು ಕಡತದಿಂದ ತೆಗೆದುಹಾಕಿದ ಮೇಲೆ, ಅವರುಅದನ್ನು ಪ್ರಿಂಟ್ ಮಾಡುವ ಹಾಗೆ ಇಲ್ಲ.

ಅಧ್ಯಕ್ಷರು: ಅದು ಚೆನ್ನಾಗಿ ಇರುವುದಿಲ್ಲ. ಆದುದರಿಂದ ಮಾಧ್ಯಮ ಮಿತ್ರರು ಸಹ ಪತ್ರಿಕೆಗಳಲ್ಲಿ ಹಾಕಬಾರದೆಂದು ನಾನು ವಿನಂತಿ ಮಾಡುತ್ತೇನೆ. ಇದನ್ನು ನಾನು ಕಡತದಿಂದಲೂ ತೆಗೆಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತೆಗೆಯಬೇಡಿ, ಏಕೆ ತೆಗೆಯುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ತಾವು ಆ ಪತ್ರವನ್ನು ಹಿಂದಕ್ಕೆ ತೆಗೆದುಕೊಳ್ಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ವಾಪಸ್ಸು ತೆಗೆದುಕೊಳ್ಳುತ್ತೇನೆ. ಈಗ ಹಳ್ಳಿಗಳಲ್ಲಿ ಎಲ್.ಎಂ.ಪಿ.ಗಳು ಇರಬೇಕಾ ಅಥವಾ ಬೇಡವಾ? ಇದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯಾ ಅಥವಾ ಇಲ್ಲವಾ, ಎಂಬುದನ್ನು ಯೋಚನೆ ಮಾಡಿ. ಇನ್ನು ಬೆಂಗಳೂರಿಗೆ ಏನು ಸ್ಥಿತಿಯಾಗಿದೆ. ಹುಬ್ಬಳ್ಳಿಗೆ ಏನಾಗಿದೆ? ಬೆಳಗಾಂ ಏನಾಗಿದೆ? ಗುಲ್ಬರ್ಗಾ ಏನಾಗಿದೆ? ಚಿಕಿತ್ಸೆ ಪಡೆಯುವಂತಹ ಕೆಲಸ ಬಡವರಿಗೆ ಸಾಧ್ಯವಾಗದಂತಹ ಕೆಲಸವಾಗಿದೆ. ಇಡೀ ಬೆಂಗಳೂರಿನಲ್ಲಿ 25 ವರ್ಷಗಳ ಕೆಳಗೆ ಬೆಂಗಳೂರಿನ ಸೆಂಟ್ರಲ್ ಜೈಲಿನ ಹತ್ತಿರ ಒಂದೇ ಒಂದು ಬೆಂಗಳೂರು ನರ್ಸಿಂಗ್ ಹೋಂ ಎಂದು ಇತ್ತು. ಇವತ್ತು ವಿಕ್ಟೋರಿಯಾ ಆಸ್ಪತ್ರೆಯನ್ನು, ಬೋರಿಂಗ್ ಆಸ್ಪತ್ರೆಯನ್ನು ಕೆ.ಸಿ.ಜನರಲ್ ಆಸ್ಪತ್ರೆಯನ್ನು, ವಾಣಿ ವಿಲಾಸ ಆಸ್ಪತ್ರೆಯನ್ನು ಕೇಳುವವರೇ ಇಲ್ಲ. ನಾವು ಎಲ್ಲೋ ಒಂದು ಕಡೆಗೆ ಬುದ್ಧಿ ಪೂರಕವಾಗಿ ಸರ್ಕಾರದ ಸ್ವಾಮ್ಯದಲ್ಲಿರುವಂತಹ ಆಸ್ಪತ್ರೆಗಳನ್ನು, ಉದ್ದೇಶಪೂರ್ವಕವಾಗಿ ನಮ್ಮ ಕೈಯಿಂದಲೇ ಕೊಲ್ಲುತ್ತಿದ್ದೇವೆ. ಅವುಗಳಿಗೆ ಚೈತನ್ಯವನ್ನು ತುಂಬಿ, ಯಾವ ಬಡವ ಎಲ್ಲೂ ಚಿಕಿತ್ಸೆಯನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ, ಅವರು ಅಲ್ಲಿ ಹೋಗಿ ನೆರವನ್ನು ಬಯಸುತ್ತಾನೆ, ಅವನನ್ನು ನಾವು ಇವತ್ತು ನಿರಾಶ್ರಿತರನ್ನಾಗಿ ಮಾಡುತ್ತಿದ್ದೇವೆ. ಅಲ್ಲಿ ಪೋಸ್ಟ್ ಇದೆ, ಎಕ್ವಿಪ್ಮೆಂಟ್ ಇದೆ, ಇತಿಹಾಸ ಇದೆ. ಆದರೆ ಜನರು ಅಲ್ಲಿಗೆ ಹೋಗುವುದಕ್ಕೆ ಸಿದ್ಧರಿಲ್ಲ. ಇವತ್ತು ಅನಿವಾರ್ಯವಾಗಿ ಜನರನ್ನು ವೊಕಾರ್ಟ್‌ಗೆ ತಳ್ಳುತ್ತಿದ್ದೇವೆ. ಮಾನ್ಯ ವಾಟಾಳ್‌ನಾಗರಾಜ್‌ರವರೆ, ತಾವು ಈ ಕಡೆಗೆ ಸ್ವಲ್ಪ ಗಮನವನ್ನು ಕೊಡಿ. ಇವತ್ತು ಮಲ್ಯ ಆಸ್ಪತ್ರೆಗೆ ಹೋಗಬೇಕು, ವೋಕಾರ್ಟ್‌ಗೆ ಹೋಗಬೇಕು. ಅವರು ಎಲ್ಲಿಂದ ಹಣವನ್ನು ತಂದು ಕೊಡುತ್ತಾರೆ. ಅಲ್ಲಿ ಮೂರು ದಿವಸಗಳು ಇದ್ದರೆ, ಒಂದು ಲಕ್ಷ ರೂಪಾಯಿಗಳ ಬಿಲ್ ಅನ್ನು ಮಾಡುತ್ತಾರೆ. ಅವರು ಸ್ಕ್ಯಾನಿಂಗ್ ಎಂದು ಹೇಳುತ್ತಾರೆ, ತಲೆಗೆ ಗಾಯವಾಗಿದೆಯೆಂದು ನಿಮ್ಹಾನ್ಸ್‌ಗೆ ಹೋದರೆ, ಪ್ರೈವೇಟ್‌ನವರ ಹತ್ತಿರ ಕಳುಹಿಸುತ್ತಾರೆ. ಇಲ್ಲಿ ಯಾವ ಎಕ್ವಿಪ್‌ಮೆಂಟ್ ಕೆಲಸ ಮಾಡುವುದಿಲ್ಲ. ಈ ಆಸ್ಪತ್ರೆಗಳಲ್ಲಿ ಏಕೆ ಹೀಗೆ ಆಗಿದೆ. ಜಯದೇವ ಆಸ್ಪತ್ರೆಯನ್ನು ಅಟಾನಮಸ್ ಬಾಡಿಯೆಂದು ತಿಳಿದುಕೊಂಡರೂ ಕೂಡ, ಸರ್ಕಾರೀ ಸ್ವಾಮ್ಯದಲ್ಲಿರುವಂತಹ ಜಯದೇವ ಆಸ್ಪತ್ರೆಗೆ ಯಾರಾದರೂ ಹೃದಯ ಬೇನೆಯೆಂದು

ಬಡವ ಹೋದರೆ, ಅವನಿಗೆ ನೀನು ಇಷ್ಟು ಹಣವನ್ನು ಕಟ್ಟಲೇ ಬೇಕೆಂದು ಹೇಳಿ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಡೈರೆಕ್ಟರ್ ಹೇಳುತ್ತಾರೆ. ಅವರ ಪರಿಸ್ಥಿತಿ ಹಾಗೆ ಇದೆ. ಬಡವರಿಗೆ ತಾನು ಬದುಕಬೇಕೆಂಬ ಆಸೆ ಇರುವವರು, ತಾನು ಚಿಕಿತ್ಸೆ ತೆಗೆದುಕೊಳ್ಳಲು ಅವನ ಹತ್ತಿರ ಹಣ ಇಲ್ಲದೇ ಹೋದರೆ, ಸರ್ಕಾರಿ ಆಸ್ಪತ್ರೆಗಳಲ್ಲೂ ಕೂಡ ಅವರನ್ನು ನಾವು ಬದುಕಿಸುತ್ತೇವೆಂದು, ಹೇಳುವ ಮಾತನ್ನು ಹೇಳುವುದಕ್ಕೆ ಸಾಧ್ಯವಾಗದೇ ಹೋದರೆ, ನಾವು ಏಕೆ ಇರಬೇಕು? ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮೆಡಿಕಲ್ ಅಸಿಸ್ಟೆಂಟೆನ್ಸ್‌ಗೆ ಶಿಫಾರಸ್ಸು ಪತ್ರಗಳನ್ನು ತೆಗೆದುಕೊಂಡು ಹೋಗುವಂಥಾದ್ದು, ನಾನು ನೋಡಿದ್ದೇನೆ, ಯಾವಾಗ ನೋಡಿದರೂ 5–6 ಪತ್ರಗಳನ್ನು ತಂದಿರುತ್ತಾರೆ. ಅದು ಕ್ಯಾನ್ಸರ್ ಟ್ರೀಟ್‌ಮೆಂಟ್ ಎಂದು....

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ರಮೇಶ್‌ಕುಮಾರ್‌ರವರೇ, ವೋಕಾರ್ಟ್‌ಗೆ ಕೆ.ಪಿ.ಟಿ.ಸಿ.ಎಲ್‌ನವರಿಗೆ ಒಂದು ಅಗ್ರಿಮೆಂಟ್ ಆಗಿದೆ. Whatever the case may be ಒಬ್ಬ ಕೆ.ಪಿ.ಟಿ.ಸಿ.ಎಲ್. ಎಂಪ್ಲಾಯಿಗೆ ಟ್ರೀಟ್‌ಮೆಂಟ್ ಮಾಡಿದರೆ 90 ಸಾವಿರ, 1 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಎಂಟೈರ್ ಕೆ.ಪಿ.ಟಿ.ಸಿ.ಎಲ್. ಸ್ಟಾಫ್ ವೋಕಾರ್ಟ್‌ಗೆ ಹೋಗಬೇಕು. ಅವರು ಜಯದೇವ ಆಸ್ಪತ್ರೆಗೆ ಹೋಗುವ ಹಾಗೆ ಇಲ್ಲ. ಈಗ ಪಬ್ಲಿಕ್ ಸೆಕ್ಟಾರ್‌ನವರೆಲ್ಲಾ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ತಾವು ಸ್ವಲ್ಪ ಬೆಳಕನ್ನು ಚೆಲ್ಲಬೇಕು. ನಮ್ಮ ಜಯದೇವ ಆಸ್ಪತ್ರೆಗೆ ಅರ್ಹತೆ ಇರಲಿಲ್ಲವಾ? ಇಲ್ಲಿ ಸಣ್ಣ ಖಾಯಿಲೆಗೂ 90 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಪ್ರತಿ ಕೆ.ಪಿ.ಟಿ.ಸಿ.ಎಲ್.ಎಂಪ್ಲಾಯಿ is forced to enter WOKHART. ವೋಕಾರ್ಟ್, ಅಂತಹ ಆಸ್ಪತ್ರೆಗಳನ್ನು ಸರ್ಕಾರ ರೆಕಗ್ನೈಸ್ ಮಾಡುತ್ತದೆ. ಅಂದಮೇಲೆ ಜಯದೇವ ಆಸ್ಪತ್ರೆಗಳ ಗತಿ ಏನು?

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಕರುಣಾನಿಧಿಯವರು ತಮಿಳುನಾಡಿನಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ, ಅದರಲ್ಲೂ ವಿಶೇಷವಾಗಿ ಹೃದಯ ರೋಗಕ್ಕೆ ಸಂಬಂಧಪಟ್ಟಂತೆ, 500ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ಫಂಡ್ ಅನ್ನು ಟ್ರಸ್ಟ್ ಮುಖಾಂತರ ರೈಸ್ ಮಾಡಿ, ಸರ್ಕಾರದ ಅಧೀನದಲ್ಲಿರುವಂತಹ ಒಂದು ಟ್ರಸ್ಟ್ ಅನ್ನು ಮಾಡಿ, ಅದರಲ್ಲಿ ಡಿಪಾಸಿಟ್, ಮಾಡಿ ಯಾರು ಬಡವ, ಆದಾಯವಿಲ್ಲದವನು, ನಿರಾಶ್ರಿತರು, ಬಂದರೆ,ಅದನ್ನು ಸರ್ಟಿಫೈ ಮಾಡಿದ ತಕ್ಷಣ ಅವನಿಗೆ ಫ್ರೀಯಾಗಿ ಅಪರೇಷನ್ ಮಾಡುವಂತಹ ವ್ಯವಸ್ಥೆಯಾಗಿದೆ. ಬಹಳ ಜನರು ಮುಖ್ಯಮಂತ್ರಿಗಳು ಬಂದರು, ಹೋದರು, ಎಂದು ಅನ್ನಿಸಿಕೊಂಡು ಹೋಗಿದ್ದಾರೆ. ನೀವು ಎಲ್ಲವನ್ನೂ ಜೀವನದಲ್ಲಿ ಕಂಡಿದ್ದೀರಿ, ನೋಡಿ ಧೈರ್ಯ ಮಾಡಿ, ಬಡವ ಎಂದು ಬಂದವನು; ಬದುಕಬೇಕೆಂದು ಆಸೆ ಇರುವವನು, ತನಗೆ ಬಂದಿರುವಂತಹ ಖಾಯಿಲೆಗೆ ಚಿಕಿತ್ಸೆಯನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲದವನಿಗೆ ಯಾವುದಾದರೂ ಒಂದು ರೂಪದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವಂತಹ ಆಸ್ಪತ್ರೆಯಲ್ಲಿ ಅಥವಾ ಖಾಸಗಿಯವರನ್ನು ನಿರ್ಬಂಧಕ್ಕೆ ತೆಗೆದುಕೊಂಡು, ಒಂದು ವರ್ಷಕ್ಕೆ ಇಷ್ಟು ಕೇಸ್‌ಗಳನ್ನು ಫ್ರೀಯಾಗಿ ಮಾಡಲೇಬೇಕೆಂಬ ಶಾಸನವನ್ನು ಮಾಡತಕ್ಕಂಥಾದ್ದು, ಏನಾದರೂ ಮಾಡಿ. ಒಂದಷ್ಟು ಕುಟುಂಬಗಳು ಬದುಕಿಕೊಂಡರೆ, ಅವರ ಆಶೀರ್ವಾದ ನಿಮಗೆ ಆಗುತ್ತದೆ. ತಾವು ಬರೀ ಮುಖ್ಯಮಂತ್ರಿಗಳಾಗಿ ಅಲ್ಲ, ರಾಜಕಾರಣಿಗಳಾಗಿ ಅಲ್ಲ, ಆ ಜನ ಎಲ್ಲಾ ನಿಮ್ಮನ್ನು ವೈಯಕ್ತಿಕವಾಗಿ ಕೂಡ ಪ್ರಾರ್ಥನೆ ಮಾಡಿ, ನಿಮಗೆ ಒಳ್ಳೆಯದಾಗಲಿ, ಎಂದು ಬಯಸುತ್ತಾರೆ.

ಅಧಿಕಾರ ಶಾಶ್ವತವಲ್ಲ. ನೀವು ಅವರ ಹೃದಯದಲ್ಲಿರುವಂತಹ ಕೆಲಸವನ್ನು ಮಾಡಬೇಕೆಂಬ ಸೂಚನೆಯನ್ನು ನಾನು ಕೊಡುತ್ತಿದ್ದೇನೆ. ಯಾವ ನಮ್ಮ ಸರ್ಕಾರದ ಸ್ವಾಮ್ಯದಲ್ಲಿರುವಂತಹ ಹೆಸರಾಂತ ಆಸ್ಪತ್ರೆಗಳಾದ ಬೋರಿಂಗ್ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಈ ಆಸ್ಪತ್ರೆಗಳನ್ನು ಪುನಃ ನೀವು ಅವುಗಳ ಹಳೆಯ ವೈಭವಕ್ಕೆ ತಂದರೆ, ನೀವು ಬಡವನಿಗೆ ಕೊಟ್ಟಂತಹ ಗೌರವವಾಗುತ್ತದೆ. ಆ ಆಸ್ಪತ್ರೆಗಳ ಮೇಲೆ ಬಡವರಿಗೆ ವಿಶ್ವಾಸ ಬರಬೇಕು. ಆ ಕೆಲಸವನ್ನು ತಾವು ಮಾಡುತ್ತೀರೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ರಮೇಶ್‌ಕುಮಾರ್‌ರವರೆ, ತಾವು ಮಾತನಾಡುವಂಥ ಸಮಯದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಬಗ್ಗೆ ಪ್ರಸ್ತಾಪ ಮಾಡಿದಿರಿ. ಜಯದೇವ ಹೃದ್ರೋಗ ಸಂಸ್ಥೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದಾರೆ. ಅದಕ್ಕೆ ಸರ್ಕಾರದಿಂದ ಸಿಗಬೇಕಾದಂಥ ಆದ್ಯತೆ ಖಂಡಿತವಾಗಿ ಕೂಡ ಸಿಗುತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಲಂಚ್‌ಗೆ ಬ್ರೇಕ್ ಮಾಡಿ , ನಂತರ 3 ಗಂಟೆಗೆ ಸೇರಬಹುದು.

ಶ್ರೀ ಹೆಚ್.ಡಿ.ಬಸವರಾಜು: ಮಾನ್ಯ ಅಧ್ಯಕ್ಷರಲ್ಲಿ ವಿನಂತಿ, ಸನ್ಮಾನ್ಯ ರಮೇಶ್ ಕುಮಾರ್‌ರವರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಈ ಸಂದರ್ಭದಲ್ಲಿ, ಜಯದೇವ ಹೃದ್ರೋಗ ಸಂಸ್ಥೆಗೆ ಸರ್ಕಾರದ ವತಿಯಿಂದ ಏನೊಂದು ಆದ್ಯತೆ ಸಿಗಬೇಕಾಗಿದೆಯೋ, ಅದನ್ನು ಖಂಡಿತವಾಗಿ ಸರ್ಕಾರದ ವತಿಯಿಂದ ಸಿಗುವಂಥ ಒಂದು ವ್ಯವಸ್ಥೆಗೆ ನೀವು ಒತ್ತಡ ತರುವಂಥ ರೀತಿಯಲ್ಲಿ ತಮ್ಮ ಭಾಷಣವನ್ನು ಮುಂದುವರೆಸಬೇಕು ಎಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಎನ್.ಚಲುವರಾಯಸ್ವಾಮಿ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರು ಮಾತನಾಡುತ್ತಾ , ಆರೋಗ್ಯ ಇಲಾಖೆಯ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಜಯದೇವ ಮತ್ತು ಬೇರೆ ಅಟಾನಮಸ್ ಬಾಡಿಗಳಲ್ಲಿ ನಡೆಯುತ್ತಿರತಕ್ಕಂಥ ವಿಚಾರಗಳ ಬಗ್ಗೆ ಹೇಳಿದ್ದಾರೆ. ಈಗ ವಾರ್ಷಿಕ 12 ಸಾವಿರ ರೂಪಾಯಿಗಳ ಆದಾಯವಿದ್ದರೆ ಅವರು ಬಿ.ಪಿ.ಎಲ್.ಕೆಳಗೆ ಬರುತ್ತಾರೆ. 12.100 ರೂಪಾಯಿಗಳಿದ್ದರೂ ಅವರು ಬಿ.ಪಿ.ಎಲ್.ಕೆಳಗೆ ಬರುವುದಿಲ್ಲ. ಅವರೂ ಬಡವರಾಗಿಯೇ ಇರುತ್ತಾರೆ. ಆದರೆ ನಾವು ನಿಗದಿ ಮಾಡಿರತಕ್ಕಂಥ ಪರಿಸ್ಥಿತಿ ಹಾಗೆ ಇರುತ್ತದೆ. ಈ ಯೋಜನೆಯನ್ನು ವರ್ಲ್ಡ್ ಬ್ಯಾಂಕ್ ಡೈರೆಕ್ಷನ್ ಮೇಲೆ ಇಂಟ್ರೊಡ್ಯೂಸ್ ಮಾಡಿರುವುದರಿಂದ, ಮುಖ್ಯಮಂತ್ರಿಯವರು, ನಾನು, ಹಣಕಾಸು ಸಚಿವರು ಎಲ್ಲರೂ ಸೇರಿ ಕಳೆದ ಒಂದು ತಿಂಗಳಿಂದ ಚರ್ಚೆ ಮಾಡಿ ಇದರಲ್ಲಿನ ಯೂಸರ್ಸ್ ಅಮೌಂಟ್‌ನ್ನು ಸಂಪೂರ್ಣವಾಗಿ ತೆಗೆಯಲು ಸಾಧ್ಯವೇ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ನಮ್ಮ ಮಾಧುಸ್ವಾಮಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಏನು ಹೇಳೀದರು, ಕೆ.ಪಿ.ಟಿ.ಸಿ.ಎಲ್.ನಿಂದ ವೋಕಾರ್ಟ್‌ಗೆ ರೆಫರ್ ಮಾಡುವ ಬದಲು ಜಯದೇವಾಗೆ ರೆಫರ್ ಮಾಡಿದರೆ ಈ ಅಟಾನಮಸ್ ಬಾಡಿಗೆ ದುಡ್ಡು ಬರುತ್ತದೆ ಎಂದು ಹೇಳಿದರು.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವರು ಆಮೇಲೆ ರಿಪ್ಲೈ ಕೊಡಲಿ. ಇವರು ಸಂಪ್ರದಾಯವನ್ನು ಮುರಿಯುತ್ತಿದ್ದಾರೆ. ಗವರ್ನರ್ ಅಡ್ರೆಸ್ ಮೇಲೆ ಅವರು ಮಾತನಾಡುವಾಗ ಮಧ್ಯದಲ್ಲಿ ಇವರು ಹೇಗೆ ಉತ್ತರ ಕೊಡುತ್ತಾರೆ?

ಶ್ರೀ ವಾಟಾಳ್ ನಾಗರಾಜ್: ಸಂಪ್ರದಾಯವೆಂದರೆ, ಇದೇನೂ ಮದುವೆಯಲ್ಲಿ ತಾಳಿ ಕಟ್ಟುವುದೆಂದು ತಿಳಿದುಕೊಳ್ಳಬೇಡಿ. ಈ ಸಂದರ್ಭದಲ್ಲಿ, ಅವರ ಇಲಾಖೆಗೆ ಸಂಬಂಧಿಸಿದಂತೆ, ಒಂದು ಮಾತನ್ನು ಮಧ್ಯದಲ್ಲಿ ಹೇಳಲಿ ಬಿಡಿ.

ಅಧ್ಯಕ್ಷರು : ಈ ರೀತಿ ಎಲ್ಲರೂ ಮಧ್ಯೆ ಮಧ್ಯೆ ಪ್ರವೇಶ ಮಾಡಿದರೆ ಅವರು ಸರಿಯಾಗಿ ಮಾತನಾಡುವುದಕ್ಕೂ ಆಗುವುದಿಲ್ಲ, ಸಲಹೆ ಸೂಚನೆಗಳನ್ನೂ ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಚಲುವರಾಯಸ್ವಾಮಿ : ನಾವು ವಿಷಯವನ್ನು ಪ್ರಾರಂಭಿಸಿದ್ದೇವೆ, ಅದನ್ನು ಕ್ಲೋಸ್ ಆದರೂ ಮಾಡಬೇಕಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗ ಸದನವನ್ನು ಮುಂದಕ್ಕೆ ಹಾಕಿ, ದಯವಿಟ್ಟು 3 ಗಂಟೆಗೆ ಸೇರುವ ಹಾಗೆ ಮಾಡಿ.

ಶ್ರೀ ಎಸ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಮುಗಿಸುವವರೆಗಾದರೂ ದಯಮಾಡಿ ಮಾನ್ಯ ಸದಸ್ಯರು ತಾಳ್ಮೆಯಿಂದ ಇರಬೇಕಲ್ಲವೇ? ನಮ್ಮ ಇಲಾಖೆಯ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕಾದರೆ, ತಮ್ಮ ಅಪ್ಪಣೆ ಕೇಳಿ ನಾನು ಎದ್ದು ನಿಂತ ಮೇಲೆ, ನಾನು ಮುಗಿಸುವವರೆಗಾದರೂ ತಾವು ಅವಕಾಶ ಕೊಡಬೇಕು. ಒಂದು ನಿಮಿಷ, ನಾನು ಮುಗಿಸಿಬಿಡುತ್ತೇನೆ. ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಮಾಧುಸ್ವಾಮಿ ಪ್ರಸ್ತಾಪ ಮಾಡಿದಂತೆ, ಆರೋಗ್ಯ ಇಲಾಖೆಯಲ್ಲಿರತಕ್ಕಂಥ ಸಿ.ಟಿ.ಸ್ಕ್ಯಾನನ್ನು ಇಡೀ ಜಿಲ್ಲೆಗಳಿಗೆ ಕೊಡಬೇಕು ಎಂದು ಮಾಡಿದ್ದೇವೆ. ಮಾನ್ಯ ದೇವೇಗೌಡರು ಚೀಫ್ ಮಿನಿಸ್ಟರ್ ಆಗಿದ್ದಾಗ, 27 ಕೋಟಿ ರೂಪಾಯಿಗಳನ್ನು ಕೊಟ್ಟು, ಅದರಲ್ಲಿ ಬರತಕ್ಕಂಥ ಬಡ್ಡಿಯಲ್ಲಿ ಬಡವರಿಗೆ ಹೆಲ್ತ್ ಆಪರೇಷನ್ ಫಂಡ್ ಎಂದು ಮಾಡುತ್ತಿದ್ದರು. ಅದರಿಂದ ಈಗ ಒಂದೂವರೆ ಕೋಟಿ ರೂಪಾಯಿ ಬರುತ್ತಿದೆ. ಅದನ್ನು ಇನ್ನೂ ಹೆಚ್ಚು ಮಾಡಬೇಕು ಎಂದು ಇದ್ದೇವೆ. ಅವರು ಹೇಳಿದುದ್ದನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು, ಮುಂದಿನ ಬಜೆಟ್‌ನಲ್ಲಿ ಈ ಇಲಾಖೆಗೆ,, ಅದು ರೂರಲ್‌ನಲ್ಲಿರತಕ್ಕಂಥಾದ್ದು ಇರಬಹುದು ಅಥವಾ ಸಿಟಿಯಲ್ಲಿ ಇರತಕ್ಕಂಥಾದ್ದು ಇರಬಹುದು, ಖಾಸಗೀ ಆಸ್ಪತ್ರೆಗಳನ್ನೂ ನಮ್ಮ ಸರ್ಕಾರದ ವ್ಯಾಪ್ತಿಗೆ ತೆಗೆದುಕೊಂಡು ಬಂದು, ಅದರಲ್ಲಿರತಕ್ಕಂಥ ಇರೆಗ್ಯುಲಾರಿಟೀಸ್ ಬಗ್ಗೆಯಾಗಲೀ ಅಥವಾ ಸಾರ್ವಜನಿಕರಿಗೆ ಸೇವೆ ಕೊಡತಕ್ಕಂಥಾದ್ದರ ಬಗ್ಗೆ ಹೆಚ್ಚು ಗಮನ ಹರಿಸುತ್ತೇವೆ ಎನ್ನುವುದನ್ನು ಹೇಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್: ಅಲ್ಲಿಗೆ ಮೊದಲು ಡಾಕ್ಟರ್‌ಗಳನ್ನು ಕಳುಹಿಸಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇನ್ನು ರಸ್ತೆಗಳ ವಿಚಾರವನ್ನು ಅಲ್ಲಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿರತಕ್ಕಂಥ ಎಲ್ಲಾ ಸದಸ್ಯರ ಒಂದು ಸಮಸ್ಯೆ ಎಂದರೆ ನ್ಯಾಷನಲ್ ಹೈವೇಸ್‌ಗೆ, ಸ್ಟೇಟ್ ಹೈವೇಸ್‌ಗೆ ಪರವಾಗಿಲ್ಲ, ಹಣ ಇರುತ್ತದೆ. ನಾವು ನಮ್ಮ ದಿನನಿತ್ಯದ ಜೀವನದಲ್ಲಿ ಹೆಚ್ಚು ಭಾಗ ಓಡಾಡತಕ್ಕಂಥಾದ್ದು ಝಡ್.ಪಿ.ರೋಡ್‌ಗಳಲ್ಲಿ. ಝಡ್.ಪಿ.ಯಲ್ಲಿ ಹಣ ಇಲ್ಲ, ಪಿ.ಡಬ್ಲ್ಯು.ಡಿ.ಯವರು ಹಣ ಕೊಡುವುದಿಲ್ಲ, ನಬಾರ್ಡ್‌ನಲ್ಲಿ ಸಿ.ಎಂ.ಜಿ.ಎಸ್.ವೈ.ಯೋಜನೆಯಲ್ಲಿ ಒಂದು ವರ್ಷಕ್ಕೆ ಒಂದು ಕಿಲೋಮೀಟರೋ, ಎರಡು ಕಿಲೋಮೀಟರೋ ರಸ್ತೆಗಳನ್ನು ಮಾಡುತ್ತಾರೆ. ಝಡ್.ಪಿ.ರೋಡ್‌ಗಳಿಗೆ ಸಿ.ಎಂ.ಜಿ.ಎಸ್.ವೈ.ನಲ್ಲಿ ತಾವು ಏನು ಹಣ ಕೊಡುತ್ತಿದ್ದೀರಿ, ಅದಕ್ಕೆ ಮರು

ನಾಮಕರಣ ಮಾಡಿದರೂ ಆಯಿತು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಜನರಿಗೆ ಸಂಪರ್ಕ ಸೇತುವೆಯಾಗಿರುವಂಥ ಈ ಝಡ್.ಪಿ.ರೋಡ್ಸ್‌ಗೆ ವಿಶೇಷವಾದಂಥ ಒಂದು ಯೋಜನೆಯನ್ನು ನೀವು ಪ್ರಕಟಣೆ ಮಾಡದೇ ಹೋದರೆ ಅದು ಹೇಗೆ ಆಗುತ್ತದೆ ಎಂದರೆ, ಮೇಲೆಲ್ಲಾ ಮೇಕಪ್ ಮಾಡಿಕೊಂಡು, ಒಳಗೆ ಅತಿ ಕೊಳಕಾಗಿರತಕ್ಕಂಥ ಬನಿಯನ್, ಡ್ರಾಯರ್ ಹಾಕಿಕೊಂಡ ಹಾಗೆ ಆಗುತ್ತದೆ. ಮೇಲೆ ಸೆಂಟ್-ಗಿಂಟ್ ಎಲ್ಲಾ ಹಾಕಿಕೊಂಡು ಹತ್ತಿರಕ್ಕೆ ಯಾರಾದರೂ ಬಂದರೆ ಬೆವರಿನ ವಾಸನೆ ಬಂದ ಹಾಗೆ ಆಗುತ್ತದೆ. ಆ ರೀತಿ ಆಗುವುದು ಬೇಡ. ನ್ಯಾಷನಲ್ ಹೈವೇಸೂ ಇರಲಿ, ಸ್ಟೇಟ್ ಹೈವೇಸೂ ಇರಲಿ. ಅವುಗಳ ಜೊತೆಗೆ ಝಡ್.ಪಿ.ರೋಡ್ಸ್‌ಗೂ ಸ್ವಲ್ಪ ಹೆಚ್ಚಿನ ಹಣವನ್ನು ಕೊಡತಕ್ಕಂಥ ಒಂದು ಯೋಚನೆಯನ್ನು ತಾವು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಹೌಸಿಂಗ್ ಆಕ್ಟ್ ಬಗ್ಗೆ ಹೇಳಬೇಕಾದರೆ, ಹೌಸಿಂಗ್‌ನಲ್ಲಿ ಏನಾಗಿದೆ ಎಂದರೆ, ರಾಜೀವ ಗಾಂಧಿ ಹೌಸಿಂಗ್ ಕಾರ್ಪೊರೇಷನ್ನಿಗೆ ನಾವು ಜವಾಬ್ದಾರಿಯನ್ನು ವಹಿಸಿದ್ದೇವೆ. ಅವರ ಉದ್ದೇಶವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಇಲ್ಲಿ ಏನಾಗಿಬಿಟ್ಟಿದೆ ಎಂದರೆ, ಅದೇನು ಕಾರಣವೋ, ಅವರಿಗೆ ಯಾರ ಜೊತೆಗೆ ಸಂಪರ್ಕ ಏರ್ಪಟ್ಟಿತ್ತೋ ಏನೋ ಗೊತ್ತಿಲ್ಲ, ಶಾಸಕರು ಅಥವಾ ರಾಜಕಾರಣಗಳು ಎಂದರೆ, ಇವರು ಈ ದುಡ್ಡನ್ನೆಲ್ಲಾ ತಿಂದುಬಿಡುತ್ತಾರೆ, ಮನೆಗಳನ್ನು ಕಟ್ಟುವುದಿಲ್ಲ, ಅದಕ್ಕಾಗಿ ನಾವೇ ಬೆಂಗಳೂರಿನಿಂದ ಹೋಗಿ ಮನೆ ಕಟ್ಟಬೇಕು ಎನ್ನುವ ತೀರ್ಮಾನಕ್ಕೆ ಬಂದ ಹಾಗೆ ಕಾಣುತ್ತಾರೆ. ಅವರೇ ಕಟ್ಟಬೇಕು ಎಂದಿದ್ದರೂ ಕೂಡ, ಅವರು ಇಬ್ಬರು ಮೂವರು ಸೇರಿಕೊಂಡು ಎಷ್ಟು ಮನೆಗಳನ್ನು ಕಟ್ಟುವುದಕ್ಕಾಗುತ್ತದೆ? ಅವರೇ ಬಂದು ಕಟ್ಟಲು ನಮ್ಮದೇನು ಆಕ್ಷೇಪಣೆ ಇಲ್ಲ. ಅವರಿಗೆ ನಾವು ಏನು ವಿನಂತಿ ಮಾಡಿಕೊಳ್ಳುತ್ತೇವೆ ಎಂದರೆ, ನಾವು ಆ ದುಡ್ಡನ್ನು ತಿನ್ನದೇ ಇರುವ ಹಾಗೆ ಬೇಕಾದರೆ ನಮ್ಮ ಮೂತಿಗೆ ಬಟ್ಟೆ-ಗಿಟ್ಟೆ ಕಟ್ಟಿಬಿಡಲಿ. ಆದರೆ ನಮ್ಮನ್ನು ಸ್ವಲ್ಪ ಗೌರವದಿಂದ ಕಾಣತಕ್ಕಂಥಾದ್ದು ಆಗಬೇಕು. ಇದು ಬಡ ಜನರಿಗಾಗಿ ಇರತಕ್ಕಂಥ ಯೋಜನೆ. ಸ್ವಲ್ಪ ತಾಳ್ಮೆಯಿಂದ ಕೇಳತಕ್ಕಂಥಾದ್ದು, ಅನುಷ್ಠಾನದಲ್ಲೇನಾದರೂ ಏರುಪೇರುಗಳಿದ್ದರೆ ಅವರಿಗೆ ಶಿಕ್ಷೆ ಕೊಡತಕ್ಕಂಥಾದ್ದು, ಯಾರು ಅರ್ಹರಲ್ಲ, ಅಂಥವರಿಗೆ ಮನೆ ಕೊಟ್ಟಿದ್ದರೆ ಅವರ ಮೇಲೆ ಕ್ರಮ ಜರುಗಿಸತಕ್ಕಂಥಾದ್ದು, ಅದನ್ನು ಮುಟ್ಟುಗೋಲು ಹಾಕಿಕೊಂಡು, ಅವನಿಂದ ಹಣ ವಾಪಸು ವಸೂಲು ಮಾಡುವಂಥಾದ್ದು, ಬಡವರಿಗೆ ಮನೆ ಕೊಡತಕ್ಕಂಥಾದ್ದು ಆಗಬೇಕು. ಈ ಕೆಲಸದಲ್ಲಿ ನಮ್ಮ ಸ್ನೇಹಿತರು ಹೆಚ್ಚು ಜವಾಬ್ದಾರಿಯನ್ನು ವಹಿಸಬೇಕು. ಮಂತ್ರಿಯಾಗತಕ್ಕಂಥಾದ್ದು ಜೀವನದಲ್ಲಿ ಒಂದು ಅಪರೂಪದ ಘಟನೆ. ಈ ಶಾಸನಸಭೆಗೆ ಬರುವುದೇ ದೊಡ್ಡ ವಿಚಾರ. ನಾನಂತೂ ಅದಕ್ಕೇ ತೃಪ್ತಿ ಪಡುತ್ತೇನೆ. ಅದರಲ್ಲೂ ತಾವು ಮಂತ್ರಿಯಾಗಿದ್ದೀರಿ. ಯಾವ ಬ್ಯಾಕ್‌ಗ್ರೌಂಡ್‌ನಿಂದ ನೀವು ಬಂದಿದ್ದೀರಿ, ಆ ಜನರನ್ನು ನೀವು ಮನಸ್ಸಿನಲ್ಲಿಟ್ಟುಕೊಂಡು, ಅವರ ಪುಣ್ಯದ ಫಲದಿಂದ ಇವತ್ತು ನಾನು ಇಲ್ಲಿಗೆ ಬಂದಿದ್ದೇನೆ, ಅವರ ಋಣ ತೀರಿಸಬೇಕು ಎಂದು ಕೆಲಸ ಮಾಡಬೇಕು. ಈ ರೀತಿ ಕೆಲಸ ಮಾಡಲು ಮುಖ್ಯಮಂತ್ರಿಗಳು ನಿಮಗೆ ಅವಕಾಶ ಕೊಟ್ಟಿದ್ದಾರೆ. ಅವರದ್ದು ಧಾರಾಳ ಹೃದಯ. ಅವರ ಜೊತೆ ಗಟ್ಟಿಯಾಗಿ ನಿಂತು, ಹೆಚ್ಚು ಡಿಮ್ಯಾಂಡ್ ಮಾಡಿ, ಹೆಚ್ಚು ಗ್ರಾಂಟ್ಸ್ ತೆಗೆದುಕೊಡು ಕೆಲಸ ಮಾಡಬೇಕು. ನೀವು ಒಂದೇ ಕಡೆ ಕುಳಿತುಕೊಳ್ಳಬಾರದು. ಇಡೀ ರಾಜ್ಯದಲ್ಲಿ ನೀವು ಪ್ರವಾಸ ಮಾಡಬೇಕು. ಬಡವರ ಮನೆ ಆಗಿದೆಯೇ, ಇಲ್ಲವೇ ಎಂದು ನೋಡಬೇಕು. ಇದರಲ್ಲಿ ಶಾಸಕರನ್ನು ಹೇಗೆ

ಇನ್‌ವಾಲ್ವ್ ಮಾಡಬೇಕು ಎಂದರೆ ಪಾರ್ಟಿ ಎಲೆಕ್ಷನ್ ಬಂದಾಗ ಫೇಸ್ ಮಾಡುವುದು ಮಾಡೋಣ. ನೀವು ಕ್ಷೇತ್ರಗಳಿಗೆ ಹೋದಾಗ, ಆಯಾಯಾ ಶಾಸಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿದೆಯೇ, ಇಲ್ಲವೇ, ಹೇಗೆ ಹೋಗುತ್ತಿದೆ ಎನ್ನುವುದನ್ನು ನೋಡಿ, ಅಗತ್ಯವಾದಂಥ ಯಾವ ಯಾವ ಬದಲಾವಣೆಗಳನ್ನು ತರಬೇಕೋ ಅದಕ್ಕೆ ತಾವು ಮುಂದಾಗಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು, ಅನೇಕ ಸರ್ಕಾರೀ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಏಕೆ ಹೀಗಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಕೆಲವು ಕಡೆಗಳಲ್ಲಿ ಇದು ಒಂದು ರೀತಿಯ ರ್‍ಯಾಕೆಟ್ ಎಂದು ನನಗನ್ನಿಸುತ್ತದೆ. ಬಹಳ ದೊಡ್ಡ ಮೊತ್ತದ ಹಣವನ್ನು ಸರ್ಕಾರದ ವತಿಯಿಂದ ಬಾಡಿಗೆ ರೂಪದಲ್ಲಿ ಕೊಟ್ಟು, ಖಾಸಗೀ ಕಟ್ಟಡಗಳಲ್ಲಿ ಸರ್ಕಾರೀ ಕಛೇರಿಗಳು ನಡೆಯುತ್ತಿವೆ. ಮುಖ್ಯಮಂತ್ರಿಗಳಲ್ಲಿ ನಾನು ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ, ಬೆಂಗಳೂರು ನಗರದಲ್ಲಿ ಎಷ್ಟು ಸರ್ಕಾರೀ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿವೆ, ಎಷ್ಟು ಬಾಡಿಗೆ ಕಟ್ಟುತ್ತಿದ್ದೇವೆ, ಒಂದು ವೇಳೆ ಸಾಲವನ್ನೋ ಸೋಲವನ್ನೋ ಮಾಡಿ, ಹುಡ್ಕೋದಿಂದಲೋ ಅಥವಾ ಮತ್ತೊಂದು ಕಡೆಯಿಂದಲೋ ಹಣವನ್ನು ತಂದು ಸ್ವಂತ ಕಟ್ಟಡವನ್ನು ಕಟ್ಟಿದರೆ, ಎಷ್ಟು ಹಣವನ್ನು ಉಳಿತಾಯ ಮಾಡಬಹುದು ಎನ್ನುವಂಥಾದ್ದನ್ನು ನಮಗೆ ತಿಳುವಳಿಕೆ ಕೊಟ್ಟರೆ ನಾವು ಧನ್ಯರಾಗುತ್ತೇವೆ ಎನ್ನುವ ಮಾತನ್ನು ಅವರಿಗೆ ಹೇಳುತ್ತೇನೆ.

ಇನ್ನು ಸ್ಪೋರ್ಟ್ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಹರಿಯಾಣದಲ್ಲಿ 'ಜೈಲ್' ಎನ್ನತಕ್ಕಂಥ ಒಂದು ಸ್ಪೋರ್ಟ್ಸ್ ಶಾಲೆ ಇದೆ. ಇಡೀ ಇಂಡಿಯಾ ದೇಶದಲ್ಲಿ ಸ್ಪೋರ್ಟ್ಸ್ ಶಾಲೆ ಇರತಕ್ಕಂಥದ್ದು ಅದೊಂದು ಕಡೆಯಲ್ಲಿ ಮಾತ್ರ. ಇವತ್ತು ಏನಾಗಿದೆ ಎಂದರೆ, ಒಳ್ಳೆಯ ಚಿಕಿತ್ಸೆ – ಶ್ರೀಮಂತರದ್ದು, ಒಳ್ಳೆಯ ಶಾಲೆ–ಶ್ರೀಮಂತರದ್ದು, ಒಳ್ಳೆಯ ಆಟ–ಶ್ರೀಮಂತರದ್ದು, ಒಳ್ಳೆಯ ಸೈಟ್–ಶ್ರೀಮಂತರದ್ದು, ಒಳ್ಳೆಯ ಕಾಲೇಜುಗಳಲ್ಲಿ ಸೀಟು–ಶ್ರೀಮಂತರದ್ದು, ಇದ್ಯಾವುದರಲ್ಲೂ ಬಡವನಿಗೆ ಶೇರ್ ಇಲ್ಲ. ಹಿಂದೆ ನಾವು ಹಳ್ಳಿಗಳಲ್ಲಿ ಕೆರೆಗಳಲ್ಲಿ ಈಜು ಕಲಿತುಕೊಳ್ಳುತ್ತಿದ್ದೆವು. ಈಗ ಅಲ್ಲಿ ಕೆರೆಗಳೆಲ್ಲಾ ಬತ್ತಿ ಹೋಗಿ, ಬೋರ್‌ವೆಲ್ ಬಂದಿವೆ. ಬೆಂಗಳೂರಿನಲ್ಲಿರತಕ್ಕಂಥವರು ಕ್ಲಬ್‌ಗಳಿಗೆ ಹೋಗಿ ಸ್ವಿಮಿಂಗ್ ಪೂಲ್‌ನಲ್ಲಿ ಈಜು ಕಲಿತುಕೊಳ್ಳುತ್ತಾರೆ. ನಮ್ಮ ಹುಡುಗರಿಗೆ ಈಜುವುದಕ್ಕೇ ಬರುವುದಿಲ್ಲ. ಎಲ್ಲರಿಗೂ ಏನು ಕಾಯಿಲೆ ಹಬ್ಬಿದೆಯೋ ಗೊತ್ತಿಲ್ಲ, ಯಾವ ಮರಗಳ ಕೆಳಗೆ ನೋಡಿದರೂ, ಮೂರು ಕೋಲುಗಳನ್ನು ನಿಲ್ಲಿಸಿಬಿಟ್ಟು ಕ್ರಿಕೆಟ್ ಆಡುತ್ತಿರುತ್ತಾರೆ. ಈಗ ಆ ಗುಲಾಮರ ಆಟ ಬಂದುಬಿಟ್ಟಿದೆ. ಸ್ಥಳೀಯವಾಗಿದ್ದಂಥ ನಮ್ಮ ಆಟಗಳೆಲ್ಲಾ ಮಾಯವಾಗಿ ಬಿಟ್ಟಿವೆ. ಪ್ರತಿ ಜಿಲ್ಲೆಗೆ ಒಂದು ಕ್ರೀಡಾ ಶಾಲೆಯನ್ನು ಮಾಡಿ. ಪ್ರಾಯೋಗಿಕವಾಗಿ ಯಾವುದಾದರೊಂದು ಜಿಲ್ಲೆಯಲ್ಲಿ, ನಿಮ್ಮ ಗುಲ್ಬರ್ಗಾ ಜಿಲ್ಲೆಯಲ್ಲೇ ಒಂದು ಸ್ಪೋರ್ಟ್ಸ್ ಸ್ಕೂಲ್ ಮಾಡಿ, ಅದಕ್ಕೆ 500 ಎಕರೆಯನ್ನೋ 1000 ಎಕರೆಯನ್ನೋ ನಿಗದಿ ಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ದಯಮಾಡಿ ಹೆಲ್ತ್ ಮಿನಿಸ್ಟರ್ ಸಿ.ಎಂ.ಅವರನ್ನು ಫ್ರೀ ಮಾಡಬೇಕು. ತಾವು ಮಂತ್ರಿಗಳು, ತಮ್ಮ ಸೀಟಿನಲ್ಲಿರಿ ಸರ್. ಯಾವಾಗಲೂ ಸಿ.ಎಂ.ನಮಗೆ ಸಿಗುವುದಿಲ್ಲ ಎಂದು ನಾವ್ಯಾರಾದರೂ ಒಂದು ಕ್ಷಣ ಹೋಗಿ ಸಿ.ಎಂ. ಅನ್ನು ನೋಡುವುದು ಸರಿ.

ಆದರೆ ಬೆಳಿಗ್ಗೆಯಿಂದ ತಾವು ಅಲ್ಲೇ ಕುಳಿತಿದ್ದೀರಿ, ನಮಗೆ ಅವಕಾಶ ಕೊಡುತ್ತಿಲ್ಲ, ಅವರ ಭಾಷಣ ಕೇಳಲು ಬಿಡುತ್ತಿಲ್ಲ ಇದು ಚೆನ್ನಾಗಿರುತ್ತದೆಯೇ?

ಶ್ರೀ ಎನ್.ಚಲುವರಾಯಸ್ವಾಮಿ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಜನತೆಯ ಸಮಸ್ಯೆಗಳ ಬಗ್ಗೆ ಮಾತನಾಡಲಿಕ್ಕಾಗಿಯೇ ಸ್ವಾಮಿ ಹೋಗಿರುವುದು, ಬೇರೆ ಖಾಸಗಿಯಾಗಿ ಏನೂ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಬೆಳಿಗ್ಗೆಯಿಂದ ನೋಡುತ್ತಿದ್ದೇವೆ, ತಾವು ಅಲ್ಲೇ ಇದ್ದೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಬೆಳಿಗ್ಗೆಯಿಂದ ತಾವು ಅಲ್ಲೇ ಇದ್ದೀರಿ, ಅವರ ಅಟೆನ್ಷನ್ ಅನ್ನೂ ಡೈವರ್ಟ್ ಮಾಡುತ್ತಿದ್ದೀರಿ. ತಾವೂ ಗಮನವಿಟ್ಟು ಕೇಳುವುದಿಲ್ಲ, ಅವರಿಗೂ ಕೇಳಲು ಬಿಡುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವೂ ಕೇಳುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳನ್ನು ಸಹ ಕೇಳುವುದಕ್ಕೆ ಬಿಡುವುದಿಲ್ಲ. ಹಾಗಾದರೆ ಅವರು ಏತಕ್ಕೆ ಮಾತನಾಡಬೇಕು? ಅವರು ಹಲವಾರು ಉತ್ತಮ ಸಲಹೆಗಳನ್ನು ಕೊಡುತ್ತಿದ್ದರು.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ಪ್ರತಿಯೊಂದು ಹಂತದಲ್ಲಿ ಮಧ್ಯೆ ಮಧ್ಯೆ ಮಾತನಾಡಿದರೆ ಹೇಗೆ? ಸೀರಿಯಸ್ ಆಗಿ ಅವರು ಮಾತನಾಡುತ್ತಿರುವಾಗ ದಯಮಾಡಿ ನೀವೆಲ್ಲ ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕೆಂದು ಹೇಳುತ್ತಿರುವಾಗ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕುಳಿತುಕೊಂಡು ಬೇರೆ ವಿಚಾರ ಮಾತನಾಡಿದರೆ ಹೇಗೆ?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಇನ್ನು sports ವಿಚಾರದಲ್ಲಿ ಹೇಳುವುದಾದರೆ, ಪ್ರಾಯೋಗಿಕವಾಗಿ ಈ ವರ್ಷ ಒಂದು ಜಿಲ್ಲೆಯಲ್ಲಿ ಒಂದು sports school ಎಂದು ಪ್ರಾರಂಭ ಮಾಡಿ 10 ವರ್ಷ ಮೇಲ್ಪಟ್ಟಂಥ ಗಂಡು ಮಕ್ಕಳು, ಹೆಣ್ಣು ಮಕ್ಕಳು ಹೀಗೆ ಎಲ್ಲಾ ವರ್ಗದ ಮಕ್ಕಳಿಗೆ ಯಾವ ಯಾವ sports ನಲ್ಲಿ ಅವರಿಗೆ ಇಚ್ಛೆ ಇದೆ, ಅದರಲ್ಲಿ ಅವರಿಗೆ ಅಗತ್ಯವಾಗಿ ಬೇಕಾಗಿರತಕ್ಕಂಥ minimum education ಅನ್ನು ಕೊಡತಕ್ಕಂಥದ್ದು, ಆ ಆಟದಲ್ಲಿಯೇ ಅವರನ್ನು ಪ್ರವೀಣರನ್ನಾಗಿ ಮಾಡುವುದಕ್ಕೆ ಪ್ರಯೋಗಾತ್ಮಕವಾಗಿ ಇಡೀ ದೇಶಕ್ಕೆ ಮಾದರಿಯಾಗತಕ್ಕಂಥ ಒಂದು sports school ಅನ್ನು ನೀವು ಅನೌನ್ಸ್ ಮಾಡಿ. ..ಇದನ್ನು ಗುಲ್ಬರ್ಗಾದಲ್ಲಿ ಮಾಡಲಿ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ನೆನಪಿಗಾಗಿ ನಿಮ್ಮ ಜಿಲ್ಲೆಯಾದ ಗುಲ್ಬರ್ಗಾದಲ್ಲಿ ಮಾಡಿದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಎಲ್ಲೋ ಒಂದು ಕಡೆಯಲ್ಲಿ ಪ್ರಾರಂಭವಾಗಲಿ . ಮುಂದೆ ಬರುವವರಿಗೆ ಅದನ್ನು ಮಾಡಬೇಕೆನ್ನತಕ್ಕಂಥದ್ದು ಆಗಲಿ. ಇವತ್ತು ಕಸ್ತೂರ್ಬಾ ಶಾಲೆಗಳನ್ನು ತೆಗೆಯತಕ್ಕಂಥ ಕ್ರಮ ಪ್ರಾರಂಭಿಸಿದ್ದೀರಿ. ಅದಕ್ಕೆ ಸ್ವಾಗತ ಮಾಡುತ್ತೇವೆ. ಆ sports school ನಲ್ಲಿ ಬಡವರ ಮಕ್ಕಳಿಗೆ ಅವಕಾಶವಿದ್ದರೆ ಅವರಿಗೂ ಕೂಡ ತಮ್ಮ ಮನಸ್ಸಿನ ಒಳಗಿರತಕ್ಕಂಥ ಕನಸನ್ನು ನನಸು ಮಾಡುವುದಕ್ಕೆ ಒಂದು ಅವಕಾಶ ಸಿಕ್ಕಂತಾಗುತ್ತದೆ. ಇದನ್ನು ಎಲ್ಲಿ ಬೇಕಾದರೂ ಮಾಡಬಹುದು.

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಯಾವ ಕೆಲಸವನ್ನು ಮಾಡಬೇಕಾದರೂ ಬಡವರ ಹೆಸರನ್ನು ಹೇಳಿಕೊಂಡೇ ಮಾಡುವುದು. ಆದರೆ ಅದರ ಉಪಯೋಗ ಸಿಕ್ಕುವುದೆಲ್ಲಾ ಸಾಹುಕಾರರಿಗೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಹಾಗೇನಿಲ್ಲ. ಹಾಗಿದ್ದರೆ, ನೀವು ನಾವು ಅಸಂಬ್ಲಿಗೇ ಬರುವುದಕ್ಕೆ ಆಗುತ್ತಿರಲಿಲ್ಲ. ನಾನು ಸಾಹುಕಾರ ಅಲ್ಲ. ನೀವು ಸಾಹುಕಾರರೇ?

ಶ್ರೀ ಎಸ್.ರಾಜೇಂದ್ರನ್ : ಇಲ್ಲ ನಾನು ಸಾಹುಕಾರ.

ಅಧ್ಯಕ್ಷರು : ಮಾನ್ಯ ರಾಜೇಂದ್ರನ್‌ರವರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ. ದಯಮಾಡಿ ಅರ್ಥಮಾಡಿಕೊಳ್ಳಿ. ಅವರೇನೋ ಮಾತನಾಡುತ್ತಿರುತ್ತಾರೆ. ನಿಮಗೇನೋ ಅನಿಸುತ್ತದೆ. ಪ್ರತಿಯೊಬ್ಬರೂ ನಿಂತುಕೊಂಡು ಆ ರೀತಿ ನಿಮ್ಮ ಅನಿಸಿಕೆಗಳನ್ನು ಹೇಳಿದರೆ ಅವರು ಮಾತನಾಡಿ ಮುಗಿಸುವುದು ಹೇಗೆ?

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಇನ್ನು ಪೊಲೀಸ್ ಇಲಾಖೆ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ಹೋಂ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದಾರೆ. ಸಾರ್ವಜನಿಕರ ಟೀಕೆಗೆ, ಸಾರ್ವಜನಿಕರ ವ್ಯಾಖ್ಯಾನಕ್ಕೆ ಸಾಮಾನ್ಯವಾಗಿ ಗುರಿಯಾಗತಕ್ಕಂಥವರು ಪೊಲೀಸ್ ಇಲಾಖೆಯವರು. ಅದರಲ್ಲೂ ಕೂಡ ನಾವ್ಯಾರೂ I.G.ಯವರನ್ನು D.G.ಯವರನ್ನು ಮಾತನಾಡುವುದಿಲ್ಲ. ನಾವು constable ಅನ್ನು head constable ಅನ್ನು ಟೀಕೆ ಮಾಡುತ್ತೇವೆ. ಅವರ ಪರಿಸ್ಥಿತಿ ಹೇಗಿರುತ್ತದೆಂದರೆ, ನಿವೃತ್ತಿ ಹೊಂದಿದ ಮೇಲಂತೂ ತೀರಾ ಹೀನವಾಗಿರುತ್ತದೆ. ಅವರಿಗೆ ದಯಮಾಡಿ ಈ military serviceನಲ್ಲಿರತಕ್ಕಂಥವರಿಗೆ ಇದ್ದಂತೆ taxes avoid ಮಾಡಿ Departmental Canteen stores ಮಾಡಿ, ಪಾಪ, ಅವರಿಗೆ ದಿನನಿತ್ಯಕ್ಕೆ ಬೇಕಾಗಿರತಕ್ಕಂಥ ಸಾಮಾಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಅವರು ಮತ್ತು ಅವರ ಮಕ್ಕಳಿಗೆ medical relief, ಇದನ್ನು ಇಲ್ಲಿಯೇ head quaraters ನಲ್ಲಿ ತಾವು ಮಾಡಿ. ಅವರ ಮಕ್ಕಳಿಗೆ ಓದುವುದಕ್ಕೆ Police School ಎಂತಲೇ ಮಾಡಿ. Exclusively for the choldren of Police personnel, below the rank of Sub-Inspector ಎಂದು ಮಾಡಿ. Above the rank of Sub Inspectors ಅವರು ತಮ್ಮನ್ನು ತಾವೇ ರಕ್ಷಣೆ ಮಾಡಿಕೊಳ್ಳುತ್ತಾರೆ. ಆ ವರ್ಗದ ಜನರಿಗೆ ನೀವು ಸಹಾಯ ಮಾಡಿದರೆ ಏಣಾಗುತ್ತದೆಂದರೆ, once again Sir you are going to make a historic decision. ಅವರನ್ನು ಇವತ್ತು ಕೇಳುವವರಿಲ್ಲ. ಸಾರ್ವಜನಿಕರ ಟೀಕೆಗೆ ಒಳಗಾಗುವವರು ಅವರು, violence ಆದರೆ brave ಆಗಿ life ಮೇಲೆ ಆಸೆ ಬಿಟ್ಟು risk ತೆಗೆದುಕೊಂಡು field ನಲ್ಲಿ ನಿಂತುಕೊಳ್ಳತಕ್ಕಂಥವರು ಅವರು. ಪಾಪ, ಅವರು ನಿವೃತ್ತಿ ಹೊಂದಿದ ಮೇಲೆ ಯಾರ ಗಮನಕ್ಕೂ ಬಾರದೇ ಹೋಗತಕ್ಕಂಥವರು. Unsung, unwept, unmourned, he dies ಎಂದು Shakespeare ಹೇಳುತ್ತಾರಲ್ಲಾ, ಆ ವರ್ಗಕ್ಕೆ ಇವರು ಸೇರಿದಂಥವರು. Please think over, examine whether you can extend a helping hand to those people who are in distress. It would go a long way..

ಅಧ್ಯಕ್ಷರು: ಮಾನ್ಯ ರಮೇಶ್ ಕುಮಾರ್‌ರವರೆ, ಈಗ ಸದನವನ್ನು ಮುಂದೂಡೋಣ. ಆ ಮೇಲೆ ತಾವು ಮಾತನಾಡಬಹುದು.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಆಗಿಹೋಯ್ತು ಅಧ್ಯಕ್ಷರೆ, ಇನ್ನು ಸ್ವಲ್ಪ ಇದೆ.

ಶ್ರೀ ವಾಟಾಳ್ ನಾಗರಾಜ್ : ಈ ಪೊಲೀಸ್‌ನವರನ್ನು ಯಾರೂ ಕೇಳುವವರಿಲ್ಲ. ಈ ಒಂದು ಇಲಾಖೆ ನರಕದ ಇಲಾಖೆ, ಪೊಲೀಸ್ ಇಲಾಖೆ ಅಲ್ಲ. ಪೊಲೀಸ್ ಇಲಾಖೆಯೆಂದರೆ ನರಕದ ಇಲಾಖೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ ಕಡೆಯದಾಗಿ ಎರಡು ವಿಷಯ ಬಾಕಿ ಇದೆ. ಒಂದನೆಯದು, ನಮ್ಮ ಮಂತ್ರಿಮಂಡಲದ ಸದಸ್ಯರುಗಳು ಯಾರಿದ್ದಾರೆ, ಅವರುಗಳಿಗೆ ಮುಖ್ಯಮಂತ್ರಿಗಳು ಒಂದು ತಾಕೀತು ಮಾಡಬೇಕು. ಬೆಂಗಳೂರಿನಲ್ಲಿದ್ದಾಗ ಅವರ ಕಚೇರಿಗೆ ಎಷ್ಟು ಹೊತ್ತಿಗೆ ಬರಬೇಕೆನ್ನುವುದು ನಿಗದಿಯಾಗಬೇಕು. ಫೋನ್ ಮಾಡಿದರೆ ಅವರ ಮನೆಯಲ್ಲಾಗಲೀ ಕಚೇರಿಯಲ್ಲಾಗಲಿ ಫೋನ್ ಅಟೆಂಡ್ ಮಾಡತಕ್ಕಂಥವರಿಗೆ ಹೇಳಬೇಕು. Timings fix ಮಾಡಬೇಕು. M.P.ಗಳು M.L.A. ಗಳು ಸಾರ್ವಜನಿಕರು ಹೋಗಬೇಕೆಂದರೆ, ಮಂತ್ರಿಗಳು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ ಎಂದು ಹೇಳುವುದು, ಬಾತ್‌ರೂಂನಲ್ಲಿದ್ದಾರೆಂದು ಹೇಳುವುದು, ಬರುತ್ತಾರೆಂದು ಹೇಳುವುದು, ಈಗತಾನೆ ಹೊರಟುಹೋದರೆಂದು ಹೇಳುವುದು ಇದು ಚೆನ್ನಾಗಿ ಕಾಣುವುದಿಲ್ಲ. ನಾನು ಹೇಳುವುದೇನೆಂದರೆ, ಬೆಂಗಳೂರು headquarters ನಲ್ಲಿದ್ದರೆ, ಒಂದು ವೇಳೆ ಡಿಪಾರ್ಟ್‌ಮೆಂಟಲ್ ಮೀಟಿಂಗ್ ಇದ್ದರೆ, ಸರಿಯಾಗಿ ತಿಳಿಸಬೇಕು. ಈಗ ಎಜುಕೇಷನ್ ಮಿನಿಸ್ಟರ್ ಇದ್ದಾರೆ ಅವರು University ಗೆ ಹೋಗಬೇಕಾಗಿರುತ್ತದೆ. ಸಂತೋಷ. ಹೋಗಿಬರಲಿ. ಅವರು University ಗೆ ಹೋಗಬಾರದೆಂದು ನಾವು ಹೇಳುತ್ತಿಲ್ಲ. ಆದರೆ ಅವರ movement should be made public, ನಾನು ಒಬ್ಬ ಶಾಸಕನಾಗಿದ್ದು ಒಬ್ಬ ಮಂತ್ರಿಯನ್ನು ಭೇಟಿ ಮಾಡಬೇಕೆಂದು ಬಂದರೆ 11.30 ರಿಂದ 12.00 ಗಂಟೆಯೊಳಗೆ ಬನ್ನಿ ಎಂದು ಹೇಳಬೇಕು. ಅಂದರೆ ಭೇಟಿ ಮಾಡುವವರು ಸಹ ಸಮಯ ತೆಗೆದುಕೊಳ್ಳದೆ ಹೋಗಬಾರದು. ರಾತ್ರಿ 11 ಗಂಟೆಗೆ ಹೋಗುವುದು ಸರಿಯಲ್ಲ. ಮಂತ್ರಿಗಳೆಂದರೆ ಅವರಿಗೆ private life ಬೇಡವೇ, ಅವರೇನು ಇವರ ಬಂದಿಗಳೇ? ಅವರಿಗೂ ಪಾಪ ಸ್ವಾತಂತ್ರ್ಯವಿರಬೇಕು. ಅವರ privacy ಯನ್ನು ನಾವು ಗೌರವಿಸಬೇಕು. ಅದರ ಜೊತೆಗೆ ನಾವು public ಗೆ ಸೇರಿದವರು ಎನ್ನತಕ್ಕಂಥ ಜವಾಬ್ದಾರಿ ಅವರಿಗೂ ಇರಬೇಕು. ಈ ವಿಷಯದಲ್ಲಿ ಅವರಿಗೆ ಸ್ವಲ್ಪ ತಾಕೀತನ್ನು ಮಾಡಬೇಕೆಂದು ಹೇಳಿ, ಇನ್ನು ಅತ್ಯಂತ ನೋವಿನಿಂದ ದುಃಖದಿಂದ ತಮ್ಮ ಅನುಮತಿಯನ್ನು ಪಡೆದು ನನ್ನ ಸ್ವಂತಕ್ಕೆ ಸಂಬಂಧಿಸಿದ ಒಂದು ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕಡೆಯದಾಗಿ ನಾನು ಪ್ರಯತ್ನ ಮಾಡುತ್ತಿದ್ದೇನೆ. ಮೊನ್ನೆ ಶೃಂಗೇರಿ DySp ವಿಚಾರಕ್ಕೆ ಬಂದಾಗ ಮಾನ್ಯ ಮಾಧುಸ್ವಾಮಿಯವರು ಮತ್ತು ವಾಟಾಳ್‌ರವರು ಪ್ರಸ್ತಾಪ ಮಾಡಿದರು. 1978ನೇ ಇಸವಿಯಲ್ಲಿ ಈ ಸದನಕ್ಕೆ ನಾನು ಕಾಲಿಟ್ಟಾಗ ನನಗೆ 22 ವರ್ಷ ವಯಸ್ಸಾಗಿತ್ತು. ಅಲ್ಲಿಂದ ಏಳುವುದು ಬೀಳುವುದು ಹೊರಗೆ ಬರುವುದು ಒಳಗೆ ಬರುವುದು ಇದು ನಡೆಯುತ್ತಾ ಬಂತು. ನನ್ನದೇ ಆದಂಥ ರೀತಿಯಲ್ಲಿ

ಗೌರವವಾಗಿ ಬದುಕತಕ್ಕಂಥ ಪ್ರಯತ್ನವನ್ನು ನಾನು ಮಾಡಿದ್ದೇನೆ. ನನಗೆ ಕಳೆದ ಕೆಲವು ದಿನಗಳಲ್ಲಿ ಸಹಿಸಲಾರದ ಮಾನಸಿಕ ವೇದನೆ ಉಂಟಾಗಿದೆ. ಒಂದು ಹಂತದಲ್ಲಿ ಪುನಃ ನಾನು ಈ ಸದನದೊಳಗೆ ಬಂದು 4 ಜನರ ಮಧ್ಯೆ ಕುಳಿತು ಕೊಳ್ಳುವುದಕ್ಕಾದರೂ ನನಗೆ ಧೈರ್ಯ ಇರುತ್ತದೆಯೇ ಎನ್ನತಕ್ಕಂಥ ಸ್ಥಿತಿ ನನಗೆ ಬಂದೊದಗಿತ್ತು. ಒಂದೆರಡು ಸಲ ಮಾನ್ಯ ಪಾಟೀಳರು ಎ.ಬಿ.ಪಾಟೀಲರು ಸಿಕ್ಕಿದಾಗ ನನಗೆ ಅರಿವೇ ಇಲ್ಲದೆ ಅವರ ಹತ್ತಿರ ಮಗು ತರಹ ಅತ್ತುಬಿಟ್ಟೆ. ಹಾಗೆಲ್ಲಾ ಮಾಡಬೇಡಿ, ಧೈರ್ಯವಾಗಿರಿ ಎನ್ನತಕ್ಕಂಥ ಮಾತನ್ನು ಹೇಳಿದರು. ಇದರ ವಿವರ ಇಷ್ಟೆ ಮಾನ್ಯ ಅಧ್ಯಕ್ಷರೆ, 2003 ನೇ ಇಸವಿಯಲ್ಲಿ ಮಾರ್ಚ್ 31ನೇ ತಾರೀಕು ಒಂದು ಘಟನೆ ನಡೆಯಿತು. ಇಬ್ಬರ ಕೊಲೆ ಆಯಿತು. ಕೋರ್ಟಿನ ಮುಂದಿರತಕ್ಕಂಥ ವಿಚಾರದ ಒಂದು ಅಕ್ಷರವನ್ನೂ ಸಹ ನಾನು ಪ್ರಸ್ತಾಪ ಮಾಡುವುದಿಲ್ಲ. ಒಬ್ಬ ಅಧಿಕಾರಿಯ ದುರ್ನಡತೆ ಬಗ್ಗೆ ಮಾತ್ರ ಈ ಸದನದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಮಾಡುತ್ತೇನೆ. 24 ಗಂಟೆಯೊಳಗೆ ಆ ವಿಚಾರವನ್ನು COD ಯವರು ತನಿಖೆಗಾಗಿ ಜವಾಬ್ದಾರಿಯನ್ನು ತೆಗೆದುಕೊಂಡರು. COD ಯವರು ತನಿಖೆಗಾಗಿ ಜವಾಬ್ದಾರಿ ತೆಗೆದುಕೊಂಡ ಮೇಲೆ 15 ಜನ ಅಪರಾಧಿಗಳನ್ನು ಅವರು ಗುರುತು ಮಾಡಿದರು. ಅದರಲ್ಲಿ 3 ಜನ ಜೈಲಿನ ಒಳಗಿದ್ದಾರೆ. ಇಬ್ಬರು ಪರಾರಿಯಾಗಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಇದನ್ನು ಪ್ರಸ್ತಾಪ ಮಾಡಬಾರದೇನೋ ಎನ್ನುವುದು ನಮ್ಮ ಭಾವನೆ. ಬೇಡ. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಹೀಗೆ ಮಧ್ಯೆ ಪ್ರವೇಶ ಮಾಡಿದರೆ ಹೇಗೆ ಸರ್. ಕಾರ್ಯಕಲಾಪ ಮುಗಿಯುವುದು ಯಾವಾಗ ?

(ಗೊಂದಲ)

ಅಧ್ಯಕ್ಷರು : ಮಾನ್ಯ ರಮೇಶ್ ಕುಮಾರ್‌ರವರೆ, ನಾನು ಈಗ ಸದನವನ್ನು ಮುಂದೂಡುತ್ತೇನೆ. ಅನಂತರ ದಯವಿಟ್ಟು ಮಾತನಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಇಲ್ಲಿ ಮಾತನಾಡಿದರೆ sub-judice ಆಗುತ್ತದೆ ಸರ್. ದಯವಿಟ್ಟು ಇಲ್ಲಿ ಪ್ರಸ್ತಾಪ ಮಾಡಬೇಡಿ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಕೋರ್ಟ್ ಮುಂದೆ ಇರತಕ್ಕಂಥದ್ದನ್ನು ಪ್ರಸ್ತಾಪ ಮಾಡುತ್ತಿಲ್ಲ. I am only trying to bring to the notice of the House. ನನ್ನ ಪ್ರಶ್ನೆ ಅಲ್ಲ. ನನಗೆ ಆಗಬಾರದುದ್ದೆಲ್ಲಾ ಆಗಿ ಹೋಗಿದೆ. ಒಬ್ಬ ಅಧಿಕಾರಿ ಹೀಗೆಯೇ ಮುಂದುವರಿದರೆ including Hon'ble Leader of this House none of you are safe. ಯಾರಿಗೆ ಬೇಕಾಗಿದ್ದರೂ ಕೂಡ ಇಂಥ ಪ್ರಕರಣದಲ್ಲಿ ಸಿಕ್ಕಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಮೂದು ಮಾಡುವುದಕ್ಕೆ ಮಾತ್ರ ನಿಂತಿದ್ದೇನೆ. ನನಗೆ ಆಗಬಾರದುದ್ದೆಲ್ಲಾ ಆಗಿಹೋಯ್ತು. ನನಗೆ ಇದರ relief ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರು ಮಾಡಬಾರದು, ಮತ್ತೆ ಶೃಂಗೇರಿ ಎಂ.ಎಲ್.ಎ.ರವರು ಅವರಾಗಿ ಪ್ರಸ್ತಾಪ ಮಾಡಬಾರದು ಎಂತಲೇ ನಾವು raise ಮಾಡಿದ್ದೇವೆ. ದಯಮಾಡಿ ಇದನ್ನು stop ಮಾಡಿಬಿಡಿ ಸರ್.

ಶ್ರೀ ಕೆ.ಆರ್.ರಮೇಶ್ ಕುಮಾರ್: ನಾನು ತಮ್ಮಲ್ಲಿ ಇಷ್ಟೇ ಕೇಳುತ್ತೇನೆ. ಒಬ್ಬ ಅಧಿಕಾರಿಯ ದುರ್ನಡತೆಯ ಬಗ್ಗೆ ತನ್ನಲ್ಲಿರತಕ್ಕಂಥ ಅಧಿಕಾರವನ್ನು ದುರುಪಯೋಗ ಮಾಡಿದಾಗ ನಮಗೆ ಈ ತೊಂದರೆ ಉಂಟಾದಾಗ ಇದನ್ನು ನಾವು ಇನ್ನೂ ಎಲ್ಲಿ ಹೇಳಿಕೊಳ್ಳಬೇಕು? ಯಾರ ಗಮನಕ್ಕೆ ತರಬೇಕು? ಖಾಸಗಿಯಾಗಿ ಹೇಳುವುದಕ್ಕೆ ನಮ್ಮ ಸ್ವಂತ ವಿಚಾರವೇ? ನಾನು ಇಷ್ಟೇ ಹೇಳುತ್ತೇನೆ. ಒಬ್ಬ ಅಧಿಕಾರಿ ಬಂದು ವಿಚಾರಣೆಯನ್ನು ಪೂರ್ಣ ಮಾಡಿ ತನ್ನ ಆರೋಪ ಪಟ್ಟಿ ಎಲ್ಲಾ ಸಲ್ಲಿಸಿ ಹೋದ ಮೇಲೆ ಈ ಘಟನೆ ನಡೆದು ಒಂದು ವರ್ಷ ಕಳೆದ ಮೇಲೆ ಪುನಃ ಮತ್ತೊಬ್ಬ ಅಧಿಕಾರಿ ಬರುತ್ತಾರೆ, ಯಾವ ಸಾಕ್ಷಿಯನ್ನು ಮೊದಲು ವಿಚಾರಿಸಿ, ಆತ ನನಗೇನೂ ಗೊತ್ತಿಲ್ಲ ಎಂದು ಹೇಳಿರುತ್ತಾನೆ. ಅದೇ ಸಾಕ್ಷಿ ಕಡೆಯಿಂದ ಬರೆಸಿಕೊಳ್ಳುತ್ತಾರೆ. ಅದೇ ಹಿಂದೆ ಇದ್ದಂಥ ಅಧಿಕಾರಿಗಳು ಬಂದು –'ಇಲ್ಲ, ನಾವು ಮೊದಲು ಹೇಳಿರುವುದೇ ಸರಿ' ಎಂದು ಹೇಳುತ್ತಾರೆ. ಯಾರು ತನ್ನ ಹಿಂದಿದ್ದಂಥ ಅಧಿಕಾರಿಗಳನ್ನು ಇಂಥ ವಿಚಾರಣೆಗೆ ಗುರಿಪಡಿಸುತ್ತಾರೆ I do not want go into details. ನನ್ನ chain of thought ಏನಿತ್ತು ಅದು ನೀವು ಹೇಳಿದ ತಕ್ಷಣ ಮುರಿದು ಹೋಯಿತು.

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಅವರ ಭಾವನೆ ಸದನದಲ್ಲಿರುವ ಎಲ್ಲಾ ಜನರಿಗೆ ಗೊತ್ತಿದೆ. ಮತ್ತೆ ಇಂಥವರು ನೇರವಾಗಿ ವಕೀಲರಲ್ಲದಿದ್ದರೂ ಇಂಥ ಅನೇಕ ಕೇಸ್‌ಗಳನ್ನು ಅವರು ಕೋರ್ಟ್‌ನಲ್ಲಿ ಎದುರಿಸಿರುವಂಥದ್ದು ಇದೆ. ಮುಂದೆ ಸಾಕ್ಷಿ ನುಡಿಯಬೇಕಾಗಿರುವ ಸಂದರ್ಭಗಳಲ್ಲಿ ನಾವು ಬರೀ ಪತ್ರಿಕಾ ಹೇಳಿಕೆ ಕೊಟ್ಟಿದ್ದನ್ನೇ ಸುಪ್ರೀಂಕೋರ್ಟ್‌ನಲ್ಲಿ ಛಾಲೆಂಜ್ ಮಾಡಿದ ಉದಾಹರಣೆಗಳಿವೆ. ತಾವು, ಪ್ರಿವಿಲೆಜೆಸ್ ಇದೆ, ಇದನ್ನೆಲ್ಲಾ ಹೇಳಿದರೂ ಕೂಡ, ಅದನ್ನು ಬೇರೆ ಬೇರೆ ರೀತಿಯಲ್ಲಿ ತಿರುಗಿಸುವ ಸಂದರ್ಭ ಬರಬಹುದು. ಆದುದರಿಂದ, ತಾವು ಗಮನ ಸೆಳೆಯಬೇಕಾಗಿತ್ತೆಂದು ಹೇಳಿದಿರಿ. ನಾವು ನಿಮಗೆ ಹೇಳುತ್ತೇವೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ನಿಮ್ಮ ಹಿತೈಷಿಯಾಗಿರುವುದರಿಂದ ಹೇಳುತ್ತೇನೆ, ಆ ವಿಷಯವನ್ನು ಪ್ರಸ್ತಾಪ ಮಾಡದೆ ದಯವಿಟ್ಟು ಅಲ್ಲಿಗೇ ಬಿಡಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ನಾನು ಮಾನ್ಯ ಮಂತ್ರಿಯವರ ಮಾತನ್ನು ಗೌರವಿಸುತ್ತೇನೆ. ಮುಖ್ಯಮಂತ್ರಿಗಳು ಇದುವರೆಗೂ ಕೂಡ ಈ ವಿಷಯದಲ್ಲಿ ನನ್ನ ಆತಂಕದ ಘಳಿಗೆಗಳಲ್ಲಿ ಅವರು ನನಗೆ ಸಹಕಾರ ಕೊಟ್ಟರು. ಸಹಾಯ ಪಡೆದುಕೊಂಡು ಮರೆಯುವ ಮನುಷ್ಯ ನಾನಲ್ಲ. ಈಗ ಕಡೆಯದಾಗಿ, ನನ್ನ ಸಲಹೆಗಳನ್ನು ಕೊಟ್ಟಿದ್ದೇನೆ, ಸರ್ಕಾರದ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳುತ್ತೇನೆ. ಕೆಲವರಿಗೆ ಅಧಿಕಾರಕ್ಕೆ ಬರುವುದಕ್ಕೆ ಯೋಗ ಇರುತ್ತದೆ, ಯೋಗ್ಯತೆ ಇರುವುದಿಲ್ಲ. ಕೆಲವರಿಗೆ ಯೋಗ್ಯತೆ ಇರುತ್ತದೆ, ಅವರು ಅಧಿಕಾರಕ್ಕೇ ಬರುವುದಿಲ್ಲ. ಯೋಗ್ಯತೆ ಇದ್ದೂ, ಯೋಗ ಕೂಡಿ ಬಂದು ಅಧಿಕಾರದಲ್ಲಿರುವುದು ಬಹಳ ಅಪರೂಪ. ವೀರಪ್ಪನ್ ಅನ್ನು ಹಿಡಿಯಬೇಕು, ಮುಗಿಸಬೇಕೆಂದು ಹಿಂದೆ ಇದ್ದ ಎಲ್ಲಾ ಸರ್ಕಾರಗಳು ಕೂಡ ಪ್ರಯತ್ನ ಮಾಡಿದರೂ, ಯಾರದ್ದೂ ಏನೂ ಕಡಿಮೆ ಪ್ರಯತ್ನ ಇಲ್ಲ, ಇವರಿಗೇ ಯೋಗ ಕೂಡಿ ಬಂತು ನೋಡಿ. ಇವರು ಮುಖ್ಯಮಂತ್ರಿಗಳಾದ ವೇಳೆಗೇ ವೀರಪ್ಪನ್ ಕಾಟ ತಪ್ಪುತ್ತದೆ.

ಶ್ರೀ ವಾಟಾಳ್ ನಾಗರಾಜ್: ಹಿಡಿದದ್ದು ಯಾರು?

ಅಧ್ಯಕ್ಷರು: ವಾಟಾಳ್ ನಾಗರಾಜ್‌ರವರೆ, ಮಾತನಾಡಲಿ ಬಿಡಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಾನೇನು ಹೇಳುತ್ತೇನೆ, ಇತಿಹಾಸ ಒಂದಿರುತ್ತದಲ್ಲವೇ? ವೀರಪ್ಪನ್ ಹಾವಳಿ, ಅವನಿಂದಾದ ಹಿಂಸೆ, ಈ ಎಲ್ಲವೂ ಕೂಡ ಕೊನೆ ಆದದ್ದು ಯಾವಾಗ? ಮುಖ್ಯಮಂತ್ರಿಗಳಾಗಿ ಧರಂಸಿಂಗ್‌ರವರು ಈ ರಾಜ್ಯದ ಆಡಳಿತವನ್ನು ನಡೆಸುವ ವೇಳೆಗೆ. ಅದಕ್ಕಿಂತ ಹೆಚ್ಚು ಸಂತೋಷದ ವಿಷಯವೆಂದರೆ, ಸಿಇಟಿ ವಿಚಾರ ಬಹಳ ದೊಡ್ಡ ಗೊಂದಲವಾಗಿ ಸರ್ವಪಕ್ಷ ಸಭೆ ಕರೆದು, ಸರ್ವ ಪಕ್ಷಗಳ ನಿಯೋಗವನ್ನು ಡೆಲ್ಲಿಗೆ ಕರೆದುಕೊಂಡು ಹೋಗಿ, ಎಲ್ಲೋ ಒಂದು ಕಡೆ ಬಡವರ ಮಕ್ಕಳ ಡಿಮಾಂಡ್ ಬಿದ್ದು ಹೋಗಿತ್ತು. ಸಿಇಟಿ ವಿಚಾರವನ್ನು ಪರಿಹಾರ ಮಾಡುವ ವೇಳೆಗೆ ಅವರು ಯಶಸ್ವಿಯಾದರು ಎಂದು ನನ್ನ ಮನಸ್ಸಿಗೆ ಅನಿಸಿತ್ತು. ಈ ಎಲ್ಲಾ ಯಶಸ್ಸಿನ ಗುಟ್ಟು ಅವರ ನಮ್ರತೆ. ಪ್ರತಿಯೊಬ್ಬರನ್ನು ಕೂಡ ವಿಶ್ವಾಸದಿಂದ ನೋಡುವಂಥದ್ದು. ಕಾವೇರಿ ಗಲಾಟೆ ಬರಬಹುದೆಂದು ಕಾದಿದ್ದಾರೆ, ಚಾನ್ಸೇ ಇಲ್ಲ. ಕಾವೇರಿ ತುಂಬಿ ಹರಿಯಿತು. ನಾನಲ್ಲ, ನೀವು.

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ಗಲಾಟೆ ಬರುತ್ತದೆಂದು ಏಕೆ ಕಾಯಬೇಕು?

ಶ್ರೀ ಕೆ.ಆರ್.ರಮೇಶ್‌ಕುಮಾರ್: ಏನಾದರೂ ಕಾವೇರಿಯಾದರೂ ಬಂದರೆ ಮುಖ್ಯಮಂತ್ರಿಗಳ ಮೇಲೆ ಗಲಾಟೆ ಮಾಡಬೇಕೆಂದಿದ್ದರು. ಇವರಿಗೆ ಅದಕ್ಕೆ ಅವಕಾಶ ಇಲ್ಲ. ಕಾವೇರಿ ತುಂಬಿ ಹರಿಯಿತು. ವೀರಪ್ಪನ್ ಸತ್ತುಹೋದ.

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಗೊತ್ತಿದೆ. ಮಾನ್ಯ ರಮೇಶ್ ಕುಮಾರ್‌ರವರೆ, ನಾನು ಗಲಾಟೆ ಮಾಡುತ್ತಿದ್ದೆನೋ, ಇಲ್ಲವೋ ಎಂಬುದು ಅವರಿಗೆ ಗೊತ್ತಿದೆ. ನೀವು ಪ್ರಚೋದನೆ ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೆ, ನೀವು ಮುಂದುವರಿಸಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಒಬ್ಬೊಬ್ಬರು ಅಧಿಕಾರಕ್ಕೆ ಬರಬೇಕಾದರೆ......ನಾವು ಹೆಣ್ಣು ತರಬೇಕಾಗಿದ್ದರೆ, ಜಾತಕ ತೋರಿಸುವುದು, ಲೆಕ್ಕಾಚಾರ ಹಾಕುವುದು, ಕಾಲ್ಗುಣ ಚೆನ್ನಾಗಿರಬೇಕೆಂದು ಮಾತನಾಡುತ್ತೇವೆ. ಇದು ಹಳ್ಳಿಗಳಲ್ಲಿ ವಾಡಿಕೆ. ಒಂದು ಆಕಳು ತರಬೇಕಾದರೂ ಕೂಡ ಅದರ ಕಾಲ್ಗುಣ ನೋಡುತ್ತೇವೆ, ಅದರ ಹಲ್ಲು ನೋಡುತ್ತೇವೆ, ಎಲ್ಲಾ ನೋಡುತ್ತೇವೆ. ಒಬ್ಬೊಬ್ಬರು ರಾಜ್ಯದ ಅಧಿಕಾರವನ್ನು ವಹಿಸಿದ ಘಳಿಗೆ ಕೂಡ ಬಹಳ ಮುಖ್ಯ. ಮಾನ್ಯ ಧರ್ಮಸಿಂಗ್‌ರವರು ಈ ರಾಜ್ಯದ ಅಧಿಕಾರವನ್ನು ವಹಿಸಿಕೊಂಡ ಮೇಲೆ 4 ವರ್ಷಗಳ ಕಾಲ ಇದ್ದ ಭೀಕರ ಬರಗಾಲ ಮಾಯವಾಯಿತು. ಈಗ ಬೆನ್ನಿಹಿನ್ ಬೇಕಾಗಿಲ್ಲ, ಇನ್ನೊಬ್ಬರು ಬೇಕಾಗಿಲ್ಲ, ಇವರ ಹಿಂದೆ ನಾವೆಲ್ಲರೂ ಬೀಳಬಹುದು. ಇವರು ಬಂದ ಮೇಲೆ ಎಲ್ಲಾ ಒಳ್ಳೆಯದಾಗುತ್ತಿದೆ. ಸಮಸ್ಯೆಗಳು ತಾನೇ ಪರಿಹಾರವಾಗುತ್ತಾ ಇದೆ. ಇವರ ಅಧಿಕಾರಾವಧಿಯಲ್ಲಿ ಬಡವ ನೆಮ್ಮದಿಯಾಗಿ ಉಸಿರು ಬಿಡುವಂಥ ವಾತಾವರಣ ಉಂಟಾಗಲಿ. ಆಡಳಿತದಲ್ಲಿ ಇನ್ನೂ ಹೆಚ್ಚು ಬಿಗಿ ಬರಲಿ. ಈ 5 ವರ್ಷಗಳ ಅವಧಿಗೆ ಅವರು ಪೂರ್ಣ ಅಧಿಕಾರದಲ್ಲಿದ್ದು, ರಾಜ್ಯದ ಜನರ ಕ್ಷೇಮವನ್ನು ನೋಡುವುದಕ್ಕೆ ಅವರ ಇಡೀ ಮಂತ್ರಿಮಂಡಲ ಯಾರಿದ್ದಾರೆ, ಅವರಿಗೆಲ್ಲ ಶುಭವಾಗಲಿ. ಮಂತ್ರಿಮಂಡಲ ತಯಾರು ಮಾಡಿ ರಾಜ್ಯಪಾಲರ ಮೂಲಕ ತಮ್ಮ ನಿತಿಯನ್ನೇನು ಪ್ರಕಟಣೆ ಮಾಡಿದ್ದಾರೆ, ಸನ್ಮಾನ್ಯ ರಾಜ್ಯಪಾಲರು ಏನು ಈ ಭಾಷಣವನ್ನು ಅವತ್ತು ಸ್ವಲ್ಪ ಪ್ರಯಾಸಪಟ್ಟರು, ಇಲ್ಲೆಲ್ಲಾ ಗದ್ದಲವಾಯಿತು. ನಿಮ್ಮ ಪುಣ್ಯದಿಂದ ಅವರು ಸುಸ್ತಾಗಿ ಕುಳಿತು ಬಿಟ್ಟರು. ಮತ್ತೆ ಪಾಪ ಓದಿದ್ದೇನೆಂದು...... ನಿಮ್ಮ ಪುಣ್ಯದಿಂದ ಎಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್: ನೀವು ಸುಮ್ಮನೆ ಅವರಿಗೆ 8 ಪುಟ ಬರೆದುಕೊಡುವುದು ಬಿಟ್ಟು, 40 ಪುಟ ಬರೆದುಕೊಟ್ಟರೆ, ಹೇಗೆ? ಅವರನ್ನು ಕೂರಿಸಿ, ಓದಿಸಿ, 8 ಪುಟ ಬರೆದುಕೊಟ್ಟಿದ್ದರೆ, ಖಂಡಿತವಾಗಿ ಏನೂ ಆಗುತ್ತಿರಲಿಲ್ಲ. ಸಾಕಾಗಿತ್ತು.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಸನ್ಮಾನ್ಯ ರಾಜ್ಯಪಾಲರು ಈ ಸಭೆಯನ್ನುದ್ದೇಶಿಸಿ ಮಾಡಿದ ಈ ಭಾಷಣಕ್ಕೆ ನಾನು ಈ ಸದನದ ಸದಸ್ಯನಾಗಿ, ಆಡಳಿತದ ಪಕ್ಷದ ಪರವಾಗಿ, ಇಡೀ ಸದನದ ಪರವಾಗಿ ಮಾನ್ಯ ರಾಜ್ಯಪಾಲರಿಗೆ ನನ್ನ ಅತ್ಯಂತ ನಮ್ರಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತಾ, ಸರ್ಕಾರ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ, ಒಳ್ಳೆಯ ದಿಕ್ಕಿನಲ್ಲಿ ಹೊರಟಿದೆ, ಅವರಿಗೆ ಯಶಸ್ಸಾಗಲಿ, ಈ ಸರ್ಕಾರ 5 ವರ್ಷಗಳನ್ನು ಪೂರೈಸಲಿ ಎಂದು ಹೇಳಿ, ಅಧ್ಯಕ್ಷರು ಅವಕಾಶ ಕೊಟ್ಟು, ನನ್ನೊಡನೆ ಸಹಕರಿಸಿದ ಎಲ್ಲಾ ಸದಸ್ಯರಿಗೆ ಮತ್ತು ತಮಗೂ ವಂದಿಸಿ, ನನ್ನ ಮಾತುಗಳನ್ನು ಮುಗಿಸುವ ಮೊದಲು ನಮಸ್ಕಾರ.

ಅಧ್ಯಕ್ಷರು: ಈಗ 3.15 ಗಂಟೆವರೆಗೆ ಸದನವನ್ನು ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.15 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.15 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3 ಗಂಟೆ 31 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

(ಸಭಾಧ್ಯಕ್ಷರು ಶ್ರೀ ಕೃಷ್ಣರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ(ಮುಂ)

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ(ಬೆಳ್ಳಾವಿ): ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ರಾಜ್ಯಪಾಲರು ದಯಪಾಲಿಸಿದಂಥ ಭಾಷಣಕ್ಕೆ ವಂದನೆಯನ್ನು ಸಲ್ಲಿಸತಕ್ಕಂಥ ನಿರ್ಣಯದ ಅನುಮೋದನೆಯನ್ನು ಮಾಡುತ್ತಾ, ಮೊದಲನೆಯದಾಗಿ ರಾಜ್ಯಪಾಲರ ಭಾಷಣವೆಂದರೆ, ಸರ್ಕಾರದ ನೀತಿ ನಿರೂಪಣೆಗಳನ್ನು ಮತ್ತು ಅವರ ಒಂದು ಮುಂದಿನ ದಿನಗಳಲ್ಲಿ ಮಾಡತಕ್ಕಂಥ ಕಾರ್ಯಕ್ರಮಗಳ ವಿವರವನ್ನು ನೀಡತಕ್ಕಂಥದ್ದು. ಆದರೆ ಮಾನ್ಯ ರಾಜ್ಯಪಾಲರ ಭಾಷಣ ನಡೆಯತಕ್ಕಂಥ ಸಂದರ್ಭದಲ್ಲಿ ಏನು ಈ ವಿರೋಧ ಪಕ್ಷಗಳು ಸಭೆಯಲ್ಲಿ ನಡೆಸಿದಂಥ ನಡವಳಿಕೆಗಳು ಏನಿವೆ ಅದರ ಬಗ್ಗೆ ನಾನು ಕೆಲವು ಮಾತುಗಳನ್ನು ಮೊದಲು ಹೇಳಬೇಕೆಂದು ಬಯಸುತ್ತೇನೆ. ಈಗ ನಮ್ಮಲ್ಲಿ ಯಾರಾದರೂ ಒಬ್ಬ ಅಧಿಕಾರಿ ಕರ್ತವ್ಯದಲ್ಲಿದ್ದಾಗ......

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಡವಳಿಕೆಗಳ ಬಗ್ಗೆ ಮಾತನಾಡುತ್ತೇನೆಂದರೆ ಇದರ ಅರ್ಥ ಏನು? ನಡವಳಿಕೆಗಳ ಬಗ್ಗೆ ಇವರು ಏನು ಮಾತನಾಡುವುದು?

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ: ಮಾನ್ಯ ಶ್ರೀರಾಮರೆಡ್ಡಿಯವರೆ, ನಡವಳಿಕೆ ಅಲ್ಲ, ಆಗ ಏನು ನಡೆಯಿತು ಎಂದು ಹೇಳಬಾರದೆ?

ಡಾ:ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಡವಳಿಕೆ ತಪ್ಪೋ ಅಥವಾ ಸರಿಯೋ ಎಂದು ವಿಮರ್ಶೆ ಮಾಡುವುದಕ್ಕೂ ಅವಕಾಶ ಇಲ್ಲವೇ?

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನೀವು ಮಾತನಾಡುವಾಗ ನಾವು ಕೇಳುತ್ತೇವೆ. ಅವರು ಮಾತನಾಡುವಾಗ ಉಪಯೋಗಿಸಿದ ಪದ ಏನೆಂದರೆ, ವಿರೋಧಪಕ್ಷಗಳ ನಡವಳಿಕೆಗಳ

ಬಗ್ಗೆ ಎಂದು. ಆ ನಡವಳಿಕೆ ಸರಿಯೋ ತಪ್ಪೋ ಎಂದು ಹೇಳುವ ಅಧಿಕಾರ ಇರುವಂಥದ್ದು ಮಾನ್ಯ ಸ್ಪೀಕರ್‌ರವರಿಗೆ ಮಾತ್ರ. ನಮ್ಮ ನಡವಳಿಕೆ ಸರಿಯೋ ಅಥವಾ ತಪ್ಪೋ ಎಂದು ಅವರು ಹೇಳಬೇಕು. ನಾವು ಮಾತನಾಡಿರುವ ವಿಚಾರಗಳು ಬೇಕಾದರೆ ಸರಿಯಿಲ್ಲವೆಂದು ನೀವು ಹೇಳಿ. ಅದನ್ನು ನಾವು ಒಪ್ಪುತ್ತೇವೆ, ಅದನ್ನು ಹೇಳುವುದಕ್ಕೆ ನಿಮಗೆ ಅಧಿಕಾರವಿದೆ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ನಾನೂ ಕೂಡ ಅದನ್ನೇ ಹೇಳಿದ್ದು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಡವಳಿಕೆಗಳು ಅಂದರೆ ಏನರ್ಥ?

ಶ್ರೀ ಎನ್.ಚೆಲುವರಾಯಸ್ವಾಮಿ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ನಡವಳಿಕೆ ಅಂದರೆ ಅದರಲ್ಲಿ ತಪ್ಪು ಏನು ಇದೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಸಚಿವರೆ, ನೀವು ನಿಮ್ಮ ಸೀಟಿಗೆ ಹೋಗಿ ಮಾತನಾಡಿ, ನಿಮಗೆ ನಾವು ಎಷ್ಟು ಸಲ ಹೇಳಿದ್ದೇವೆ. ನೀವು ಮಾತನಾಡುವುದಾದರೆ ಮೊದಲು ಸೀಟಿಗೆ ಹೋಗಿ ಮಾತನಾಡಿ.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವಾಗ ಏನು ಬೇಕಾದರೂ ಮಾತನಾಡಬಹುದು, ಇವರು ಮಾತನಾಡುವಾಗ ನಡವಳಿಕೆ ಸರಿಯಿಲ್ಲವೆ?

(ಗೊಂದಲ)

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ನೀವು ಮೊದಲು ನಿಮ್ಮ ಸೀಟಿಗೆ ಹೋಗಿ ಮಾತನಾಡಿ.

ಡಾ:ಕೆ.ಅನ್ನದಾನಿ : ಮಾನ್ಯ ಅಧ್ಯಕ್ಷರೆ, ಅಲ್ಲಿ ಮೊದಲನೆಯ ಸಾಲಿನಲ್ಲಿ ಕುಳಿತವರು ಏನು ಮಾತನಾಡಿದರೂ ಅವರ ನಡವಳಿಕೆ ಸರಿ. ಇಲ್ಲಿ ಮಾತನಾಡುವವರಿಗೆ ಅವಕಾಶ ಸಿಕ್ಕಾಗ ಮಾತನಾಡಿದರೆ, ಮಾತನಾಡುವಾಗ ನಡವಳಿಕೆ ಬಗ್ಗೆ ಮಾತನಾಡಬೇಕೆಂದರೆ ನಡವಳಿಕೆ ಸರಿಯಿಲ್ಲವೆಂದರೆ ಏನರ್ಥ? ಮಾನ್ಯ ರಾಜಣ್ಣನವರು ಎದ್ದು ಮಾತನಾಡಿದರೆ ನಡುವಳಿಕೆ ಬಗ್ಗೆ ಸರಿಯಿಲ್ಲ ವೆಂದಾಗುತ್ತದೆಯೇ? ಅವರು ಮಾತನಾಡುವಾಗ ನಡುವಳಿಕೆ ಏನೂ ಬರುವುದಿಲ್ಲ, ಇಲ್ಲಿ ಸೀನಿಯರ್, ಜೂನಿಯರ್ ಎಂದು ಹೇಳುವುದು ಸರಿಯಲ್ಲ. ಅವರು ಎಷ್ಟು ಬೇಕಾದರೂ ಮಾತನಾಡಬಹುದು. ಅವರು ನಡವಳಿಕೆಯನ್ನು ಬಿಟ್ಟು ಮಾತನಾಡಬಹುದು. ಸಬ್ಜೆಕ್ಟನ್ನು ಬಿಟ್ಟು ಮಾತನಾಡಬಹುದು. ವಿಚಾರ ಬಿಟ್ಟು ಏನು ಬೇಕಾದರೂ ಮಾತನಾಡಬಹುದು. ಮಾನ್ಯ ರಾಜಣ್ಣನವರು ಮಾತನಾಡಿದರೆ ನಡವಳಿಕೆಗಳ ಬಗ್ಗೆ ಸ್ಟಾರ್ಟ್ ಆಗಿ ಬಿಡುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ನಡವಳಿಕೆಯ ಬಗ್ಗೆ ಕೇಳಲಿಕ್ಕೆ ನಿಮಗೆ ಅಧಿಕಾರ ಇದೆ, ನೀವು ಏನು ಬೇಕಾದರೂ ಮಾತನಾಡಿ. ನಮ್ಮದು ಅದರ ಬಗ್ಗೆ ಏನೂ ಅಭ್ಯಂತರವಿಲ್ಲ. ನಮ್ಮ ನಡವಳಿಕೆ ಬಗ್ಗೆ ಅವರಿಗೆ ಮಾತನಾಡುವುದಕ್ಕೆ ಅಧಿಕಾರವಿಲ್ಲ. ನಿಮಗೆ (ಅಧ್ಯಕ್ಷರಿಗೆ) ಮಾತ್ರ ಅಧಿಕಾರ ಇರುವಂಥದ್ದು. ಬೇಕಾದರೆ ನಾವು ಮಾತನಾಡಿರುವ ವಿಚಾರ ಸರಿಯಿಲ್ಲವೆಂದು ಅವರು ಬೇಕಾದರೆ ಮಾತನಾಡಲಿ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಲ್ಲಿ ನನ್ನ ಮನವಿ ಏನೆಂದರೆ, ನಿಮ್ಮ ಮಾತುಗಳಿಂದ ಚಕಮಕಿಗೆ ಅವಕಾಶ ಕೊಟ್ಟು ವರ್ತನೆ ಮಾಡುವುದು ಬೇಡ. ಈಗ ತಾನೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಚರ್ಚೆ ಆರಂಭವಾಗಿದೆ. ಆ ಚರ್ಚೆ ಚೆನ್ನಾಗಿ ನಡೆಯಬೇಕು, ಸರಿಯಾದ ರೀತಿಯಲ್ಲಿ ಚರ್ಚೆಗೆ ತಾವು ಉಪಯುಕ್ತವಾದ ತಮ್ಮ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕು. ಇದರಲ್ಲಿ ಪರಸ್ಪರ ಎಲ್ಲರೂ ಸಹಕರಿಸಬೇಕು. ನಿಮ್ಮ ಮಾತಿನಿಂದ ಪರಸ್ಪರ ದೋಷಾರೋಪಣೆ ಮಾಡುವುದು ಅದಕ್ಕೆ ಇನ್ನೊಂದು ಏನೋ ಆಗುವುದು ಬೇಡ. ದಯಮಾಡಿ ತಾವು ಸರ್ಕಾರದ ಸಾಧನೆಗಳನ್ನು ಹೇಳಿ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಕುಂಬಳಕಾಯಿ ಕಳ್ಳ ಎಂದರೆ ಏಕೆ ಇವರು ಹೆಗಲುಮುಟ್ಟಿ ನೋಡಿಕೊಳ್ಳುತ್ತಾರೋ ನನಗೆ ಅರ್ಥವಾಗುತ್ತಿಲ್ಲ. ನಾನು ನಡವಳಿಕೆಗಳು ಎಂದು ಹೇಳಿದರೆ,

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಹೇಳುವುದು ಸರಿಯಿಲ್ಲ, ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿಕೊಳ್ಳುತ್ತಾರೆಂದರೆ ಅದರ ಅರ್ಥ ಏನು?

ಅಧ್ಯಕ್ಷರು : ಆಯಿತು ಬಿಡಿ ಮಾನ್ಯ ಶ್ರೀರಾಮರೆಡ್ಡಿಯವರೆ, ಮಾನ್ಯ ರಾಜಣ್ಣನವರೇ ಇಂತಹದ್ದಕ್ಕೆ ಅವಕಾಶ ಕೊಡದಂತೆ ತಾವು ಮಾತನಾಡಿ.

ಡಾ:ಕೆ.ಅನ್ನದಾನಿ : ಮಾನ್ಯ ಅಧ್ಯಕ್ಷರೆ, ಅದೊಂದು ಜಾನಪದದ ಗಾದೆ, ಏಕೆ ಅವರು ಅದಕ್ಕೆ ಅಷ್ಟೊಂದು ತಲೆ ಕೆಡಿಸಿಕೊಳ್ಳಬೇಕು?

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಎಲ್ಲಿ ಬಿಸಿನೆಸ್ ನಡೆಯುತ್ತದೆ ಅದನ್ನು ನಾವು ನಡವಳಿಕೆಗಳು ಎಂದು ಕರೆಯುತ್ತೇವೆ ಹೊರತು ಅದಕ್ಕೆ ಬೇರೆ ಪದದ ಅರ್ಥ ಇದೆಯೋ? ಅದರ ಬಗ್ಗೆ ನನಗೆ ಅವರು ಬೆಳಕು ಚೆಲ್ಲಬೇಕು. ಇಲ್ಲಿ ಏನು ಬಿಸಿನೆಸ್ ನಡೆಯುತ್ತದೆ ಏನು ನಡವಳಿಕೆಗಳು ನಡೆಯುತ್ತವೆ ಎನ್ನತಕ್ಕಂಥದ್ದು ಅದು ಸರ್ವೆ ಸಾಮಾನ್ಯವಾಗಿ ಉಪಯೋಗಿಸತಕ್ಕಂಥ ಪದ. ನಾನು ಯಾರಿಗೂ ಟೀಕೆ ಮಾಡತಕ್ಕಂಥ ರೂಪದಲ್ಲಿ ನಾನು ಆ ಪದವನ್ನು ಬಳಸಿರತಕ್ಕಂಥದ್ದು ಅಲ್ಲ. ಆದ್ದರಿಂದ ನಾನು ಈಗಾಗಲೇ ಹೇಳಿದಂತೆ "ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿಕೊಂಡರಂತೆ " ನಾವು ಏನೋ ಮಾಡಬಾರದ್ದನ್ನು ಮಾಡಿದ್ದೇವೆ ಅದನ್ನು ಇವರು ಟೀಕೆ ಮಾಡುವುದಕ್ಕೆ ಹೊರಟಿದ್ದಾರೆನ್ನುವ ಭಾವನೆ ಏಕೆ ಅವರಲ್ಲಿ ಬರಬೇಕು? ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಸಂವಿಧಾನಬದ್ಧವಾಗಿ ಮಾನ್ಯ ರಾಜ್ಯಪಾಲರು ನಮ್ಮ ಎರಡೂ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಿರುವಂಥದ್ದು. ನನ್ನ ಒಂದು ಪ್ರಶ್ನೆ, ಯಾರಾದರೂ ಸರ್ಕಾರಿ ಅಧಿಕಾರಿ ಒಂದು ಕರ್ತವ್ಯವನ್ನು ನಿರ್ವಹಣೆ ಮಾಡತಕ್ಕಂಥ ಸಂದರ್ಭದಲ್ಲಿ ಯಾರಾದರೂ ಅಡಚಣೆ ಮಾಡಿದರೆ ನಾವು ಆತನ ಮೇಲೆ ಅಡಚಣೆ ಮಾಡಿದವರ ಮೇಲೆ ಐಪಿಸಿ 353ರ ಪ್ರಕಾರ ಅಬ್‌ಸ್ಟ್ರಕ್ಷನ್ ಟು ಡಿಸ್‌ಚಾರ್ಜ್ ದಿ ಅಫೀಷಿಯಲ್ ಡ್ಯೂಟಿವಾಡು ಅವನ ಮೇಲೆ ದೋಷಾರೋಪಣೆಯನ್ನು ಹೊರೆಸುತ್ತೇವೆ. ಆದರೆ ಇಲ್ಲಿ ಒಂದು ಸಂವಿಧಾನಬದ್ಧ ಜವಾಬ್ದಾರಿಯನ್ನು ನಿರ್ವಹನೆ ಮಾಡತಕ್ಕಂತಹ ಸಂದರ್ಭದಲ್ಲಿ ಅಡಚಣೆ ಮಾಡತಕ್ಕಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ಎನ್ನುವ ಒಂದು ಸಾಮಾನ್ಯ ಪ್ರಶ್ನೆ ನನ್ನನ್ನು ಕಾಡುತ್ತಿದೆ. ಇದು ಯಾವುದೇ ಒಂದು ಸಂಸ್ಥೆಯ

ನಡವಳಿಕೆಗಳಿಗೆ ಪ್ರಜಾಪ್ರಭುತ್ವದಲ್ಲಿ ಈ ರೀತಿಯ ಒಂದು ಸಂವಿಧಾನಬದ್ಧ ಜವಾಬ್ದಾರಿಯನ್ನು ನಿರ್ವಹಣೆ ಮಾಡತಕ್ಕಂಥ ಕಾಲದಲ್ಲಿ ಆ ರೀತಿ ನಡೆಯತಕ್ಕಂಥದ್ದು ಸರಿಯಾದುದಲ್ಲ, ಈ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶೋಭೆಯನ್ನು ತರತಕ್ಕಂಥದ್ದೇ? ಕೃತಿ ಅದು ಅಲ್ಲ ಎನ್ನತಕ್ಕಂಥದ್ದು ಹೇಳುವುದಕ್ಕೆ ನಾನು ಹೊರಟಿದ್ದೇನೆ. ಅದಕ್ಕೆ ಕಾರಣರು ಯಾರಿದ್ದಾರೆ, ಇವರು ಕಾರಣರೇ ಅವರು ಕಾರಣರೇ ಇದಕ್ಕೆ ಯಾರು ಜವಾಬ್ದಾರರು? ಯಾರು ಜವಾಬ್ದಾರಿ ಇಲ್ಲದೆ ಬೇಜವಾಬ್ದಾರಿಯಿಂದ ನಡೆದಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ನಾನು ಪ್ರಸ್ತಾಪವನ್ನು ಮಾಡುತ್ತಿಲ್ಲ. ಆದರೆ ನಡೆದ ಘಟನಾವಳಿಗಳ ಬಗ್ಗೆ ಇರತಕ್ಕಂಥ ನನ್ನ ಅನಿಸಿಕೆಯನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಅಷ್ಟೆ. ಬೆಳಿಗ್ಗೆ ಮಾನ್ಯ ರಮೇಶ್‌ಕುಮಾರ್‌ರವರು ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಸದನದ ಹಿರಿಯ ಸದಸ್ಯರು, ತಾವು ಹೇಳಿದ ಹಾಗೆ ಅದು ಹಾಸ್ಯದ ಹಿನ್ನಲೆಯಲ್ಲಿ ಅದನ್ನು ಪ್ರಸ್ತಾಪ ಮಾಡಿದರು ಎಂದು ನಾವು ಅಂದುಕೊಳ್ಳುತ್ತೇವೆ. ನಿಜಕ್ಕೂ ಕೂಡ ನಾವು ಇಲ್ಲಿ 224 ಜನರು ಇರಬಹುದು. ಆ 224 ಜನರಲ್ಲಿ ನಾನೊಬ್ಬ ಸತ್ಯಹರಿಶ್ಚಂದ್ರ ಎನ್ನತಕ್ಕಂಥವರು ಇಲ್ಲಿ ಯಾರೂ ಇಲ್ಲ. ಎಲ್ಲರೂ ಕೂಡ ಸುಳ್ಳು ಹೇಳತಕ್ಕಂಥದ್ದು, ರಾಜಕಾರಣದಲ್ಲಿ ಅದೊಂದು ಬಂಡವಾಳ. ಸುಳ್ಳು ಇಲ್ಲದೆ ಯಾರೂ ರಾಜಕಾರಣವನ್ನು ಮಾಡುವುದೇ ಇಲ್ಲ. ಆದರೆ ಸುಳ್ಳು ಹೇಳತಕ್ಕಂಥದ್ದು ನಮ್ಮ ಸ್ವಾರ್ಥಸಾಧನೆಗಾಗಿ ಸುಳ್ಳನ್ನು ಹೇಳಬಾರದು. ಯಾವುದಾದರೊಂದು ಸಾರ್ವಜನಿಕವಾಗಿ ಮತ್ತು ಸಾರ್ವಜನಿಕರಿಗೆ ಅನುಕೂಲವಾಗತಕ್ಕಂಥ ಒಂದು ಒಳ್ಳೆಯದಾಗತಕ್ಕಂಥದ್ದು ಅಂತಹ ಸಂದರ್ಭದಲ್ಲಿ ಅಲ್ಲಿ ಸುಳ್ಳನ್ನು ಹೇಳತಕ್ಕಂಥದ್ದು ಒಂದು ರೂಢಿಯಾಗಿ ಬಂದಿರತಕ್ಕಂಥದ್ದು. ಆದರೆ ಅವರು ವಾಸ್ತವಾಗಿ **ಅಂದರೆ ಎಲ್ಲಾ ರಾಜಕಾರಣಿಗಳು ಸುಳ್ಳು ಹೇಳುತ್ತಾರೆ, ಎಲ್ಲಾ ರಾಜಕಾರಣಿಗಳು ಪಿತೂರಿ ಮಾಡುತ್ತಾರೆನ್ನತಕ್ಕಂಥ ರೀತಿಯಲ್ಲಿ ನಾವು ಅರ್ಥೈಸ ತಕ್ಕಂಥದ್ದಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.**

ನಾನು ಈ ಒಂದು ಮಾನ್ಯ ರಾಜ್ಯಪಾಲರ ಎರಡನೆಯ ಪ್ಯಾರಾವನ್ನು ನೋಡುತ್ತಿದ್ದೆ, ಅದನ್ನು ಯಾವ ಅಧಿಕಾರಿಗಳು ಬರೆಯುತ್ತಾರೋ ಏನು ಕತೆಯೋ ಗೊತ್ತಾಗುತ್ತಿಲ್ಲ. ಎರಡನೆಯ ಪ್ಯಾರಾದಲ್ಲಿರುವ ಎರಡು ಲೈನನ್ನು ಸುಮ್ಮನೆ ಓದಿ ಬಿಡುತ್ತೇನೆ. ಕರ್ನಾಟಕದ ಆರ್ಥಿಕ ಪುನಶ್ಚೇತನಕ್ಕೆ ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಿಕೊಂಡು ಬರುವುದು ಅತ್ಯಗತ್ಯ. ಇದು ಆರ್ಥಿಕ ಪುನಶ್ಚೇತನ ಮತ್ತು ನೆಮ್ಮದಿಯನ್ನು ಕಾಪಾಡತಕ್ಕಂಥ ಎರಡು ಪ್ರಶ್ನೆಗಳು ಈ ಒಂದು ವಾಕ್ಯದಲ್ಲಿ ಬರುತ್ತದೆ. ಆದರೆ ಈ ಗುರಿ ಸಾಧನೆಗಾಗಿ ನನ್ನ ಸರ್ಕಾರವು ಪೊಲೀಸ್, ಅಗ್ನಿಶಾಮಕ ಮತ್ತು ಬಂದೀಖಾನೆ ಇಲಾಖೆಯನ್ನು ಬಲಪಡಿಸಿ ಪ್ರಯತ್ನ ಮಾಡಿದೆ. ಈ ಇಲಾಖೆಗಳನ್ನು ಇವರು ಬಲಪಡಿಸಿ ಬಿಟ್ಟರೆ ಈ ಉದ್ದೇಶ ಈಡೇರುತ್ತದೆ ಎನ್ನತಕ್ಕಂಥ ಅರ್ಥ ಬರುವ ರೀತಿಯಲ್ಲಿ ಸೆಂಟೆನ್ಸ್ ಫಾರ್ಮೇಶನ್ ಆಗಿದೆ. ಈ ರೀತಿಯ ಒಂದು ಗೊಂದಲಗಳನ್ನು ಈ ಒಂದು ಸರ್ಕಾರದ ಭಾಷಣವನ್ನು ರಾಜ್ಯಪಾಲರ ಬಾಯಿಯಲ್ಲಿ ಹೇಳಿಸತಕ್ಕಂಥದ್ದನ್ನು ಮಾಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಬೆಳಿಗ್ಗೆ ಮಾನ್ಯ ರಮೇಶ್‌ಕುಮಾರ್‌ರವರು ಬಹಳಷ್ಟು ವಿಚಾರಗಳನ್ನು ಹೇಳಿದ್ದಾರೆ. ಆದರೆ ನಾನು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವೇ ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ಈ ಆಡಳಿತ

ಸುಧಾರಣಾ ಆಯೋಗದ ಶಿಫಾರಸ್ಸುಗಳಿವೆ, ಈ ಶಿಫಾರಸ್ಸುಗಳು ಬಹಳ ಒಂದಲ್ಲ, ಎರಡಲ್ಲ, ಹತ್ತಾರು ಶಿಫಾರಸ್ಸುಗಳಿವೆ. ಕೆಲವು ಶಿಫಾರಸ್ಸುಗಳನ್ನು ಈಗಾಗಲೇ ಸರ್ಕಾರ ಜಾರಿಮಾಡಿದೆ. ಇನ್ನು ಕೆಲವು ಶಿಫಾರಸ್ಸುಗಳು ಪರಿಶೀಲನೆಯ ಹಂತದಲ್ಲಿರತಕ್ಕಂತಹದ್ದು, ಇವೆಲ್ಲವೂ ಇದೆ. ಆದರೆ ಆಡಳಿತ ಸುಧಾರಣಾ ಆಯೋಗದ ಅನ್ವಯ ಮುಖ್ಯವಾಗಿ ಡಿವಿಜನಲ್ ಕಮೀಷನರ್ ಹುದ್ದೆಗಳನ್ನು ತಪ್ಪಿಸಿರುವುದನ್ನು ನಾವು ನೋಡುತ್ತಿದ್ದೇವೆ. ಡಿವಿಜನಲ್ ಕಮೀಷ್ನರ್ ಹುದ್ದೆಯನ್ನು ಅಲಂಕಾರಿಕ ಹುದ್ದೆ ಎಂದು ಇದರಿಂದ ಸರ್ಕಾರಕ್ಕೆ ವಿನಾಃಕಾರಣ ವೆಚ್ಚ ಬರುತ್ತದೆಂಬ ಹಿನ್ನಲೆಯಲ್ಲಿ ಆ ಹುದ್ದೆ ಮತ್ತು ಬೇರೆ ಹುದ್ದೆಗಳನ್ನೂ ಕೂಡ ಅಬಾಲಿಷ್ ಮಾಡಿರುವುದನ್ನು ನಾವು ನೋಡಿದ್ದೇವೆ. ಆದರೆ ಸರ್ಕಾರದಲ್ಲಿ ಇರತಕ್ಕಂತಹದ್ದು ಏನು ಸಿಬ್ಬಂದಿ ಇದೆ, ಅದನ್ನು ಎಷ್ಟರಮಟ್ಟಿಗೆ ಸರ್ಕಾರ ಸರಿಯಾಗಿ ಉಪಯೋಗ ಮಾಡಿಕೊಳ್ಳುತ್ತಿದೆ. ನಾನು ಈ ಒಂದು ಸರ್ಕಾರಿ ಸಿಬ್ಬಂದಿಯನ್ನು ಸರಿಯಾಗಿ ದಕ್ಷತೆಯಿಂದ ಉಪಯೋಗ ಮಾಡಿ, ಇರತಕ್ಕಂತಹ ವೆಚ್ಚದಲ್ಲಿಯೇ ಹೆಚ್ಚು ಪರಿಣಾಮಕಾರಿಯಾಗಿ ಕೆಲಸವನ್ನು ಮಾಡುವುದರ ಬಗ್ಗೆ ಸಾಧ್ಯವಿದೆ. ಆದರೆ ಇವರು ಇದು ಸಣ್ಣ ವಿಷಯವೇ ಇರಬಹುದು, ಆದರೆ ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕೆಲವು ಹಿರಿಯ ಅಧಿಕಾರಿಗಳ ಮನೆಗಳಲ್ಲಿ ಕಿರಿಯ ಅಧಿಕಾರಿಗಳು ಕೆಲಸವನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಪೊಲೀಸ್ ಇಲಾಖೆ, ಸಬ್‌ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್ ಡಿ.ವೈ.ಎಸ್.ಪಿ.ಅಥವಾ ಡಿಸಿಪಿ ಇರಬಹುದು. ಎಸ್‌ಪಿ ಇರಬಹುದು, ಮೇಲಿನ ಎಲ್ಲಾ ಹಂತದ ಅಧಿಕಾರಿಗಳ ಮನೆಯಲ್ಲಿ ಕನಿಷ್ಠ 4 ರಿಂದ 5 ಜನರು ಕಾನ್ಸ್‌ಟೇಬಲ್‌ಗಳು ಕೆಲಸದಲ್ಲಿರುತ್ತಾರೆ. ಸುಮಾರು 700 ರಿಂದ 800 ಜನರು ಕಾನ್ಸ್‌ಟೇಬಲ್‌ಗಳು ಈ ರಾಜ್ಯದಲ್ಲಿ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಂದ ಅವರನ್ನು ತಪ್ಪಿಸಿ ಅವರು ಯಾವ ಸೇವೆಯನ್ನು ಸಲ್ಲಿಸಲು ರೆಕ್ರೂಟ್‌ಮೆಂಟ್ ಮಾಡಿದ್ದಾರೆ ಆ ಕೆಲಸಕ್ಕೆ ಅವರನ್ನು ನಿಯೋಜನೆ ಮಾಡದೆಯೇ ಈ ರೀತಿಯಾಗಿ ಕೆಲಸಕ್ಕೆ ಉಪಯೋಗಿಕೊಳ್ಳುತ್ತಿದ್ದಾರೆ. ಅದರ ಜೊತೆಯಲ್ಲಿ ಇನ್ನೊಂದು ಏನು ನಡೆಯುತ್ತಿದೆ ಎಂದರೆ, ಈ ಪ್ರೈವೇಟ್ ಕಾಲೇಜುಗಳನ್ನು ನಡೆಸುತ್ತಿದ್ದಾರಲ್ಲಾ, ಎಡೆಡ್ ಕಾಲೇಜ್ಸ್, ಎಡೆಡ್ ಹೈಸ್ಕೂಲ್‌ಗಳು ಇರಬಹುದು, ಅಲ್ಲೆಲ್ಲಾ ಕೆಲಸ ಮಾಡಿತ್ತಿರುತ್ತಾರೆ. ಕೆಲವು ಸಾರಿ ಮಠಗಳಲ್ಲಿ ಕೆಲಸವನ್ನು ಮಾಡುತ್ತಿರುತ್ತಾರೆ. ಇಲ್ಲಿ ಕೆಲಸವನ್ನು ಮಾಡಿಸಿಕೊಳ್ಳುವುದು ಅಥವಾ ಎಡೆಡ್ ಸ್ಕೂಲ್‌ನವರು ಅವರ ಮನೆಗಳಲ್ಲಿ ಕೆಲಸಗಳನ್ನು ಮಾಡಿಸಿಕೊಳ್ಳುವುದು ಸಂಬಳವನ್ನು ಮಾತ್ರ ಅಲ್ಲಿ ತೆಗೆದುಕೊಳ್ಳುವುದು ಇದು ನಡೆಯುತ್ತಿರುತ್ತದೆ. ಈ ರೀತಿಯಾ ನಡೆಯುತ್ತಿರುವುದು ಈ ಒಂದು ವ್ಯವಸ್ಥೆಯಲ್ಲಿ ನಡೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆ ರೀತಿಯಾಗಿ ನೌಕರರನ್ನು ಸಾರ್ವಜನಿಕ ಕೆಲಸಕ್ಕೆ ಇರತಕ್ಕ ಸರ್ಕಾರಿ ಸೇವೆ ಸಲ್ಲಿಸುವಂತಹ ಅವರನ್ನು ನಾವು ಬಳಕೆಯನ್ನು ಮಾಡಿದರೆ, ಸರ್ಕಾರಿ ಕೆಲಸಗಳು ಹೆಚ್ಚಿನ ಗುಣಮಟ್ಟದಲ್ಲಿ ಆಗುವುದಕ್ಕೆ ಸಾಧ್ಯವಾಗುತ್ತದೆಯೇ? ಈ ಒಂದು ಆಡಳಿತ ಸುಧಾರಣಾ ಆಯೋಗದ ವರದಿಯಲ್ಲಿರುವಂತಹ ಬಹುತೇಕ ಸಲಹೆಗಳು ಏನಿವೆ, ಆ ಸಲಹೆಗಳನ್ನು ಜಾರಿ ಮಾಡಿ ಸರ್ಕಾರಿ ಆಡಳಿತ ವೆಚ್ಚವನ್ನು ಕಡಿಮೆ ಮಾಡುವುದು, ಆಡಳಿತ ಯಂತ್ರ ಹೆಚ್ಚು ದಕ್ಷತೆಯಿಂದ ಕೆಲಸವನ್ನು ಮಾಡುವುದಕ್ಕೆ ಅದೂ ಕೂಡ ಒಂದು ಸರ್ಕಾರದ ನೀತಿ ಏನಿದೆ, ಈ ಒಂದು ಸಲಹೆಯನ್ನು ಅಳವಡಿಸಿಕೊಂಡರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಕೂಡ ಈ

ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಎಲ್ಲಾ ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಕರ್ನಾಟಕ ಪಶುಸಂಗೋಪನಾ ಇಲಾಖೆ, ಇದು ಬಹಳ ಮುಖ್ಯವಾದ ಇಲಾಖೆಯಾಗಿದೆ, ಏಕೆಂದರೆ ನಮ್ಮ ಹಳ್ಳಿಯಲ್ಲಿ ಬರತಕ್ಕಂತಹ ರೈತಾಪಿ ಜನರು ಏನಿದ್ದಾರೆ, ಈ ದಿವಸ ಈ ಒಂದು ಬರಗಾಲದ ಹಿನ್ನಲೆ ಯಲ್ಲಿ ಬರಗಾಲಪೀಡಿತ ಪ್ರದೇಶಗಳಲ್ಲಿ ಅವರೂ ಕೂಡ ಹಾಲು ಉತ್ಪಾದನೆ ಮಾಡತಕ್ಕಂತಹ ಹೆಚ್ಚು ಅವಲಂಬನೆಯಾಗುತ್ತಿದ್ದಾರೆ. ಏನು ಹಾಲು ಉತ್ಪಾದನೆ ಮಾಡತಕ್ಕಂತಹ ಆಕಳುಗಳು ಇರಬಹುದು, ಹಸುಗಳು ಇರಬಹುದು, ಎಮ್ಮೆಗಳು ಇರಬಹುದು, ಅದು ಯಾವುದೇ ಇರಬಹುದು. ಅದರ ಒಂದು ಆರೋಗ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಕಾಪಾಡತಕ್ಕಂತಹದ್ದು ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಒಂದು ಔಷಧಿ ಇದ್ದರೆ ಮತ್ತೊಂದು ಔಷಧಿಗಳು ಇರುವುದಿಲ್ಲ. ಮೊನ್ನೆ ಯಾವುದೋ ಒಂದು ಪ್ರಶ್ನೆಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಯಾವುದೇ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿಲ್ಲ ಎಂದು ಹೇಳಿದ್ದಾರೆ. ಎಲ್ಲಾ ಕಡೆಗಳಲ್ಲೂ ಔಷಧಿಗಳ ಕೊರತೆ ಇರುತ್ತದೆ. ಅದರಲ್ಲೂ ಕೂಡ ಕುರಿಗಳು, ಹಸುಗಳು ಇರಬಹುದು, ಮಾತ್ ಡಿಸೀಸ್‌ನ್ ಮತ್ತು ಲೆಗ್ ಡಿಸೀಸನ್ ಇವೆಲ್ಲವೂ ಇದೆಯಲ್ಲಾ ಅದರ ಬಗ್ಗೆ ಔಷಧಿಗಳನ್ನು ಸಕಾಲದಲ್ಲಿ ಇಟ್ಟಿರುವುದಿಲ್ಲ. ಆದರೆ ಸರ್ಕಾರದ ಮಾಹಿತಿ ಏನೆಂದರೆ ಎಲ್ಲ ಕಡೆಗಳಲ್ಲೂ ಔಷಧಿಗಳನ್ನು ಹೇರಳವಾಗಿ ದಾಸ್ತಾನು ಇಟ್ಟಿದ್ದೇವೆ. ಯಾವುದೇ ಕೊರತೆಯಿಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ಮಾಡುವುದರಿಂದ ಹಳ್ಳಿಯಲ್ಲಿ ಒಂದೆರಡು ಹಸುಗಳನ್ನು ಇಟ್ಟುಕೊಂಡು ಜೀವನ ಮಾಡುವಂತಹ ಜನರಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಔಷಧಿಗಳನ್ನು ಸರಿಯಾಗಿ ಹಳ್ಳಿಗಾಡಿನಲ್ಲಿ ಸರಬರಾಜು ಮಾಡತಕ್ಕಂತಹ, ಅದಕ್ಕೆ ಇಟ್ಟಿರುವಂತಹ ಹಣವನ್ನೂ ಕೂಡ ಹೆಚ್ಚು ಮಾಡುವುದು ಆಗಬೇಕು. ಏನು ಯೋಜನೆಗಳನ್ನು ಇಟ್ಟುಕೊಂಡಿದ್ದಾರೆ. ಅದನ್ನೂ ಕೂಡ ಹೆಚ್ಚು ಮಾಡಬೇಕು. ನಾನು ಈ ಒಂದು ಸಂದರ್ಭದಲ್ಲಿ ಪ್ರಮುಖವಾಗಿ ಹೇಳ ಬಯಸುವುದೇನೆಂದರೆ, ನಾವು ವೆಟನರಿ ಡಾಕ್ಟರ್ಸನ್ನು ಲೈವ್ಸ್ ಸ್ಟಾಕ್ ಇನ್ಸ್‌ಪೆಕ್ಟರ್‌ನ್ನು ನಾವು ಆ ಒಂದು ಉದ್ದೇಶಕ್ಕೋಸ್ಕರ ಅವರನ್ನು ನೇಮಕಾತಿ ಮಾಡಿರುತ್ತೇವೆ. ಅವರನ್ನು ಬೇರೆ ಇಲಾಖೆಗಳಿಗೆ ಯಾವುದೋ ಇ.ಒ.ಕೆಲಸಗಳಿಗೆ ಇನ್ನೊಂದು ಕೆಲಸಕ್ಕೆ ಅಥವಾ ಬೇರೆ ಬೇರೆ ಕೆಲಸಕಾರ್ಯಗಳಿಗೆ ಎಲ್ಲಾ ಹಾಕುತ್ತಾರೆ. ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ಇಲ್ಲಿ ನೋಡಿದರೆ ಡಾಕ್ಟರ್‌ಗಳ ಕೊರತೆ ಎಂದು ನಾವು ಹೇಳುತ್ತೇವೆ. ಲೈವ್ಸ್ ಸ್ಟಾಕ್ ಇನ್ಸ್‌ಪೆಕ್ಟರ್ ಕೊರತೆ ಇದೆ ಎಂದು ಹೇಳುತ್ತೇವೆ. ಅವರನ್ನು ತೆಗೆದುಕೊಂಡು ಹೋಗಿ ಟಿಪಿಎಸ್‌ನಲ್ಲೂ ಇನ್ನೊಂದು ಕಛೇರಿಗಳಲ್ಲಿ ಯಾವುದೋ ಒಂದು ಎಕ್ಸಿಕ್ಯುಟೀವ್ ಪೋಸ್ಟ್ ಎಂದು ಅಲ್ಲೆಲ್ಲಾ ಪೋಸ್ಟ್ ಮಾಡುತ್ತಾರೆ. ಈ ರೀತಿಯಾಗಿ ಸರ್ಕಾರದ ಗ್ರಾಮೀಣಾ ಭಾಗದ ಅಭಿವೃದ್ಧಿಗೆ ಹೈನುಗಾರಿಕೆ ಮುಖ್ಯವೆಂದು ನಾವು ತಿಳಿದಿರುತ್ತೇವೆ. ಆ ಹೈನುಗಾರಿಕೆಯನ್ನು ನಾವು ಸರಿಯಾಗಿ ರೈತರಿಗೆ ಅದರ ಲಾಭವನ್ನು ದೊರಕಿಸಿಕೊಡಬೇಕು ಹೇಳಿದರೆ ಈ ಪಶುವೈದ್ಯ ಇಲಾಖೆ ಏನಿದೆ, ಆಸ್ಪತ್ರೆಗಳು ಇರಬಹುದು, ಮತ್ತೊಂದು ಇರಬಹುದು, ಅದು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿ ಅವರ ಒಂದು ಅಭಿವೃದ್ಧಿಗೆ ಪೂರಕವಾಗಿರಬೇಕು. ಸರ್ಕಾರದ ಏನೂ ಒಂದು ಅಭಿಪ್ರಾಯವಿದೆ, ಅದನ್ನು ಪರಿಣಾಮಕಾರಿಯಾಗಿ ಮಾಡತಕ್ಕಂತಹ ಇದರ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡುವುದು ಒಳ್ಳೆಯದು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೂ ಪಂಚಾಯತ್ ರಾಜ್ ವ್ಯವಸ್ಥೆಯ

ಬಗ್ಗೆ ಹೇಳುವುದಾದರೆ, ಈ ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡುವುದರ ಬಗ್ಗೆ ಯಾರೂ ಆಸಕ್ತಿ ಹೊಂದಿರುವುದಿಲ್ಲ, ಆದರೆ ಅವರು ಆ ಒಂದು ಜವಾಬ್ದಾರಿಯನ್ನು ನಿರ್ವಹಣೆ ಮಾಡತಕ್ಕಂತಹ ಮಟ್ಟದಲ್ಲಿ ಇದ್ದಾರೆಯೇ ಎನ್ನತಕ್ಕಂತಹ ಪ್ರಶ್ನೆ. ಈ ದಿವಸ ನನ್ನಲ್ಲಿ ಒಂದು ಯಾವುದೋ ಸಂದರ್ಭದಲ್ಲಿ ಸರ್ಕಾರ ನೀಡಿದ ಉತ್ತರ ಇದೆ. ಎರಡೆರಡು ಪಂಚಾಯಿತಿಗಳಿಗೂ ಕೂಡ ಒಬ್ಬ ಸೆಕ್ರೆಟರಿಗಳು ಇರುವುದಿಲ್ಲ. ಅವರೆಲ್ಲರೂ ಕೂಡ 50 ರಿಂದ 52 ವರ್ಷ ಮೇಲಿರುವವರೇ ಇರುತ್ತಾರೆ. ಆ ರೆಕ್ರೂಟ್‌ಮೆಂಟ್‌ನ್ನು ನಿಲ್ಲಿಸಿ 10 ವರ್ಷಗಳಾಯಿತು. ಅವರುಗಳು ಯಾರೂ ಕೆಲಸ ಮಾಡುವಂತಹ ಸ್ಥಿತಿಯಲ್ಲಿರುವುದಿಲ್ಲ. ಎಲ್ಲಾ ಗ್ರಾಮಗಳಲ್ಲಿ ಬೋರ್ಡುಗಳನ್ನು ಬರೆಸಿರುತ್ತಾರೆ. ಕಾರ್ಯದರ್ಶಿಯವರ ಭೇಟಿಯ ದಿನಾಂಕ: ಮತ್ತು ದಿವಸ ಅವನು ಎರಡು ಪಂಚಾಯಿತಿಗಳು ಸೇರಿ 25 ಹಳ್ಳಿಗಳು ಇದ್ದರೆ ದಿವಸಕ್ಕೆ ಒಂದು ಕಡೆಯೂ ಹೋಗುವುದಕ್ಕೆ ಆಗುವುದಿಲ್ಲ. ಅವನು ಏನು ಹೇಳುತ್ತಾನೆಂದರೆ, ಇಲ್ಲಿ ಕೇಳಿದರೆ ಆ ಊರಿಗೆ ಹೋಗಿದ್ದೇನೆ, ಆ ಊರಿನಲ್ಲಿ ಕೇಳಿದರೆ ಈ ಊರಿಗೆ ಹೋಗಿದ್ದೇನೆಂದು ಹೇಳುತ್ತಾನೆ. ಇಬ್ಬರು ಒಟ್ಟಿಗೆ ಸಿಕ್ಕಿ ಎಲ್ಲಿಗೆ ಹೋಗಿದ್ದೆ ಎಂದು ಕೇಳಿದಾಗ ಮೀಟಿಂಗ್ ಇತ್ತು ಹೋಗಿದ್ದೆ ಎಂದು ಹೇಳಿಬಿಡುತ್ತಾನೆ. ಯಾವುದೋ ತಾಲ್ಲೂಕು ಹೆಡ್‌ಕ್ವಾಟ್ರಸ್‌ನಲ್ಲಿ ಮೀಟಿಂಗ್ ಇತ್ತು ಅಲ್ಲಿಗೆ ಹೋಗಿದ್ದೆ ಎಂದು ಹೇಳುತ್ತಾನೆ. ಈ ರೀತಿಯಾದ ಪರಿಸ್ಥಿತಿಯಿಂದ ಅಲ್ಲಿಯ ಗ್ರಾಮಪಂಚಾಯಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗದೆ ಇರುವಂತಹ ಪರಿಸ್ಥಿತಿಯನ್ನು ನಾವು ಗಮನದಲ್ಲಿಟ್ಟುಕೊಂಡು ಈ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಬೆಳಿಗ್ಗೆ ಕೂಡ ಚರ್ಚೆಯಾಯಿತು. ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸುವುದಕ್ಕಾಗುವುದಿಲ್ಲ. ಯಾವುದೇ ಊರಿಗೆ ಹೋದರೂ ಕೂಡ ಕುಡಿಯುವ ನೀರಿನ ಬಗ್ಗೆ ಜನರ ದೂರು ಬರುತ್ತಲೇ ಇರುತ್ತದೆ. ನಮ್ಮ ಶಾಸಕರ ಕರ್ತವ್ಯಗಳೇನು ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆಯನ್ನು ಮಾಡಿದರೆ ಕುಡಿಯುವ ನೀರು ಒದಗಿಸುವಂತಹದ್ದು, ಮತ್ತೆ ಮನೆಗಳನ್ನು ಮಂಜೂರು ಮಾಡುವುದು ನಮ್ಮ ಶಾಸಕರ ಕರ್ತವ್ಯವೇನು ಅಲ್ಲ. ಶಾಸನ ಮಾಡುವುದು ಶಾಸಕರ ಕರ್ತವ್ಯವಾಗಿದೆ. ಆದರೆ ನಾವು ಆ ಕೆಲಸವನ್ನು ಬಿಟ್ಟು ಈ ದಿವಸ ಕಾರ್ಯಾಂಗದವರು ಮಾಡುವಂತಹ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೇವೆ. ನಮ್ಮ ಕೆಲಸಗಳನ್ನು ಕೋರ್ಟು ಮಾಡುವುದಕ್ಕೆ ಹೊರಟಿದೆ. ಕೋರ್ಟಿನವರೆ ಕಾಯಿದೆಯನ್ನು ಮಾಡುತ್ತಾರೆ. ಕೋರ್ಟು ಕಾಯಿದೆ ಮಾಡುವುದಕ್ಕೆ ಹೊರಟು ಈ ಸಿ.ಇ.ಟಿ. ಅವಾಂತರವನ್ನು ನಾವು ಎಲ್ಲಾ ದಿವಸ ಕಡೆಗಳಲ್ಲೂ ಅನುಭವಿಸುತ್ತಿದ್ದೇವೆ. ಹಳ್ಳಿಗಾಡಿನ ಮಕ್ಕಳಿಗೆ ಈ ದಿವಸ ಇದರಿಂದಾಗಿ ಅನ್ಯಾಯವಾಗಿದೆ. ಈ ಕೋರ್ಟುಗಳು ಹೇಗಿದೆ ಎಂದರೆ, ಇದನ್ನು ನಾನು ಹೇಳುವುದು ಅಲ್ಲಾ ಚೀಫ್ ಜಸ್ಟೀಸ್ ಆಫ್ ಇಂಡಿಯಾ ನ್ಯಾಯಮೂರ್ತಿ ಭರೋಚರವರು ಹೇಳಿರುವುದು. ಈ ರಾಷ್ಟ್ರದಲ್ಲಿರುವಂತಹ 20 ಪರ್ಸೆಂಟ್‌ಗಿಂತ ಹೆಚ್ಚು ಜುಡಿಷಿಯಲ್ ಆಫೀಸರ್ ಹ್ಯಾವ್ ಬಿಕಮ್ ಕರಫ್ಟ್ ಎಂದು ಅವರು ಹೇಳಿದ್ದಾರೆ. ಈ ರೀತಿ ಇರುವಂತಹ ಒಂದು ವ್ಯವಸ್ಥೆಯಲ್ಲಿ ಕಾಯಿದೆ ಮಾಡುವುದು, ನಾವು ಕಾಯಿದೆಗಳನ್ನು ಸರಿಯಾಗಿ ಮಾಡುವುದರ ಬಗ್ಗೆ ವಿಫಲರಾಗುತ್ತೇವೆ ಆಗ ಕೋರ್ಟಿನವರೇ ಕಾಯಿದೆಯನ್ನು ಮಾಡುತ್ತಾರೆ. ನಾವು ಕಾಯಿದೆಯನ್ನು ಮಾಡುವ ಕೆಲಸವನ್ನು ಬಿಡುತ್ತೇವೆ. ನಾವು ಏನು ಮಾಡುತ್ತಿದ್ದೇವೆಂದರೆ ಜನಗಳಿಗೆ ನೀರು ಕೊಡಿಸುವ ಕೆಲಸ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಭಾಷಣವನ್ನು ಮಾನ್ಯ ರಮೇಶ್‌ಕುಮಾರ್ ಅವರು ಆರಂಭ ಮಾಡಿದರು. ಆಮೇಲೆ ವಂದನೆಯನ್ನು ಸಮರ್ಥನೆ ಮಾಡುತ್ತಾ ಮಾನ್ಯ ರಾಜಣ್ಣನವರು ಭಾಷಣ ಶುರು ಮಾಡಿದ್ದಾರೆ. ಆದರೆ ಆ ಕಡೆ ಇಪ್ಪತ್ತಾರು ಜನ ಮಾತ್ರ ಇದ್ದಾರೆ. ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವಾಗ ಸರ್ಕಾರದ ಮೂರು ಜನ ಮಂತ್ರಿಗಳು ಮತ್ತು ಇಪ್ಪತ್ತೊಂದು ಜನ ಶಾಸಕರು ಮಾತ್ರ ಇದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವಾಗ ಅವರ ಭಾಷಣಕ್ಕೆ ಇವರು ಎಷ್ಟು ಗೌರವ ತೋರಿಸುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ತಾವು ಸ್ವಲ್ಪ ನೋಡಬೇಕು. ಮುಂದಿನ ಸಾಲಿನಲ್ಲಿ ಒಬ್ಬ ಮಂತ್ರಿಯೂ ಇಲ್ಲ. ಮುಖ್ಯಮಂತ್ರಿಗಳು ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ, ಹಿರಿಯ ಸಚಿವರುಗಳು ಇಲ್ಲ. ಏಕೆ ಇವರು ಇಷ್ಟು ಬೇಜವಾಬ್ದಾರಿಯಿಂದ ಇದ್ದಾರೆ ಎಂಬುದು ನನಗರ್ಥವಾಗುತ್ತಿಲ್ಲ.ಮಾನ್ಯ ಚೆಲುವರಾಯ ಸ್ವಾಮಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಕುಳಿತಿರುವವರ ಬಗ್ಗೆ ನಾನು ಮಾತನಾಡಿಲ್ಲ. ಬಾರದೇ ಇರುವವರ ಬಗ್ಗೆ ತಾವು ಒಪ್ಪಿಕೊಳ್ಳಿ. ಈಗ ಸಮ್ಮಿಶ್ರ ಸರ್ಕಾರ ಇದೆ. ನಾವು ಪ್ರಾಮಾಣಿಕವಾಗಿ ನೋಡೋಣ. ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಆರಂಭವಾಗಿದೆ. ಕನಿಷ್ಟ ಮೊದಲನೇ ದಿವಸವಾದರೂ ನೀವು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವಾಗ ಸಂಪೂರ್ಣವಾಗಿ ಸಮ್ಮಿಶ್ರ ಸರ್ಕಾರದ ಕನಿಷ್ಟ ಎಂಬತ್ತು ಭಾಗವಾದರೂ ಇರಬೇಕಲ್ಲಾ? ಆದರೆ ಇಲ್ಲಿ ನೀವು 23 ಜನ ಇದ್ದೀರಿ. ಐದು ಜನ ಮಂತ್ರಿಗಳು ಮತ್ತು ಹದಿನೆಂಟು ಜನ ಎಂ.ಎಲ್.ಎ.ಗಳು. ಇದಕ್ಕೆ ಏನು ಹೇಳಬೇಕು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ಕಡೆ ನೋಡಿ. ನಾವು ನೂರು ಜನ ಇದ್ದೇವೆ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು : ರಾಜ್ಯಪಾಲರ ಭಾಷಣಕ್ಕೆ ಗೌರವ ಕೊಡುವುದನ್ನು ಮೊದಲು ಅವರು ಕಲಿತುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : ಕೆಲವು ಮಂತ್ರಿಗಳು ಕೌನ್ಸಿಲ್‌ಗೆ ಹೋಗಿದ್ದಾರೆ. ಸಚೇತಕರು ಹೋಗಿ ನೋಡಿ ಅವರನ್ನು ಕರೆಸುತ್ತಾರೆ....

ಶ್ರೀ ವಾಟಾಳ್ ನಾಗರಾಜ್ : ರಾಜ್ಯಪಾಲರ ಭಾಷಣ ಮಾಡುವಾಗ ನಾನು ಹೇಳುತ್ತೇನೆ....

ಶ್ರೀ ಜೆ.ಸಿ.ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಅವರು ಒಂದು ಹೇಳಿಕೆಯನ್ನು ಮಾಡಬೇಕಾಗುತ್ತದೆ. ಶಾಸನಸಭೆ ನಡೆಯುತ್ತಿರಬೇಕಾದರೆ ಮಂತ್ರಿಗಳಿಗೆ ಇದಕ್ಕಿಂತಲೂ ಗಹನವಾದ ವಿಷಯ ಇದ್ದರೆ ನಮ್ಮದೇನೂ ತಕರಾರು ಇಲ್ಲ. ಈ ಸರ್ಕಾರದ, ಈ ದೇಶದ ಜನತೆಯ ಟ್ಯಾಕ್ಸ್‌ನಲ್ಲಿ ಅವರ ಎಲ್ಲಾ ಯೋಗಕ್ಷೇಮವನ್ನು ಜನರು ನೋಡಿಕೊಳ್ಳುತ್ತಾರೆ. They have to make statement before the House. It is law. ಈ ಸಭೆಯಲ್ಲಿ ನಾನು ಏಕೆ ಹಾಜರಿರಲಿಲ್ಲ ಅಂತ ಹೇಳಿ ಘನತೆವೆತ್ತ ಸರ್ಕಾರದ ಮಂತ್ರಿಗಳು ಈ ಸಭೆಗೆ ಹೇಳುವ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಅವರು ಇಲ್ಲಿರಬೇಕು ಅಥವಾ ಇದಕ್ಕಿಂತ ಉತ್ತಮವಾದ ಕಾರ್ಯದಲ್ಲಿ ತೊಡಗಿರಬೇಕು. ಬಂದಿರುವಂತಹ ಮಂತ್ರಿಗಳ ಬಗ್ಗೆ ನಾನು ಹೇಳುವುದಿಲ್ಲ. ನಾವು ಮಂತ್ರಿಗಳಿಗೆ ಬೇರೆ ಕೆಲಸ ಇರುವುದಿಲ್ಲವೆಂದು ಹೇಳುವುದಿಲ್ಲ. ನೀವು ವರ್ಷದಲ್ಲಿ ಶಾಸನ ಸಭೆ ನಡೆಸುವುದೇ ಹದಿನೈದು–ಇಪ್ಪತ್ತು ದಿವಸ. ಇಷ್ಟೊಂದು ಸರ್ಕಾರದ ಸವಲತ್ತು ಪಡೆದುಕೊಂಡವರು ತಮಗೆ ಗೌರವ ಕೊಡುವುದಿಲ್ಲ, ಸಭೆಗೆ ಗೌರವ ಕೊಡುವುದಿಲ್ಲ ಅಂದರೆ ಹೇಗೆ? ನಮಗೆ ಬೇಡ, ಮಾನ್ಯ ರಾಜಣ್ಣನವರ ಮಾತಿಗಾದರೂ ಅವರಿಗೆ ಆಸಕ್ತಿ ಇದೆಯೋ ಗೊತ್ತಿಲ್ಲ. They have to own a statement before the House. ಅವರು ನಾವು ಈ ಸಮಯದಲ್ಲಿ ಏನು ಮಾಡುತ್ತಿದ್ದರು ಅಂತ ಒಂದು ಹೇಳಿಕೆಯನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚೇತಕರೇ, ಸಚಿವರುಗಳನ್ನು ಸಭೆಗೆ ಬರುವುದಕ್ಕೆ ಹೇಳಿಯಪ್ಪ. ಮಾನ್ಯ ರಾಜಣ್ಣನವರೇ, ನಿವು ಮುಂದುವರೆಸಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ, ಒಂದು ಮಾತು.....

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೆ, ದಯವಿಟ್ಟು ಇದನ್ನು ಬೆಳೆಸಬೇಡಿ. ಈಗ ನಾನು ಸಚೇತಕರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈಗ ಕೆಲವರು ಆ ಮನೆಯಲ್ಲಿ ಇದ್ದಾರೆ. ಅವರನ್ನು ಕರೆಸಿ ಅಂತ ಹೇಳಿದ್ದೇನೆ. ಇಲ್ಲಿ ನಾಲ್ಕೈದು ಜನ ಮಂತ್ರಿಗಳು ಇದ್ದಾರೆ. ಇದನ್ನು ದೊಡ್ಡದು ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಲ್ಲಿ ಸಚೇತಕರೆ ಇಲ್ಲ. ನೀವು ಯಾರಿಗೆ ಹೇಳಿದಿರೋ, ಅವರೇ ಇಲ್ಲ.

ಅಧ್ಯಕ್ಷರು : ಮೊದಲು ಅವರು ಇದ್ದರು. ಈಗ ಅವರು ಕರೆಯುವುದಕ್ಕೆ ಹೋಗಿದ್ದಾರೆ. He was there. ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡುವಾಗ ಅವರು ಇಲ್ಲಿ ಇದ್ದರು.

ಶ್ರೀ ಎನ್ ಚೆಲುವರಾಯಸ್ವಾಮಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿ) : ಅವರು ಬಹಳ ಹಿರಿಯ ಸದಸ್ಯರು. ಅವರು ಕೇಳುವುದು ತಪ್ಪೆಂದು ನಾನು ಹೇಳುವುದಿಲ್ಲ. ಇಲ್ಲಿ ಶಾಸಕರುಗಳು ಇದ್ದಾರೆ, ಆರು ಜನ ಮಂತ್ರಿಗಳು ಇದ್ದೇವೆ. ಅಲ್ಲಿ ಹೌಸ್ ನಡೆಯುತ್ತಿದೆ. ಕೆಲವು ಮಂತ್ರಿಗಳು ಅಲ್ಲೂ ಇದ್ದಾರೆ. ಮುಖ್ಯಮಂತ್ರಿಗಳು ಒಂದು ಕಾರ್ಯಕ್ರಮದ ಮೇಲೆ ಹೋಗಿದ್ದಾರೆ. ಅದು ತಮಗೆ ಗೊತ್ತಿದೆ. ಮಾನ್ಯ ರಾಜಣ್ಣನವರು ಹೇಳುತ್ತಾ ಇರತಕ್ಕಂಥ ವಿಚಾರಗಳನ್ನು ಕೇಳುವುದಕ್ಕೆ ಅಧಿಕಾರಿಗಳು ಇದ್ದಾರೆ, ನಾವೂ ಇದ್ದೇವೆ. ಮತ್ತು ನಾವು ಕೇಳುತ್ತಿದ್ದೇವೆ. ನಿಮಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾವು ಸಮರ್ಥವಾಗಿ ಉತ್ತರ ಕೊಡುತ್ತೇವೆ. ಬೇರೆ ಕಾರ್ಯಕ್ಕೆ ಹೋದಂಥ ಮಂತ್ರಿಗಳು ಬರುತ್ತಾರೆ. ದಯಮಾಡಿ ತಾವು ಸಲಹೆ ಕೊಟ್ಟಿದ್ದರ ಬಗ್ಗೆ ಅಧ್ಯಕ್ಷರು ನಿಮ್ಮ ಪರವಾಗಿಯೇ ಉತ್ತರ ಹೇಳಿದ್ದಾರೆ. ದಯಮಾಡಿ ತಾಳ್ಮೆಯಿಂದಿರಿ. ತಾವು ಏನು ಕೇಳಿದ್ದೀರಿ ಅದಕ್ಕೆ ಸಮಂಜಸವಾದ ಉತ್ತರವನ್ನು ಮುಖ್ಯಮಂತ್ರಿಗಳು ಕೊಡುತ್ತಾರೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಪಾರ್ಲಿಮೆಂಟ್‌ನಲ್ಲಿದ್ದಿರಿ. ಅಧಿವೇಶನ ನಡೆಯಬೇಕಾದರೆ ಯಾವುದೇ ಸಚಿವರು ಸದನದಲ್ಲಿ ಇರಬೇಕು ....

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿ, ಆಯಿತು ಬಿಡಿ. ಮಾತನಾಡಲು ಬಿಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಅಧ್ಯಕ್ಷರಿಗಾದರೂ ಬರೆದು ತಿಳಿಸಿ ಇಂತಹ ಕಾರಣಕ್ಕೆ ನಾನು ಇಲ್ಲಿ ಇರುವುದಕ್ಕೆ ಆಗುತ್ತಿಲ್ಲ ಎಂದು ಹೇಳಿ ಹೋಗಬೇಕು. ಹಾಗೆ ತಮಗೆ ಯಾರಾದರು ಬರೆದು ತಿಳಿಸಿದ್ದಾರಾ ? ಮುಖ್ಯಮಂತ್ರಿಗಳಿಗೆ ಇದಕ್ಕಿಂತ ಹೆಚ್ಚಿನ ಬೇರೆ ಕಾರ್ಯ ಇದ್ದರೆ ನಾವು ಅಡ್ಡಿ ಮಾಡುವುದಿಲ್ಲ. ಎಲ್ಲರು ಕೂಡ ಬರಬೇಕೆಂದು ನಾವು ಹೇಳುವುದಿಲ್ಲ. ಆದರೆ ....

ಅಧ್ಯಕ್ಷರು : ಮುಖ್ಯಮಂತ್ರಿಗಳು ಒಂದು ಸಭೆಗೆ ಹೋಗಿದ್ದಾರೆ. ಅವರು ನನಗೆ ಹೇಳಿಯೇ ಹೋಗಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಮೊದಲು ಬರುತ್ತೇನೆ ಎಂದು ಹೇಳಿ ಅವರು ಹೋಗಿದ್ದಾರೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಇದಕ್ಕಿಂತ ಬಹಳ ಉತ್ತಮ ಕೆಲಸ ಮಾಡುತ್ತಾರೆ ಎಂಬುದು ನಮಗೂ ಗೊತ್ತಾಗಲಿ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಮುಖ್ಯಮಂತ್ರಿಗಳು ಬೇರೆ ಒಂದು ಕಾರ್ಯಕ್ರಮಕ್ಕೆ ಹೋಗಿದ್ದಾರೆ. ಬೇರೆ ಸಚಿವರು ಮೇಲ್ಮನೆಯಲ್ಲಿ ಕೆಲವರು ಇದ್ದಾರೆ. ಬೇರೆ ಸಚಿವರನ್ನು ಇಲ್ಲಿ ಬರುವ ರೀತಿಯಲ್ಲಿ ಮಾಡಿ ಅಂತ ನಾನು ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಮೊದಲು ತಮಗೆ ತಿಳಿಸಬೇಕು. ತಮಗೆ ಬರೆದು ತಿಳಿಸಿದ್ದರೆ ಅವರು ಹೋಗಬಹುದು. ತಮಗೆ ಆ ಅಧಿಕಾರ ಇರುವುದು.

ಅಧ್ಯಕ್ಷರು : ಆಯಿತು, ಅವರು ಬರುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರಾಜಣ್ಣನವರೆ, ನೀವು ಮಾತನಾಡಿ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಸಭೆಗೆ ಬಾರದೆಯಿರುವ ಮಂತ್ರಿಗಳಿಗೆ ತಾವು ಸ್ವಲ್ಪ ಛೀಮಾರಿ ಹಾಕಬೇಕು. ಅವರಿಗೆ ಬೇರೆ ಏನು ಕೆಲಸ ಇದೆಯೆಂದು ಸ್ವಲ್ಪ ಕೇಳಿ. ಅದು ಸದನಕ್ಕೂ ಗೊತ್ತಾಗಲಿ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ನಾನೇ ಮುಂಜಾನೆ ಅಧ್ಯಕ್ಷರಿಗೆ ಹೇಳಿದ್ದೇನೆ. ಈ ರೀತಿ ಆದರೆ ಸದನ ಹೇಗೆ ನಡೆಸುವುದು ಅಂತ ನಾನು ಅವರನ್ನು ಕೇಳಿದ್ದೇನೆ. ಆಗ ನೀವೂ ಕೂಡ ಇದ್ದಿರಲಿಲ್ಲ. ಇದು ಎರಡೂ ಕಡೆಯವರಿಗೂ ಸಂಬಂಧ ಇದೆ.

ಅಧ್ಯಕ್ಷರು : ಈಗ ಅವರಿಗೆ ಮಾತನಾಡಲಿಕ್ಕೆ ಬಿಡಿ. ನೀವು ನನ್ನ ಗಮನಕ್ಕೆ ತಂದಿದ್ದೀರಿ. ನಾನು ಅವರಿಗೆ ಬರುವುದಕ್ಕೆ ಹೇಳಿದ್ದೇನೆ, ಅವರು ಬರುತ್ತಾರೆ. ಈಗ ರಾಜಣ್ಣನವರು ಪ್ರಾರಂಭ ಮಾಡಿ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಾಜಣ್ಣ ಅವರಂಥ ಹಿರಿಯರು ಮಾತನಾಡುತ್ತಿದ್ದಾರೆ. ಎರಡು ಪಕ್ಷಗಳಲ್ಲಿ ಒಂದು ಪಕ್ಷದವರಿಗೆ ಶುರು ಮಾಡಿಸಿದಿರಿ, ಇನ್ನೊಬ್ಬರನ್ನು ಬೆಂಬಲಕ್ಕೆ ತೆಗೆದುಕೊಂಡಿದ್ದೀರಿ. ಆಯಾಯ ಪಕ್ಷದ ಸದಸ್ಯರೇ ಇದ್ದರೆ ಇದನ್ನು ಸಮ್ಮಿಶ್ರ ಸರ್ಕಾರ ಅಂತ ಯಾರಾದರೂ ಹೇಳುತ್ತಾರೆಯೆ? ಇದು ಬರೇ ಎಸ್.ನವರು ಮಾತನಾಡುವಾಗ ಎಸ್.ನವರು ಇರುವುದು, ಕಾಂಗ್ರೆಸ್‌ನವರು ಮಾತನಾಡುವಾಗ ಕಾಂಗ್ರೆಸ್‌ನವರು ಇರುವುದು ಎಂದರೆ ಇದು ಯಾವ ದುರಂತ?

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಮಂತ್ರಿಗಳು) : ಇದು 'ಎಸ್, ಅಲ್ಲ, ಕಾಂಗ್ರೆಸ್ಸೂ ಅಲ್ಲ. ಇದು ಸಮ್ಮಿಶ್ರ ಸರ್ಕಾರ. ನೀವು ಏಕೆ ನಮ್ಮಲ್ಲಿ ವಿಭಾಗ ಮಾಡುವುದಕ್ಕೆ ಹೋಗುತ್ತೀರಿ ? ಇದು ಎರಡು ಪಕ್ಷಗಳ ಒಂದು ಸಮ್ಮಿಶ್ರ ಸರ್ಕಾರ. ಎರಡೂ ಪಕ್ಷಗಳ ಒಂದೇ ಸರ್ಕಾರ.

ಶ್ರೀ ಜೆ.ಸಿ.ಮಾಧುಸ್ವಾಮಿ : ತಾವು ಈಗ ಬಂದಿರಿ. ನೀವು ಮೊದಲೇ ಹಾಜರಿದ್ದರೆ ನಾನು ಮಾತನಾಡುತ್ತಿರಲಿಲ್ಲ.

(ಗೊಂದಲ)

ಮಾನ್ಯ ಸದಸ್ಯರು : ಅವರನ್ನು ಸೇರಿಸಿಕೊಂಡಿಲ್ಲ ಅಂತ ಅವರಿಗೆ ಬಹಳ ಬೇಜಾರು. ಅದಕ್ಕೇ ಹಾಗೆ ಹೇಳುತ್ತಿದ್ದಾರೆ. ಬಿ.ಜೆ.ಪಿ.ಯಿಂದ ಯಾರೂ ಮಾತನಾಡುವುದಿಲ್ಲ. ಇವರು ಮೂರೇ ಜನ ಮಾತನಾಡುವುದು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಯಾರ ಬಗ್ಗೆ ನೀವು ಮಾತನಾಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು : ಆಯಿತು. ದಯಮಾಡಿ ಕುಳಿತುಕೊಳ್ಳಿ. ರಾಜಣ್ಣನವರೇ, ನೀವು ಮಾತನಾಡಿ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ನಾನು ತಯಾರಿದ್ದೇನೆ. ನಮ್ಮ ರಕ್ಷಣೆಗೆ ತಾವು ಬರಬೇಕು. ನಿಮ್ಮವರೇ ಇಲ್ಲವಲ್ಲಾ ಇನ್ನೂ ಇಬ್ಬರು.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ರಾಜಣ್ಣನವರೆ, ತಾವು ದಯವಿಟ್ಟು ಕ್ಷಮಿಸಬೇಕು. ಆ ಪಾರ್ಟಿಯಲ್ಲಿ ಸೇರಿಸಿಕೊಳ್ಳಲಿಲ್ಲ ಅಂತ ನಾನು ಮಾತನಾಡುತ್ತಿದ್ದೇನೆ ಅಂತ ಹೇಳಿದ್ದಾರೆ .....

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ. ಮಾನ್ಯ ಮಾಧುಸ್ವಾಮಿಯವರೇ ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಬಹಳ ಪ್ರಮುಖವಾದ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ. ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಇವು ಏನಿದ್ದಾವೆ, ಇವುಗಳು ಅವರವರ ಜವಾಬ್ದಾರಿಯನ್ನು ಎಷ್ಟರಮಟ್ಟಿಗೆ ನಿರ್ವಹಣೆ ಮಾಡುತ್ತಿದ್ದೇವೆ? ಮಾಡದೇ ಇರುವುದರ ಫಲಶ್ರುತಿ ಏನಾಗಿದೆ ಅಂತ ನಾನು ಹೇಳುವುದಕ್ಕೆ ಹೊರಟ್ಟಿದ್ದೆ. ಅದು ಕೆಲವು ನಮ್ಮ ಹಿರಿಯ ಸದಸ್ಯರುಗಳು ಹೇಗಿದ್ದಾರೆ ಎಂದು ಶಿವಪೂಜೆಯಲ್ಲಿ ಕರಡಿಮರಿ ಬಿಟ್ಟ ಹಾಗೆ ಮಾತನಾಡುತ್ತಾರೆ. ವಾಟಾಳ್ ನಾಗರಾಜ್ ಅವರು ಯಾವಾಗಲೂ ಮಾತನಾಡುವಾಗ ಮಧ್ಯದಲ್ಲಿ

ಬರುತ್ತಲೇ ಇರುತ್ತಾರೆ. ಅವರಿಗೆ ನೀವು ಸ್ವಲ್ಪ ಬೇರೆ ಯಾರಾದರೂ ಸದಸ್ಯರು ಮಾತನಾಡುವಾಗ ಸ್ವಲ್ಪ ಸಹನೆಯಿಂದ ಕೇಳಬೇಕು ಎಂದು ಹೇಳಬೇಕು. ಅದನ್ನು ಅವರೂ ತಿಳಿದುಕೊಳ್ಳಬೇಕು. ಪ್ರಮುಖವಾಗಿ ಐದು ಜನ ಸಚಿವರು ಇದ್ದಾರೆ, ಇಷ್ಟು ಜನ ಶಾಸಕರುಗಳು ಕುಳಿತಿದ್ದಾರೆ. ಇಷ್ಟೆಲ್ಲಾ ಇರುವಾಗ ಇನ್ನೂ ಅವರು ಇಲ್ಲ, ಇವರು ಇಲ್ಲ ಅಂತ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಯಾವ ಪೂಜೆ ಸ್ವಾಮಿ? ಶಿವಪೂಜೆಯಲ್ಲಿ ಕರಡಿ ಎಲ್ಲಿ ಬರುತ್ತದೆ? ಅದು ಅವರಿಗೆ ಏನೂ ಗೊತ್ತಿಲ್ಲ.

(ಗೊಂದಲ)

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಈ ರೀತಿ ಆದಾಗ ಮಾತನಾಡುವುದು ಪ್ರಚಾರಕ್ಕೋಸ್ಕರ. ಈ ರೀತಿ ಪ್ರಚಾರ ತೆಗೆದುಕೊಳ್ಳತಕ್ಕಂಥ ಪ್ರವೃತ್ತಿ ಏನಿದೆ ಇದಕ್ಕೆ ಕಡಿವಾಣವನ್ನು ಅವರೇ ಹಾಕಿಕೊಳ್ಳಬೇಕು. ಇದನ್ನು ಯಾರೂ ಹೇಳಿಸಿ ಹಾಕುವುದಕ್ಕೆ ಆಗುವುದಿಲ್ಲ. ಏಕೆಂದರೆ ಒಂದು ದಿವಸ ಏನಾದರೂ ಇಲ್ಲಿ ನಡೆಯತಕ್ಕದ್ದು ನಾಳೆ ಪತ್ರಿಕೆಯಲ್ಲಿ ಬರಬಾರದು ಎಂದು ಹೇಳಿ. ಬಹುತೇಕ ಇಲ್ಲಿ ಯಾರೂ ಮಾತನಾಡುವುದೇ ಇಲ್ಲ. ಅಂತಹವರೇ ಇಲ್ಲಿ ಜಾಸ್ತಿ ಇರುತ್ತಾರೆ. ಪ್ರಚಾರಪ್ರಿಯತೆಗೋಸ್ಕರ ಈ ರೀತಿ ಪ್ರತಿಸಲ ಎದ್ದುನಿಂತು ಮಾತನಾಡುವುದನ್ನು ನಾವೂ ಮಾಡಬಹುದು. ಅದು ಸದನದ ಘನತೆಗೆ ಗೌರವ ತರತಕ್ಕಂಥಾದ್ದು ಅಲ್ಲ ಅಂತ ತಾವು ಬಹಳಷ್ಟು ಸಲ ಹೇಳಿದ್ದೀರಿ. ನಾನೇನೂ ಅದನ್ನು ಹೇಳುತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆ. ಈಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಯಾರ್ಯಾರ ಜವಾಬ್ದಾರಿಗಳು ಏನಿದ್ದಾವೆ, ಮತ್ತು ಆ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇದ್ದರೆ ಏನು ಫಲಶ್ರುತಿ ಆಗುತ್ತದೆ ಎಂದು ಹೇಳುವುದಕ್ಕೆ ನಾನು ಹೊರಟಿದ್ದೆ. ಅಂತಹ ಸಂದರ್ಭದಲ್ಲಿ ಅದಿಲ್ಲ, ಇದಿಲ್ಲ ಎನ್ನತಕ್ಕಂಥಾದ್ದು ಏನಿದೆ, ನಾನು ಭಾಷಣ ಪ್ರಾರಂಭ ಮಾಡಿದಾಗಿನಿಂದಲು ಮುಂದಿನ ಸಾಲಿನಲ್ಲಿ ಯಾರೂ ಇರಲಿಲ್ಲ. ಅದನ್ನು ನಾನು ಹೆಚ್ಚು ಬೆಳೆಸಲಿಕ್ಕೆ ಹೋಗುವುದಿಲ್ಲ. ಇದೇನು ಶಾಸಕಾಂಗದ ಕೆಲಸಕಾರ್ಯಗಳನ್ನು ಮಾಡತಕ್ಕಂಥಾದ್ದು ನಮ್ಮ ಜವಾಬ್ದಾರಿ ಏನಿದೆ, ಆ ಜವಾಬ್ದಾರಿಯನ್ನು ಎಷ್ಟರ ಮಟ್ಟಿಗೆ ನಿರ್ವಹಣೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಒಂದು ಆತ್ಮಶೋಧನೆ –ಏನು ಇನ್‌ಟ್ರಾಸ್ಪೆಕ್ಷನ್ ಅಂತ ಹೇಳುತ್ತೇವೆ, ಅದನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ. ಒಂದು ವರ್ಷದಲ್ಲಿ ನೂರು ದಿವಸವಾದರೂ ಶಾಸನಸಭೆ ನಡೆಯಬೇಕು ಎನ್ನತಕ್ಕಂಥಾದ್ದು ನಿಮ್ಮ ಪ್ರಿಸೈಡಿಂಗ್ ಆಫೀಸರ್ಸ್ ಸಮ್ಮೇಳನದಲ್ಲಿ ತೀರ್ಮಾನ ಎಲ್ಲಾ ಮಾಡಿದ್ದೀರಿ. ಆದರೆ, ನಾವು ಎಷ್ಟು ದಿವಸ ನಡೆಸುತ್ತಾ ಇದ್ದೇವೆ. ಇದು ನಡೆಸದೇ ಇರುವುದರಿಂದ ಮತ್ತು ಶಾಸನ ಸಭೆಗಳಲ್ಲಿ ಶಾಸನ ರಚನೆ ಮಾಡುವುದಕ್ಕೆ ಹೆಚ್ಚು ಕಾಲ ವಿನಿಯೋಗ ಮಾಡದೇ ಇರುವುದರಿಂದ ಎಷ್ಟೋ ಕಾಯಿದೆಗಳು ಇಲ್ಲಿ ಶಾಸಕರಿಗೇ ಗೊತ್ತಿರುವುದಿಲ್ಲ, ಆದರೆ, ಅವು ಜಾರಿ ಬಂದಿರುತ್ತವೆ. ಉದಾಹರಣೆಗೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮ ಪಂಚಾಯ್ತಿಗಳಿಗೆ ಕೊಡತಕ್ಕಂಥ ಶಾಸನ ಇಲ್ಲಿಯೇ ಆಗಿದೆ. ಆ ಶಾಸನ ಮಾಡಿದವರೇ ಬರುತ್ತಾರೆ, ಇದು ನಮಗೆ ಗೊತ್ತೇ ಇಲ್ಲ, ಯಾವಾಗಲೋ ಆಗಿಬಿಟ್ಟಿದೆ ಎನ್ನುತ್ತಾರೆ.

ಈ ರೀತಿ ಪರಿಣಾಮಕಾರಿಯಾಗಿ ಕೆಲಸ ಮಾಡದೇ ಇರತಕ್ಕಂಥ ವ್ಯವಸ್ಥೆ ಇಟ್ಟುಕೊಂಡು, ನಾವು ಶಾಸನವನ್ನು ಮಾಡುವುದೇ ಆದರೆ, ಮುಂದಿನ ಪೀಳಿಗೆಗೆ ಈ ಶಾಸನಗಳ ಭವಿಷ್ಯ ಯಾವ ರೀತಿಯಾಗುತ್ತದೆ ಎನ್ನುವುದಕ್ಕೆ ಸ್ವಲ್ಪ ಬೆಳಕು ಚೆಲ್ಲಬೇಕು. ಇವತ್ತು ಬೆಳಿಗ್ಗೆ ರೋಣ ಶಾಸಕರ ಒಂದು ಪ್ರಶ್ನೆ ಇತ್ತು. ಆಶ್ರಯ ಮನೆಗಳದ್ದೂ ಅಷ್ಟೆ. ಏನು ಕುಡಿಯುವ ನೀರನ್ನು ಅಲ್ಲಿಗೆ ಕೊಟ್ಟಿರತಕ್ಕಂಥಾದ್ದು ಇದೆ, ಆಶ್ರಯ ಸಮಿತಿಗಳನ್ನೂ ಕೂಡ ವಜಾ ಮಾಡತಕ್ಕ ಕಾಯಿದೆ ಮಾಡಿಕೊಂಡು, ಇವುಗಳನ್ನು ರಚನೆ ಮಾಡತಕ್ಕಂಥಾದ್ದಕ್ಕೆ ಅವಕಾಶವೇ ಇಲ್ಲದಂತಾಗಿದೆ. ಸನ್ಮಾನ್ಯ ಮಾಧುಸ್ವಾಮಿಯವರೂ ಕೂಡ ಹೇಳಿದರು. ಕಾಯಿದೆ ಬೇಕಾದರೆ, Legislation is the creation of this House. - ಆದ್ದರಿಂದ, ನಾವು ಬೇಕಾದರೆ ಸೂಕ್ತವಾಗಿ ತಿದ್ದುಪಡಿ ಮಾಡುವುದಕ್ಕೆ ಚಿಂತನೆಯನ್ನು ಮಾಡಬೇಕೆನ್ನುವ ಅವರ ಮಾತೇನಿದೆ, ಅದನ್ನು ನಾವೆಲ್ಲರೂ ಒಪ್ಪುತ್ತೇವೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುವುದಕ್ಕೆ ಬಯಸುತ್ತೇನೆ ಎಂದರೆ, ಶಾಸನ ಸಭೆಗಳನ್ನು ಸರಿಯಾಗಿ 150 ದಿವಸಕ್ಕೆ ಕಡಿಮೆ ಇಲ್ಲದ ಹಾಗೆ ನಡೆಸುವುದರಿಂದ ಏನು ಅನುಕೂಲ ಆಗುತ್ತಾ ಇತ್ತು. ಅದು ಆಗುತ್ತಾ ಇಲ್ಲ. ನಾವು ವಿಷಯ ಸಮಿತಿಗಳನ್ನು ಮಾಡುತ್ತೇವೆ. ಒಂದು ಮಾತನ್ನು ನಾನು ಬಹಳ ದುಃಖದಿಂದ ಹೇಳುವಂತಾದ್ದು. ಯಾರನ್ನೂ ಟೀಕೆ ಮಾಡುವುದಕ್ಕೆ ಅಥವಾ ಯಾರನ್ನೂ ಪ್ರಶಂಸೆ ಮಾಡುವಂತಾದ್ದು ಅಲ್ಲ. ನಮ್ಮಲ್ಲಿರತಕ್ಕ ಮಂತ್ರಿಗಳಿಗೆ ಅವರವರ ಖಾತೆಗಳಲ್ಲಿ ಏನು ಬಜೆಟ್ ಇದೆ ಎಂಬುದು ಗೊತ್ತಿದೆಯೇ ಕೇಳಿ. ಅದರಲ್ಲಿ ಪ್ಲಾನ್ ಏನಿದೆ, ನನ್ ಪ್ಲಾನ್ ಏನಿದೆ, ಗೊತ್ತಿದೆಯೇ ಕೇಳಿ. ಬಹಳಷ್ಟು ಜನರಿಗೆ ಗೊತ್ತೇ ಇರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ತಿಳಿದಿದ್ದರೆ ಬಹಳ ಸಂತೋಷ. ಏಕೆ ಆ ರೀತಿಯಾಗಿದೆಯೆಂದರೆ, ಆಯಾ ಇಲಾಖೆಗಳ ಬೇಡಿಕೆಗಳು ಇಲ್ಲಿ ಚರ್ಚೆಗೆ ಬರುತ್ತಾ ಇಲ್ಲ. ವಿಷಯ ಸಮಿತಿಯಲ್ಲಿ 10 ಜನ ಸದಸ್ಯರಿದ್ದರೆ ಆ ಸದಸ್ಯರು ಮಾತ್ರ ಆ ಇಲಾಖಾ ಬೇಡಿಕೆಗಳ ಬಗ್ಗೆ ಭಾಗವಹಿಸುತ್ತಾರೆ. ಉತ್ತರ ಕೊಡುವವರು ಯಾರು? ಉತ್ತರ ಕೊಡುವವರು ಅಧಿಕಾರಿಗಳು. ಮಂತ್ರಿಗಳು ಅದರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳುವುದಿಲ್ಲ ಮತ್ತು ತಿಳಿದುಕೊಳ್ಳುವುದಕ್ಕೂ ಹೋಗುವುದಿಲ್ಲ. ಆದ್ದರಿಂದ, ನಾವು ಆ ವಿಷಯ ಸಮಿತಿಗಳನ್ನು ಹಿಂದೆ 2001ನೇ ಇಸವಿಯಿಂದ ಏನು ಜಾರಿಗೆ ತಂದಿದ್ದಾರೆ, ಮಧ್ಯೆ ಇದ್ದುದ್ದನ್ನು ತೆಗೆದುಹಾಕಿ, ಮತ್ತೆ ಜಾರಿಗೆ ತಂದಿರತಕ್ಕ ವ್ಯವಸ್ಥೆ ಏನು ಮಾಡಿದ್ದಾರೆ, ಆ ವಿಷಯ ಸಮಿತಿಗಳನ್ನು ಕೈಬಿಟ್ಟು ಈ ಅಧಿವೇಶನದಲ್ಲೇ ಇಲಾಖಾ ಬೇಡಿಕೆಗಳ ಬಗ್ಗೆಯೂ ಚರ್ಚೆಯಾಗಿ, ಆ ಬೇಡಿಕೆಗಳನ್ನು ಮಂಜೂರು ಮಾಡುವುದಕ್ಕೆ ಇಲ್ಲಿ ಅವಕಾಶ ದೊರಕಿದಾಗ ಮಾತ್ರ, ಆ ಇಲಾಖೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕಾಗುತ್ತದೆ. ಆ ಇಲಾಖೆಯ ಬಗ್ಗೆ ಎಲ್ಲಾ ಸದಸ್ಯರುಗಳಿಗೂ ಮಾಹಿತಿಯೂ ಸಿಗುತ್ತದೆ. ಜೊತೆಗೆ, ಸಾರ್ವಜನಿಕರಿಗೂ ಮಾಹಿತಿ ಸಿಗುತ್ತದೆ. ಆ ವಿಷಯ ಸಮಿತಿಯಲ್ಲಿ ಏನಾದರೂ ರಿಪೋರ್ಟ್ ಬಂದಿದ್ದರೆ, ಸುಮ್ಮನೆ ಇಲ್ಲಿ "ಲೇ" ಮಾಡುತ್ತೇವಷ್ಟೆ. ನಾವು ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ. ಆ ಮಂತ್ರಿಗಳೂ ಕೂಡ ಅದನ್ನು ನೋಡುವುದಕ್ಕೆ ಹೋಗುವುದಿಲ್ಲ. ಈ ತರಹ ಪರಿಸ್ಥಿತಿಯಾಗುವುದರಿಂದ ನಾವು, ನಮ್ಮ ಜವಾಬ್ದಾರಿಗಳನ್ನು, ನಮ್ಮ ಕರ್ತವ್ಯಗಳನ್ನು ನಿರ್ವಹಣೆ ಮಾಡತಕ್ಕಂಥಾದ್ದರಲ್ಲಿ ಎಲ್ಲೋ ವಿಫಲರಾಗುತ್ತಿದ್ದೇವೆಂಬ ಭಾವನೆ ಬರಲಿಕ್ಕೆ ಸಾಧ್ಯವಾಗಿದೆ. ಅದನ್ನು ತಾವು, ಮುಂದಿನ ದಿನಗಳಲ್ಲಿ ಸರಿಪಡಿಸತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು

ಅಂದುಕೊಂಡಿದ್ದೇನೆ. ನಮ್ಮ ಈ ರಾಜ್ಯಪಾಲರ ಭಾಷಣದಲ್ಲಿ ಏನು ಬಹಳ ಮುಖ್ಯವಾದ ಅಂಶಗಳು ಇವೆಯೆನ್ನುವುದನ್ನು ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಬೆಂಗಳೂರು ನಗರಕ್ಕೆ ನೀರು ಸರಬರಾಜಿಗಾಗಿ 4ನೇ ಫೇಸ್ ಎಂದು ಮಾಡಿಕೊಳ್ಳುತ್ತಿದ್ದಾರೆ 3,400 ಕೋಟಿ ರೂಪಾಯಿಗಳನ್ನು ಇದಕ್ಕೆ ಮೀಸಲಿಡತಕ್ಕಂಥಾದ್ದು ಈ ಭಾಷಣದಲ್ಲಿ ಇದೆ. ನೀರು ಕೊಡತಕ್ಕಂಥಾದ್ದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಇಡೀ ಏನು ಅರ್ಬನೈಸೇಷನ್ ಆಗುತ್ತಾ ಇದೆ, ಹಳ್ಳಿಗಾಡಿನ ಜನರೆಲ್ಲಾ ಪಟ್ಟಣಕ್ಕೆ ಬಂದು ಸೇರುತ್ತಿದ್ದಾರೆ. ಇದನ್ನು ತಪ್ಪಿಸಬೇಕೆನ್ನುವ ಸರ್ಕಾರದ ನೀತಿ ಏನಿದೆ, ಬೆಂಗಳೂರು ನಗರ ಎಂದರೆ, it is a fastest growing city - ಎನ್ನತಕ್ಕಂಥಾದ್ದನ್ನು ಪದೇ ಪದೇ ಮುಖ್ಯಮಂತ್ರಿಗಳು ಕೂಡ ಹೇಳುತ್ತಿದ್ದಾರೆ. ಈ ನಗರದ ಆಸುಪಾಸಿನಲ್ಲಿ ಬರತಕ್ಕ ಬೇರೆ ಪಟ್ಟಣಗಳನ್ನು ಸ್ಯಾಟಲೈಟ್ ಟೌನ್‌ಷಿಫ್ ಅನ್ನು ಡೆವಲಪ್ ಮಾಡಿ, ಇಲ್ಲಿ ಕಂಜೆಶ್ಚನ್ ಆಗತಕ್ಕಂಥಾದ್ದು ಮತ್ತು ಇಲ್ಲಿ ಜನಜೀವನಕ್ಕೆ ಆಗತಕ್ಕ ಅಡಚಣೆಗಳನ್ನು ತಪ್ಪಿಸಲಿಕ್ಕೆ ಏಕೆ ಒಂದು ನೀತಿಯನ್ನು ಸರ್ಕಾರದಿಂದ ಮಾಡಬಾರದು ಎನ್ನುವುದು ನನ್ನ ಸಲಹೆ. ಬೆಂಗಳೂರು ನಗರಕ್ಕೆ 3400 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ್ನು ಕೊಡುವುದಕ್ಕೆ ಖರ್ಚು ಮಾಡುತ್ತಿರುವುದಕ್ಕೆ ನಾನು ವಿರೋಧ ಮಾಡುತ್ತಿದ್ದೇನೆ ಅಥವಾ ಅದರ ಬಗ್ಗೆ ನನಗೆ ರಿಸರ್ವೇಷನ್ ಇದೆ ಎನ್ನತಕ್ಕಂತಾದ್ದು ಅಲ್ಲ. ನಾಗರೀಕರಿಗೆ ನಾವು ಕುಡಿಯುವ ನೀರಿನ ಸೌಕರ್ಯವನ್ನು ಕೊಡುವುದು ನಮ್ಮ ಜವಾಬ್ದಾರಿ. ಆ ಜವಾಬ್ದಾರಿಯನ್ನು ನಿರ್ವಹಣೆ ಮಾಡಲಿಕ್ಕೆ ಏನು 3400 ಕೋಟಿ ರೂ ಬೆಂಗಳೂರು ನಗರದ ಜನರಿಗೆ ಮಾಡಿರತಕ್ಕಂಥಾದ್ದು ಇದೆ. ಅದೇ ರೀತಿ ಹಳ್ಳಿಗಾಡಿನ ಜನರಿಗೆ ಈ ಬವಣೆಯನ್ನು ಹೋಗಲಾಡಿಸುವುದಕ್ಕೆ ನೀರಿಗಾಗಿ ಎಷ್ಟಿದ್ದಾರೆಂದರೆ 322 ಕೋಟಿ ರೂ ಅಂದಾಜು ವೆಚ್ಚದಲ್ಲಿ ರಾಜ್ಯದ ವಿವಿಧ ಪಟ್ಟಣಗಳಲ್ಲಿ 30 ನೀರು ಸರಬರಾಜು, ಒಳಚರಂಡಿ ಯೋಜನೆ ಕಾರ್ಯಾರಂಭ ಮಾಡುತ್ತವೆ ಎಂದು ಹೇಳಿದ್ದಾರೆ. 440 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 64 ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳು ಪ್ರಗತಿಯಲ್ಲಿವೆ ಎಂದು ಹೇಳಿದ್ದಾರೆ. ಇವೆರಡು ಸೇರಿದರೂ ಕೂಡ 762 ಕೋಟಿ ರೂಪಾಯಿಗಳು. ಬೆಂಗಳೂರು ನಗರಕ್ಕೆ 3400 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡತಕ್ಕ ಜವಾಬ್ದಾರಿಯನ್ನು ಒಂದು ಶಕ್ತಿಯನ್ನು ಸರ್ಕಾರ ಪ್ರದರ್ಶನ ಮಾಡತಕ್ಕ ಸಂದರ್ಭದಲ್ಲಿ, ಹಳ್ಳಿಗಾಡಿನ ಜನ ಏನಿದ್ದಾರೆ, ಅವರಗೂ ಕೂಡ ಕನಿಷ್ಟ 5000 ಕೋಟಿರೂ ಆದರೂ ಈ ಕುಡಿಯುವ ನೀರಿನ ಯೋಜನೆಗೋಸ್ಕರ ಮೀಸಲಿಡುತ್ತೇವೆ ಎನ್ನುವ ಮಾತನ್ನು ಇದರಲ್ಲಿ ಹೇಳಿಸಿದ್ದರೆ, ಇನ್ನೂ ನಮ್ಮ ಸರ್ಕಾರದ ಘನತೆ ಗೌರವ ಹೆಚ್ಚಾಗುತ್ತಿತ್ತು ಎಂಬುದು ನಮ್ಮ ಭಾವನೆ. ಸರ್ಕಾರದ ಮುಂದಿನ ದಿನಗಳಲ್ಲಿ ನಡೆಯತಕ್ಕ ಮಾರ್ಗಸೂಚಿಯಂತೆ ಈ ಭಾಷಣ ಇದೆಯೆಂದು ನಾವೆಲ್ಲಾ ಭಾವನೆ ಮಾಡಿಕೊಳ್ಳುತ್ತೇವೆ, ಬಹಳಷ್ಟು ಹಳ್ಳಿಗಾಡಿನ ಜನರಿಗೆ, ಗ್ರಾಮೀಣ ಪ್ರದೇಶದ ರೈತರಿಗೆ, ವಿದ್ಯಾರ್ಥಿಗಳಿಗೆ, ಹಿಂದುಳಿದ ವರ್ಗಗಳಿಗೆ ಹರಿಜನ ಗಿರಿಜನರಿಗೆ ಬಹಳಷ್ಟು ಕಾರ್ಯಕ್ರಮಗಳನ್ನು ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಲಾಗಿದೆ. ಆ ಭಾಷಣದಲ್ಲಿ ಹೇಳಿರತಕ್ಕ ರೀತಿಯಲ್ಲಿ, ಈ ಕಾರ್ಯಕ್ರಮಗಳನ್ನು ಜಾರಿ ಮಾಡತಕ್ಕಂಥಾದ್ದು ಕೂಡ ಬಹಳ ಪ್ರಮುಖವಾದಂಥ ವಿಚಾರ. ಇದರಲ್ಲಿ ಹಳದಿ ಕಾರ್ಡ್ ಬಗ್ಗೆ ಕೂಡ ಈಗಾಗಲೇ ಪ್ರಸ್ತಾಪ ಆಗಿದೆ. ನೀವು ಕೂಡ ಅರ್ಧಗಂಟೆಯ ಚರ್ಚೆಯಲ್ಲಿ ಸೇರಿಸುತ್ತೇವೆಂದು ಹೇಳಿದಿರಿ, ಆದರೆ ಇದು ಅಜೆಂಡಾದಲ್ಲಿ ಸೇರಲಿಲ್ಲ. ಈ ಹಳದಿ ಕಾರ್ಡಿನ

ವಿತರಣೆಯಲ್ಲೂ ಕೂಡ ಈಗಾಗಲೇ ನಾವು ಕಂಪ್ಯೂಟರೈಸ್ ಮಾಡಿರುವುದು ಮತ್ತು 40 ಲಕ್ಷ ಜನರಿಗೆ ಕೊಟ್ಟಿರುವುದೂ ಇದೆ. ಇನ್ನೂ ಐಡೆಂಟಿಫೈ ಮಾಡಿರುವುದು 70 ಲಕ್ಷ ಜನರಿದ್ದಾರೆ ಎಂಬುದು ಈ ಭಾಷಣದಲ್ಲಿದೆ. ಆದರೆ, ಹಳದಿ ಕಾರ್ಡುಗಳನ್ನು ಕೊಡತಕ್ಕಂಥಾದ್ದು, ಬಡವರಿಗೆ ಕೊಡತಕ್ಕ ಏನು 3 ರೂಪಾಯಿ ಕೆ.ಜಿ.ಯಂತೆ ತಿಂಗಳಿಗೆ ಸುಮಾರು 20 ಕೆ.ಜಿ.ಕೊಡುತ್ತೇವೆ ಅದೇ ರೀತಿ ಸೀಮೆಎಣ್ಣೆ 10 ರೂಪಾಯಿ ಲೀಟರಿಗೆ ಕೊಡುತ್ತೇವೆ. ಅದು ಯಾವುದೇ ಕಾರಣಕ್ಕೆ ಹೆಚ್ಚಿನ ದರದಲ್ಲಿ, ಪಡಿತರ ವ್ಯವಸ್ಥೆಯಲ್ಲಿ ಅಲ್ಲಿನ ಅಧಿಕಾರಿಗಳು ಮಾರಾಟವಾಗದ ರೀತಿಯಲ್ಲಿ ಆಸಕ್ತಿಯನ್ನು ವಹಿಸುವುದು ಬಹಳ ಮುಖ್ಯ. ಸರ್ಕಾರ ಕಾರ್ಯಕ್ರಮವನ್ನು ರೂಪಿಸಿ, ಆ ಒಂದು ಕಾರ್ಯಕ್ರಮದ ಹಿನ್ನಲೆಯಲ್ಲಿ ಬೇಕಾದ ಹಣಕಾಸನ್ನು ಒದಗಿಸಿಕೊಡತಕ್ಕ ದಿಕ್ಕಿನಲ್ಲಿ ಮಾಡಿದಾಗ, ಆ ಒಂದು ಸವಲತ್ತು ಇದೆ, ಸೌಲಭ್ಯ ಇದೆ ಅದು ಅರ್ಹರಿಗೆ ದೊರಕತಕ್ಕ ರೀತಿಯಲ್ಲಿ ನೋಡತಕ್ಕದ್ದು ನಮ್ಮ ಅಧಿಕಾರಿಗಳ ಜವಾಬ್ದಾರಿ ಇದೆ. ಅದು ಸರಿಯಾಗಿ ನಡೆಯುತ್ತಾ ಇದೆಯೇ ಇಲ್ಲವೇ ಎನ್ನುವುದನ್ನು ನೋಡತಕ್ಕಂಥಾದ್ದು ಮೇಲಿನ ಹಂತದ ಅಧಿಕಾರಿಗಳು ಮತ್ತು ಸರ್ಕಾರದ ಜವಾಬ್ದಾರಿ ಕೂಡ ಬರುತ್ತದೆ. ಕೆಲವು ಕಡೆ ಲೋಪದೋಷಗಳಿವೆ ಇವು ಸರ್ಕಾರದ ಗಮನಕ್ಕೂ ಬಂದಿದೆ ಎಂಬುದು ಉತ್ತರದಲ್ಲಿ ಇದೆ. ಆ ರೀತಿಯಾದಂಥ ಸಂದರ್ಭದಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಆಗಬೇಕು. ನಮ್ಮ ದೇಶದಲ್ಲಿ ಯಾರು ತಪ್ಪು ಮಾಡುತ್ತಾನೆ, ಅವನಿಗೆ ಶಿಕ್ಷೆಯೇ ಆಗುತ್ತಾ ಇಲ್ಲ. ಆದ್ದರಿಂದ, ತಪ್ಪು ಮಾಡತಕ್ಕಂಥವರು, ಇನ್ನೂ ತಪ್ಪನ್ನು ಮುಂದುವರಿಸಿಕೊಂಡು ಹೋಗತಕ್ಕ ಪ್ರವೃತ್ತಿ ಬೆಳೆಯುತ್ತಾ ಇದೆ. ನಮ್ಮ ಕ್ರಿಮಿನಾಲಜಿ ಏನು ಏನಿದೆ, ಬರುವ ನೂರು ಜನ ತಪ್ಪಿತಸ್ಥರಲ್ಲಿ 99 ಜನ ತಪ್ಪಿಸಿಕೊಂಡರೂ ಚಿಂತೆಯಿಲ್ಲ, ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂಬ ದೊಡ್ಡ ಮನೋಭಾವವನ್ನು ಇಟ್ಟುಕೊಂಡು ಮಾಡಿರತಕ್ಕ ನಮ್ಮ ಕಿಮಿನಲ್ ಕಾಯಿದೆಗಳು. ಆದ್ದರಿಂದ ನಮ್ಮ ನೂರು ಜನ ತಪ್ಪಿತಸ್ಥರಲ್ಲಿ 99 ಜನ ತಪ್ಪಿಸಿಕೊಳ್ಳತಕ್ಕಂಥಾದ್ದೇ ಶಕ್ತಿ. ಅಂದರೆ, ತಪ್ಪಿಸಿಕೊಳ್ಳುವುದನ್ನೇ ನಾವು ಈ ದಿವಸ ಕಾಣುತ್ತಾ ಇರುವುದು. ಹಾಗಾಗಿ ಯಾವುದೇ ಸೌಲಭ್ಯಗಳು ಸರ್ಕಾರದಿಂದ ನಾವು ಅರ್ಹರಿಗೆ ತಲಿಪಿಸತಕ್ಕ ಸಂದರ್ಭದಲ್ಲಿ, ಆ ಸೌಲಭ್ಯಗಳು ಅರ್ಹರಿಗೆ ದೊರಕದೇ ಇರುವುದು ಅವರ ಗಮನಕ್ಕೆ ಬಂದಾಗ ಅದಕ್ಕೆ ಕಾರಣೀಭೂತರಾದಂಥ, ತಪ್ಪು ಮಾಡಿದಂಥ ಜನರನ್ನು ಶಿಕ್ಷೆ ಮಾಡತಕ್ಕಂಥಾದ್ದು. ಉದಾಹರಣೆಗೆ, ನನಗೆ ಅರ್ಹತೆ ಇಲ್ಲದೇ ಇದ್ದರೂ ಕೂಡ ನಾನು ಹಳದಿ ಕಾರ್ಡ್ ತೆಗೆದುಕೊಂಡರೆ ನಾನೂ ಕೂಡ ತಪ್ಪಿತಸ್ಥನೇ. ಆದ್ದರಿಂದ, ಈ ರೀತಿ ತೆಗೆದುಕೊಂಡವರೂ ತಪ್ಪಿತಸ್ಥರಾಗುತ್ತಾರೆ. ಕೊಡಲಿಕ್ಕೆ ಸಹಕಾರ ಮಾಡಿದಂಥ ಅಧಿಕಾರಿಗಳೂ ಕೂಡ ತಪ್ಪಿತಸ್ಥರಾಗುತ್ತಾರೆ. ಆದ್ದರಿಂದ ಯಾರ್‍ಯಾರು ಅವನು ತೆಗೆದುಕೊಂಡವನು ತಪ್ಪಿತಸ್ಥನಾಗುತ್ತಾನೆ, ಕೊಡಲಿಕ್ಕೆ ಸಹಕಾರ ಮಾಡಿದಂತಹ ಅಧಿಕಾರಿಗಳೂ ಕೂಡ ತಪ್ಪಿತಸ್ಥರಾಗುತ್ತಾರೆ. ಇದುವರೆಗೂ ಎಲ್ಲಿಯಾದರೂ ಒಂದು ನಿದರ್ಶನ, ಯಾರು ಅನರ್ಹರಿದ್ದಾರೆ, ಒಂದು ಆಶ್ರಯ ಮನೆಗಳು ಇರಬಹುದು ಅಥವಾ ಆಶ್ರಯ ಸೈಟ್‌ಇರಬಹುದು, ಅಥವಾ ನಮ್ಮ ಹಳದಿ ಕಾರ್ಡ್ ಇರಬಹುದು, ಯಾವುದೇ ಇರಲಿ ಸರ್ಕಾರದ ಸೌಲಭ್ಯವನ್ನು ಪಡೆಯತಕ್ಕಂಥ ಸಂದರ್ಭದಲ್ಲಿ ಅನರ್ಹರು ಪಡೆದಾಗ ಅವರಿಗೆ ಶಿಕ್ಷೆಯಾಗಿರತಕ್ಕಂಥಾದ್ದು ಇದುವರೆಗೂ ನಮ್ಮ ಗಮನಕ್ಕೆ ಬಂದಿಲ್ಲದೇ ಇರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಹಾಗೆಯೇ ಅಂತಹ ಒಂದು ಅನರ್ಹರು ತೆಗೆದುಕೊಳ್ಳತಕ್ಕಂಥಾದ್ದಕ್ಕೆ ಸಹಕಾರ ಮಾಡಿದಂತಹ ಸಂಬಂಧಪಟ್ಟ

ಅಧಿಕಾರಿಗಳ ಮೇಲೂ ಕೂಡ ಕ್ರಮ ತೆಗೆದು ಕೊಳ್ಳತಕ್ಕಂಥಾದ್ದು ಆದರೆ ಆಗ ಅನರ್ಹರು ಯಾರೂ ಕೂಡ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಮಧ್ಯಾಹ್ನ ಮಾನ್ಯ ರಮೇಶ್‌ಕುಮಾರ್‌ರವರು ಹೇಳುತ್ತಿದ್ದರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ನಾನು ಬೇಕಾದರೆ ನನ್ನ ಹತ್ತಿರ ಇರುವ ಉದಾಹರಣೆಯನ್ನು ಕೊಡುತ್ತೇನೆ. ಕೂಲಿ ಮಾಡತಕ್ಕಂಥವನು ಯಾರು ಕೂಲಿಗೆ ಹೋಗುತ್ತಾನೆ ಅವನಿಗೆ ಹಳದಿ ಕಾರ್ಡ್ ಇಲ್ಲ. ಯಾರು ಕೂಲಿ ಮಾಡಿಸಿಕೊಳ್ಳುತ್ತಾನೆ ಅವನಿಗೆ ಹಳದಿ ಕಾರ್ಡ್ ಇದೆ. ಕೂಲಿ ಯಾರು ಮಾಡಿಸಿಕೊಳ್ಳುತ್ತಾನೆ ಅವನ ಹತ್ತಿರ ಹಳದಿ ಕಾರ್ಡ್ ಇದೆ. ಕೂಲಿಗೆ ಯಾರು ಹೋಗುತ್ತಿದ್ದಾನೆ ಅವನಿಗೆ ಹಳದಿ ಕಾರ್ಡ್ ಸಿಕ್ಕಿಲ್ಲ. ಈ ರೀತಿ ಪರಿಸ್ಥಿತಿ ಇದೆ. ಅವನು ಯಾರು ತೆಗೆದುಕೊಂಡಿರುತ್ತಾನೆ ಅವನು ಫಾಲ್ಸ್ ಡಿಕ್ಲರೇಷನ್ ಕೊಟ್ಟು ತೆಗೆದುಕೊಂಡಿರುತ್ತಾನೆ, ಅಥವಾ ಫಾಲ್ಸ್ ಸ್ಟೇಟ್‌ಮೆಂಟ್ ಕೊಟ್ಟು ಸರ್ಕಾರದ ಸೌಲಭ್ಯಗಳನ್ನು ತೆಗೆದುಕೊಂಡಿರುತ್ತಾರೆ ಅಂತಹವರಿಗೆ ಶಿಕ್ಷೆ ಏಕೆ ಮಾಡಬಾರದು? ಆಗ ಬೇರೆಯವರು ಯಾರೂ ತೆಗೆದುಕೊಳ್ಳುವುದಿಲ್ಲ. ಈ ರೀತಿ ಒಂದು ಸರ್ಕಾರದ ದೃಷ್ಟಿಕೋನ ಎಂದು ನಾವು ಏನು ಹೇಳುತ್ತೇವೆ ಆ ದೃಷ್ಟಿಕೋನ ಕೂಡ ಈ ನಿಟ್ಟಿನಲ್ಲಿ ಅವರು ಚಿಂತನೆಯನ್ನು ಮಾಡತಕ್ಕಂಥಾದ್ದು, ಈ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ಆಗುವುದಕ್ಕೆ ಸಾಧ್ಯ, ಆಗುತ್ತದೆ ಎನ್ನುವ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇದರಲ್ಲಿ ನಾನು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ವಿಶೇಷವಾಗಿ ಈ ಸ್ತ್ರೀಶಕ್ತಿ ಗುಂಪುಗಳ ಬಗ್ಗೆ ಏನು ಸರ್ಕಾರದ ಅನಿಸಿಕೆ ಇದೆ ಅದು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ನನ್ನ ಸಲಹೆ. ಈ ಸ್ತ್ರೀಶಕ್ತಿ ಗುಂಪುಗಳು, ಇದು ಬಹಳ ಒಳ್ಳೆಯ ಕಾರ್ಯಕ್ರಮ. ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಕೂಡ ಕೊಟ್ಟಿದ್ದ ಗುರಿ ಮುಗಿದು ಹೋಗಿದೆ. ನೀವು ಒಂದೊಂದು ಜಿಲ್ಲೆಯಲ್ಲಿ 5 ಸಾವಿರ ಗುಂಪುಗಳನ್ನು ರಚನೆ ಮಾಡಬೇಕೆಂದು ಸರ್ಕಾರದ ಗುರಿ ಏನಿತ್ತು ಅದು 5 ಸಾವಿರ ಇರಬಹುದು, 3 ಸಾವಿರ ಇರಬಹುದು ಡಿಪೆಂಡಿಂಗ್ ಅನ್ ಆಯಾಯಾ ಜಿಲ್ಲೆಗಳ ಮೇಲೆ ತೀರ್ಮಾನವಾಗುತ್ತದೆ. ಅಂತಹ ಕಡೆ ಗುಂಪುಗಳನ್ನು ರಚನೆ ಮಾಡುವ ಗುರಿ ಮುಗಿದು ಹೋಗಿದೆ ಅಂತ ಹೇಳಿ ಹೆಚ್ಚಿನ ಗುಂಪುಗಳು ರಚನೆಯಾಗತಕ್ಕಂಥಾದ್ದಕ್ಕೆ ಅಡಚಣೆಯಾಗುತ್ತಿದೆ. ಹೆಚ್ಚಿನ ಗುಂಪುಗಳನ್ನು ಮಾಡಿದರೆ ಮತ್ತೆ ಸುತ್ತು ನಿಧಿ ಕೊಡತಕ್ಕಂಥ ಪರಿಸ್ಥಿತಿ ಬರುತ್ತದೆ ಅಂತ ಹೇಳಿ ಸರ್ಕಾರದಿಂದ ಆ ಒಂದು ಗುಂಪುಗಳ ರಚನೆಯ ಗುರಿಯನ್ನು ಮೊಟಕು ಮಾಡಿರತಕ್ಕಂಥಾದ್ದು ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಕೂಡ ಇದೊಂದು ಸಮಸ್ಯೆ ಅಂತ ನಾನು ಅಂದುಕೊಂಡು ಹೀಗಾಗಿ ಆ ಒಂದು ಸ್ತ್ರೀಶಕ್ತಿ ಗುಂಪುಗಳಿಗೆ ಇನ್ನೂ ಹೆಚ್ಚಿನ ಗುರಿಯನ್ನು ನಿಗದಿ ಮಾಡತಕ್ಕಂಥಾದ್ದು ಕೂಡ ಈಗಾಗಲೇ ಸುಮಾರು 89 ಸಾವಿರ 773 ಗುಂಪುಗಳನ್ನು ರಾಜ್ಯದಲ್ಲಿ ಮಾಡಿರತಕ್ಕಂಥಾದ್ದು ನಿಜಕ್ಕೂ ಕೂಡ ಬಹಳ ಶ್ಲಾಘನೀಯವಾದಂಥಾದ್ದು. ಮತ್ತೆ ಇದರ ಉಳಿತಾಯ ಕೂಡ ಸುಮಾರು ಈಗಾಗಲೇ 231 ಕೋಟಿ ಉಳಿತಾಯವನ್ನು ಈ ಗುಂಪುಗಳಿಗೆ ಆಗಿರತಕ್ಕಂಥಾದ್ದು ಬಹುತೇಕ ಎಲ್ಲಾ ಗುಂಪುಗಳಿಗೂ ಕೂಡ ಸುತ್ತು ನಿಧಿಯನ್ನು ಈಗಾಗಲೇ ಸರ್ಕಾರದಿಂದ ಬಿಡುಗಡೆಯಾಗಿದೆ. ಈ ಒಂದು ಸರ್ಕಾರದ ಹಿಂದಿನ ದಿನಗಳಲ್ಲಿ ಸುತ್ತು ನಿಧಿಯನ್ನು ತೆಗೆದುಕೊಳ್ಳತಕ್ಕಂಥಾದ್ದೇ ಒಂದು ದೊಡ್ಡ ಸಾಹಸವಾಗುತ್ತಿತ್ತು ಅವರಿಗೆ, ಇವತ್ತು ಸರ್ಕಾರದಲ್ಲಿ ಸುತ್ತು ನಿಧಿಯನ್ನು ಎಲ್ಲಾ ಅರ್ಹ ಗುಂಪುಗಳಿಗೆ ತಲುಪಿಸತಕ್ಕಂಥ

ಪ್ರಾಮಾಣಿಕ ಪ್ರಯತ್ನ ಮತ್ತು ಒಂದು ಒಳ್ಳೆಯ ಕಾರ್ಯವನ್ನು ಕೂಡ ಮಾಡಿದ್ದಾರೆ. ಅದರ ಜೊತೆಯಲ್ಲಿ ಹೆಚ್ಚು ಗುಂಪುಗಳನ್ನು ರಚನೆ ಮಾಡತಕ್ಕಂಥಾದ್ದು, ಗುರಿಯನ್ನೂ ಕೂಡ ಹೆಚ್ಚಿಸಬೇಕೆಂಬುದು ಕೂಡ ನನ್ನ ಒಂದು ಸಲಹೆ, ಈ ಒಂದು ಸ್ತ್ರೀಶಕ್ತಿ ಗುಂಪುಗಳಲ್ಲಿ ಮುಂದೆ ಏನು ಒಂದು ಸಮಸ್ಯೆ ತಲೆದೋರಬಹುದು ಎನ್ನತಕ್ಕಂಥಾದ್ದು ಏನು ಸ್ತ್ರೀಶಕ್ತಿ ಗುಂಪುಗಳಲ್ಲಿ ಈಗಾಗಲೇ ನಾವು ಅವರಿಗೆ ಸ್ವಯಂ ಉದ್ಯೋಗವನ್ನು ಮಾಡತಕ್ಕಂಥಾದ್ದು, ಸಣ್ಣ ಪುಟ್ಟ ಉತ್ಪಾದನೆಗಳನ್ನು ಮಾಡಿಸತಕ್ಕಂಥಾದ್ದು, ಆ ಉತ್ಪಾದನೆಗಳಿಗೆ ಸರಿಯಾದ ಮಾರುಕಟ್ಟೆ ದೊರಕತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ಸೃಷ್ಟಿ ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ ನಮ್ಮ ಈ ಒಂದು ಕಾನ್ಸೆಪ್ಟ್ ಏನಿದೆ ಇದಕ್ಕೆ ಭಾರಿ ಹೊಡೆತ ಬೀಳತಕ್ಕಂಥಾದ್ದು, ಈಗ ಊದಬತ್ತಿ ಮಾಡಬಹುದು, ಮೇಣದ ಬತ್ತಿ ಮಾಡಬಹುದು, ಹಪ್ಪಳ ಮಾಡಬಹುದು, ಉಪ್ಪಿನಕಾಯಿ ಮಾಡಬಹುದು, ಏನೇ ಮಾಡಬಹುದು, ಆದರೆ ಈ ದಿವಸ ಅವರಿಗೆ ಮಾರುಕಟ್ಟೆಯನ್ನು ದೊರಕಿಸಿಕೊಡತಕ್ಕಂಥ ನಿಟ್ಟಿನಲ್ಲಿ ಕೂಡ ಸರ್ಕಾರ ಆಸಕ್ತಿಯನ್ನು ವಹಿಸಿರತಕ್ಕಂಥಾದ್ದು ಬಹಳ ಒಳ್ಳೆಯದು. ಮತ್ತು ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವಂಥಾದ್ದು ಕೂಡ ಬಹಳ ಮುಖ್ಯ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಂದು ಕುಳಿತುಕೊಂಡು ಮಾರ್ಗದರ್ಶನ ಕೊಟ್ಟು ಹೇಳಿಸುತ್ತಿದ್ದಾರಾ?

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರ ಮಾಡಿರುವ ಒಳ್ಳೆಯ ಕೆಲಸವನ್ನು ಹೇಳುವುದಕ್ಕೆ ನಾವು ನಿಂತಿರುವುದು. ಅದಕ್ಕೆ ಏಕೆ ಹೊಟ್ಟೆ ಉರಿಪಟ್ಟುಕೊಳ್ಳುತ್ತೀರಿ? ಈಗ ನಮ್ಮ ರೈತರ ಪರಿಸ್ಥಿತಿ ಬಗ್ಗೆ ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ನಮ್ಮ ದೇಶದಲ್ಲಿ ನಾವು ಎಲ್ಲಾ ಕಡೆ ಭಾಷಣ ಮಾಡುತ್ತಿದ್ದೇವೆ. ರೈತರಿಗೋಸ್ಕರ ನಾವು ಎಲ್ಲಾ ಅಭಿವೃದ್ಧಿ ಮಾಡತಕ್ಕಂಥ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಆದರೆ ಆ ಒಂದು ಕಾರ್ಯಕ್ರಮಕ್ಕೆ ರೈತರು ಏನು ಸಹಕಾರ ಕೊಡುತ್ತಿದ್ದಾರೆ ಎನ್ನತಕ್ಕಂಥಾದ್ದು ಮುಖ್ಯ. ಈಗ ಉದಾಹರಣೆಗೆ ನಮ್ಮ ತೋಟಗಾರಿಕೆ ಸಚಿವರು ಮೊನ್ನೆ ಅವರೂ ಕೂಡ ಟೊಮಾಟೋ ತಂದು, ಜಾಸ್ತಿ ಬೆಳೆದು ತೆಗೆದುಕೊಂಡು ಬಂದು ಹಾಕಿದ್ದಾರೆ. ಮುಂದಿನ ವರ್ಷ ಯಾರೋ ಟೊಮಾಟೋ ಬೆಳೆಯುವುದಿಲ್ಲ. ಮುಂದಿನ ವರ್ಷ ಟೊಮಾಟೋ ಬೆಲೆ ಜಾಸ್ತಿಯಾಗುತ್ತದೆ. ರೈತರಲ್ಲಿ ಏನು ಒಂದು ರೀತಿಯ ಮನೋಭಾವ ಇದೆ ಅಂದರೆ ಈ ವರ್ಷ ಟೊಮಾಟೋ ರೇಟ್ ಇಲ್ಲ ಅಂದರೆ ಮುಂದಿನ ವರ್ಷ ಯಾರೂ ಟೊಮಾಟೋ ಬೆಳೆಯುವುದಿಲ್ಲ. ಈ ವರ್ಷ ಹುರುಳಿಕಾಯಿ ಬೆಲೆ ಚೆನ್ನಾಗಿದೆ ಅಂತ ಅಂದರೆ ಮುಂದಿನ ವರ್ಷ ಎಲ್ಲರೂ ಹುರುಳಿಕಾಯಿಯನ್ನೇ ಬೆಳೆದುಬಿಡುತ್ತಾರೆ. ಅದರ ಆಚೆ ವರ್ಷ ತೆಗೆದುಕೊಂಡು ಬಂದು ಎಲ್ಲಾ ಸರ್ಕಾರಕ್ಕೆ ನೀವು ಅದನ್ನು ಕೊಡಿ ಇದನ್ನು ಕೊಡಿ ಕೆ.ಜಿ.ಗೆ 20 ರೂಪಾಯಿ ಕೊಡಿ, ಬೆಂಬಲ ಬೆಲೆ ಕೊಡಿ ಅಂದರೆ ಹೇಗೆ? ಏನು ಸರ್ಕಾರ ಅಂದರೆ ಆಕಾಶದಿಂದ ದುಡ್ಡು ತರುವುದಕ್ಕೆ ಆಗುತ್ತದೆಯೆ? ಜನರ ದುಡ್ಡೇ ಟ್ಯಾಕ್ಸ್ ಕೊಡತಕ್ಕಂಥ ಜನರು ಏನು ಇದ್ದಾರೆ ಅವರ ಹಣದಿಂದ ಈ ಒಂದು ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕಂಥಾದ್ದು, ಆದರೆ ರೈತರೂ ಕೂಡ ಒಂದು ರೀತಿಯ ಅವರದೇ ಆದಂತಹ ಸ್ವಯಂ ಪಾಲನೆಯನ್ನು ಶಿಸ್ತನ್ನು ಇಟ್ಟುಕೊಳ್ಳಬೇಕಾಗುತ್ತದೆ. ನಾವು ಎಷ್ಟು ಬೆಳೆಯಬೇಕು, ಬೆಳೆದಂತಹ ಮಾಲಿಗೆ ಎಷ್ಟು ಬೇಡಿಕೆ ಇರುತ್ತದೆ? ನಮಗೆ ರೇಟ್ ಏನು ಸಿಗಬಹುದು

ಎನ್ನತಕ್ಕಂಥಾದ್ದು ಇರಬೇಕು, ಸರ್ಕಾರದವರು ಏನು ಹೇಳುತ್ತಾರೆ ಅದಕ್ಕೆ ಅವರೂ ಕೂಡ ಒಂದು ರೀತಿಯ ಸಹಕಾರವನ್ನು ಕೊಟ್ಟಾಗ ಮಾತ್ರ .....

ಮಾನ್ಯ ಸದಸ್ಯರು : ಕ್ರಾಪಿಂಗ್ ಪ್ಯಾಟ್ರನ್ ಸರ್ಕಾರದವರೇ ಮಾಡಬೇಕಾಗುತ್ತದೆ.

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಈ ತರಹ ಬೆಳೆಯಬೇಕಪ್ಪ, ಈ ತರಹದ ತಳಿಯನ್ನು ಉಪಯೋಗ ಮಾಡಿ, ಇಂತಹ ಸಮಯದಲ್ಲಿ ನೀವು ಬಿತ್ತನೆ ಮಾಡಿ ಎಂದು ಹೇಳುತ್ತಾರೆ. ಏಯ್ ಇವರ್‍ಯಾರಯ್ಯ ಹೇಳುವುದಕ್ಕೆ, ನಾವು ಹಾಗೆ ಬೆಳೆಯಬೇಕು ಹೀಗೆ ಬೆಳೆಯಬೇಕು ಎನ್ನತಕ್ಕಂಥ ಉದ್ದಟತನದಿಂದ ಮಾತನಾಡತಕ್ಕಂಥ ರೈತರೂ ಕೂಡ ಇದ್ದಾರೆ. ಅಂತಹವರನ್ನು ನೋಡಿಕೊಂಡು ಬೇರೆಯವರೂ ಕೂಡ ಹಾಳಾಗತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈಗ ನಿಮ್ಮಲ್ಲಿಯೇ ಯಾರಾದರೂ ಕಬ್ಬು ಬೆಳೆದರೆ ಕಬ್ಬೇ ಬೆಳೆದುಬಿಡುತ್ತಾರೆ. ಒಂದು ವರ್ಷ ಕಬ್ಬು ಜಾಸ್ತಿಯಾಗಿ ಮಹಾರಾಷ್ಟ್ರದವರು ತೆಗೆದುಕೊಳ್ಳಲಿಲ್ಲ ಅವರು ಗೇಟ್ ಹಾಕಿಬಿಟ್ಟರು. ಈ ವರ್ಷ ಕಬ್ಬು ಇಲ್ಲ. ಅದಕೋಸ್ಕರವೇ ಕ್ರಾಪಿಂಗ್ ಪ್ಯಾಟ್ರನ್ ಅನ್ನು ಸರ್ಕಾರದವತಿಯಿಂದ ನಿಗದಿ ಮಾಡುತ್ತಾರೆ, ಆ ನಿಗದಿಯಂತೆ ಅವರು ಬೆಳೆಯತಕ್ಕಂಥ ಕೆಲಸ ಮಾಡಿದಾಗ ಮಾತ್ರ ರೈತರಿಗೂ ಕೂಡ ಒಳ್ಳೆಯ ಬೆಲೆ ಬರುತ್ತದೆ. ನಮ್ಮಲ್ಲಿ ಉತ್ಪಾದನೆ ಮತ್ತು ಬೇಡಿಕೆ ಏನಿದೆ ಅದು ಒಂದು ಸರಿಸಮನಾಗಿ ಹೋದಾಗ ಮಾತ್ರ ನಾವು ಒಂದು ನಿರೀಕ್ಷಿತ ಬೆಲೆ ದೊರಕಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ರೈತರು ಈ ರೀತಿಯ ಒಂದು ಆಧುನಿಕ ಯುಗದಲ್ಲಿ ಅವರೂ ಕೂಡ ತಮ್ಮ ಮನೋಪ್ರವೃತ್ತಿಯನ್ನು ಬದಲಾಯಿಸಿಕೊಂಡು ಬೆಳೆಗಳನ್ನು ಬೆಳೆಯತಕ್ಕಂಥಾದ್ದು, ಕಡಿಮೆ ಇನ್‌ವೆಸ್ಟ್‌ಮೆಂಟ್‌ನಲ್ಲಿ ಅಂದರೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಬರತಕ್ಕಂಥ ರೀತಿಯಲ್ಲಿ ಅವರು ತಮ್ಮ ಬೆಳೆಗಳನ್ನು ಬೆಳೆಯಬೇಕಾಗುತ್ತದೆ. ನಾವು ಒಂದು 5 ಸಾವಿರ ರೂಪಾಯಿ ಖರ್ಚು ಮಾಡಿ ನಾಲ್ಕೂವರೆ ಸಾವಿರ ರೂಪಾಯಿ ಬೆಲೆ ಬರುವಂತಹ ಫಸಲು ಬೆಳೆಯುವುದಾದರೆ ಏಕೆ ಬೇಸಾಯ ಮಾಡಬೇಕು ಎನ್ನತಕ್ಕಂಥಾದ್ದು, ಆದ್ದರಿಂದ ಅವರು ಒಂದು ತಮ್ಮ ಬೆಳೆಗಳನ್ನು ಬೆಳೆಯತಕ್ಕಂಥ ಸಂದರ್ಭದಲ್ಲಿ ಅವರೂ ಕೂಡ ಒಂದು ಆಧುನಿಕ ತಂತ್ರಜ್ಞಾನವನ್ನು ಇಟ್ಟುಕೊಂಡು ಒಳ್ಳೆಯ ತಳಿಗಳನ್ನು ಉಪಯೋಗ ಮಾಡಿ, ಹೆಚ್ಚು ಲಾಭವಾಗತಕ್ಕಂಥ ಬೆಳೆಗಳನ್ನು ಬೆಳೆಯತಕ್ಕಂಥಾದ್ದು ಬಹಳ ಮುಖ್ಯ ಅದರ ಜೊತೆಯಲ್ಲಿ ಏನೋ ಅಲ್ಲಿ ಇಲ್ಲಿ ಕೆಲವು ಸಲ ಬೆಂಬಲ ಬೆಲೆ ಅವಶ್ಯಕತೆ ಬಿದ್ದು, ಅವನು ಬೆಳೆದಂತಹ ಬೆಳೆಗೆ ನಷ್ಟವಾದರೆ ಆಗ ಅವರಿಗೆ ಬೆಂಬಲ ಬೆಲೆಯನ್ನು ಸರ್ಕಾರ ಕೊಡತಕ್ಕಂಥಾದ್ದು ಈಗಾಗಲೇ ಅಂತ ಒಂದು ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಿದೆ. ಏನು ಈ ಬೆಂಬಲ ಬೆಲೆಗೋಸ್ಕರ ಸುಮಾರು 160 ಕೋಟಿ ಇದ್ದಂತಾದ್ದನ್ನು ಈ ವರ್ಷ 200 ಕೋಟಿ ರೂಗೂ ಹೆಚ್ಚಿಸತಕ್ಕಂಥಾದ್ದೂ ಕೂಡ ಪ್ರಸ್ತಾವನೆಯಲ್ಲಿ ಹೇಳಿದೆ. ಇದರಿಂದ ರೈತರಿಗೆ ಬೆಂಬಲ ಬೆಲೆ ಕೊಡತಕ್ಕಂಥಾದ್ದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದ ಮೈಂಡ್‌ಸೆಟ್ ನಾವು ರೈತರಿಗೋಸ್ಕರ ಇದ್ದೇವೆ, ರೈತರ ಪರವಾಗಿ ನಾವು ಕೆಲಸ ಮಾಡುತ್ತೇವೆ. ಆದರೆ ರೈತರು ಏನಾದರೂ ದುಸ್ಥಿತಿಗೆ ಬಂದಂತಹ ಕಾಲದಲ್ಲಿ ರೈತರ ಪರವಾಗಿ ನಾವು ಅವರ ಕಷ್ಟಕ್ಕೆ ನಿಲ್ಲುತ್ತೇವೆ ಎನ್ನತಕ್ಕಂಥಾದ್ದನ್ನು ತೋರಿಸಲಿಕ್ಕೆ ಒಂದು ಇದು. ಅದೇ ರೀತಿ ಮಾನ್ಯ ಅಧ್ಯಕ್ಷರೆ ಈಗ ಸಹಕಾರ ಸಂಘಗಳಲ್ಲೂ ಕೂಡ ಬಡ್ಡಿಯನ್ನು 6 ಪರ್ಸೆಂಟ್ ಕೊಡತಕ್ಕಂಥಾದ್ದು. ಬಡವರಿಗೆ 3 ರೂಪಾಯಿಗೆ ಕೆ.ಜಿ.ಅಕ್ಕಿ ಕೊಡತಕ್ಕಂಥಾದ್ದು.

ಯಾರೂ ಮಾಡಿರಲಿಲ್ಲ. ಹಿಂದೆ ಕರುಣಾನಿಧಿ ಅವರ ಕಾಲದಲ್ಲಿ ಎಂ.ಜಿ.ಆರ್ ಕಾಲದಲ್ಲಿ ತಮಿಳುನಾಡಿನಲ್ಲಿ ಮಾಡುತ್ತಾರೆಂದು ಹೇಳುತ್ತಿದ್ದರು ಮತ್ತು ಎನ್.ಟಿ.ಆರ್. ಆಂಧ್ರಪ್ರದೇಶದಲ್ಲಿ ಮಾಡುತ್ತಿದ್ದರು ಅಂತ ಹೇಳುತ್ತಿದ್ದರು. ಅವರು ಬಹಳಷ್ಟು ದಿವಸ ನಡೆಸಲು ಆಗಲಿಲ್ಲ, ಆದರೆ ನಾವು ಪರಿಣಾಮಕಾರಿಯಾಗಿ ಮೂರು ರೂಪಾಯಿಗೆ ಕೆ.ಜಿ.ಅಕ್ಕಿಯನ್ನು ಕೊಟ್ಟು ಗ್ರಾಮೀಣ ಭಾಗದಲ್ಲಿರುವ ಕೂಲಿ ಕಾರ್ಮಿಕರಿಗೆ ಸಹಾಯ ಮಾಡುವ ಉದ್ದೇಶವಿದೆ. ಅದೇ ರೀತಿಯಾಗಿ ರೈತಾಪಿ ಜನರಿಗೂ ಕೂಡ, ಅವರ ಆರ್ಥಿಕ ಸಬಲತೆಯನ್ನು ಬೆಳೆಸಿಕೊಳ್ಳುವುದಕ್ಕೆ ಆರು ಪರ್ಸೆಂಟ್ ಬಡ್ಡಿದರದಲ್ಲಿ ಸಾಲ ಕೊಡುವ ನೀತಿ ಈಗಾಗಲೇ ಸರ್ಕಾರದ ವತಿಯಿಂದ ಜಾರಿಯಾಗಿದೆ ಅದಕ್ಕೆ ಈಗಾಗಲೇ ಹಣವನ್ನೂ ಕೂಡ ಬಿಡುಗಡೆ ಮಾಡಲಾಗಿದೆ. ಯಾವ ಕಾಲದಲ್ಲೂ ಕೂಡ ಜಾರಿಯಾಗುವುದಕ್ಕಿಂತ ಮೊದಲೇ ಹಣ ಬಿಡುಗಡೆ ಮಾಡುವುದು ನನಗೆ ಗೊತ್ತಾಗಲಿಲ್ಲ ಹಿಂದೆ 127 ಕೋಟಿ ರೂಪಾಯಿ ಬಡ್ಡಿಯನ್ನು ಕೂಡ ಮನ್ನಾ ಮಾಡಿದ್ದೇವೆ, ಆ ಹಣ ಬರುವುದಕ್ಕೆ ಎಷ್ಟು ಸಮಯ ತೆಗೆದುಕೊಂಡಿದೆ ಏನಾಗಿದೆ ಎಂಬುದನ್ನು ಇಲ್ಲಿ ವಿವರಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರದ ನೀತಿಗನುಗುಣವಾಗಿ ಆರು ಪರ್ಸೆಂಟ್ ಬಡ್ಡಿದರದಲ್ಲಿ ಸಾಲವನ್ನು ಕೊಡುವ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ 15 ಕೋಟಿ ರೂಗೂ ಹೆಚ್ಚು ಹಣವನ್ನು ಬಿಡುಗಡೆ ಮಾಡಿದೆ. ಅದರ ಜೊತೆಗೆ ಸರ್ಕಾರದ ಸಾಧನೆಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಕೂಡ ಬರೆದಿಲ್ಲ, ಅದನ್ನು ಹೇಳಲಿಕ್ಕೆ ಏನು ಬಯಸುತ್ತೇನೆ. ಎಕ್ಸೈಸ್‌ನಲ್ಲಿ ವರಮಾನ ಬರುತ್ತಿತ್ತು, ಈ ಸಾರಿ ಸುಮಾರು 500 ಕೋಟಿ ರೂಪಾಯಿ ಗಳಿಗೂ ಹೆಚ್ಚಾಗಿದೆ. 64 ಪರ್ಸೆಂಟ್ ಗ್ರೋತ್ ಬರೀ ಎಕ್ಸೈಸ್‌ನಲ್ಲಿ ಬಂದಿದೆ ಇದೂ ಕೂಡ ಸರ್ಕಾರದ ಸಾಧನೆಯೆ. ಆದರೆ ಅದೇನು ಅದನ್ನು ಇದರಲ್ಲಿ ಬರೆದಿಲ್ಲ, ಇಂತಹ ಒಳ್ಳೆಯ ಪಾಯಿಂಟ್ಸನ್ನೂ ಇದರಲ್ಲಿ ಬರೆಯಬೇಕು. ಸೇಲ್ಸ್ ಟ್ಯಾಕ್ಸ್‌ನಲ್ಲೂ ಕೂಡ 29–30 ಪರ್ಸೆಮಟ್ ಜಾಸ್ತಿಯಾಗಿದೆ. ಆದರೆ ಎಕ್ಸೈಸ್‌ನಲ್ಲಿ 500 ಕೋಟಿ ರೂಪಾಯಿಗಳು ಅಂದರೆ 65 ಪರ್ಸೆಂಟ್ ಗ್ರೋತನ್ನು ಸಾಧಿಸಲಾಗಿದೆ ಈ ಒಂದು ಎಕ್ಸೈಸ್ ಲಾಬಿಗೆ ಸರ್ಕಾರ ಮಣಿಯುತ್ತದೆಂದು ವಿರೋಧಪಕ್ಷದವರು ಏನೇ ಭಾಷಣ ಮಾಡಿದರೂ ಕೂಡ, ಆವೊಂದು ಎಕ್ಸೈಸ್‌ಲಾಬಿಗೆ ಸುಮಾರು 500 ಕೋಟಿರೂಗೂ ಹೆಚ್ಚು ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ತಂದಿರುವುದೂ ಕೂಡ ಸರ್ಕಾರದ ಒಂದು ಸಾಧನೆ. ಇಂತಹ ಸಾಧನೆಯನ್ನು ಎಲ್ಲರು ಕೂಡ ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರು ಪತ್ರಿಕೆ ಓದುತ್ತಿದ್ದಾರೆ, ಅವರು ಇಂತಹ ಒಳ್ಳೆಯ ಮಾತನ್ನು ಕೇಳುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು, ನಾವು ಮಾತನಾಡಿದರೆ ಕರಡಿಬಿಟ್ಟಂತೆ ಎನ್ನುತ್ತೀರಿ, ಇನ್ನು ಕೋತಿ ಬಿಟ್ಟಂತೆ ಎಂದು ಏತಕ್ಕೆ ಅನ್ನಿಸಿಕೊಳ್ಳಬೇಕೆಂದು ಸುಮ್ಮನೆ ಕುಳಿತಿದ್ದೇವೆ. ನಮ್ಮನ್ನು ಕೆಣಕುತ್ತೀರಿ. ಮಾನ್ಯ ರಾಜಣ್ಣರವರ ಬಗ್ಗೆ ಗೌರವಕೊಟ್ಟು ಸರ್ಕಾರದಲ್ಲಿ ಕೇಳುವವರು ಯಾರೂ ಇಲ್ಲವೆಂದು ಕೇಳಿದರೆ ಕರಡಿಬಿಟ್ಟಂತೆ ಎಂದರೆ ನಾವು ಮಾತನಾಡುವುದಿಲ್ಲ, ಸುಮ್ಮನೆ ಕುಳಿತುಕೊಳ್ಳುತ್ತೇವೆ, ನಾವೇನು ಮಾಡುವುದು?

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಬಹಳ ತಪ್ಪಾಗಿರತಕ್ಕಂಥ ಕೆಲವು ಗಾದೆ ಮಾತುಗಳಿದ್ದಾವೆ, ಅದನ್ನು ಸರಿಪಡಿಸಬೇಕು, ಶಿವಪೂಜೆಯಲ್ಲಿ ಕರಡಿಬಿಟ್ಟಂತೆ ಅಲ್ಲ, ಶಿವಪೂಜೆಯಲ್ಲಿ ಕರಡಿಗೆ ಬಿಟ್ಟಂತೆ ಅಂದರೆ, ಕರಡಿಗೆ ಎಂದರೆ ಲಿಂಗ ಇಟ್ಟುಕೊಳ್ಳುವ ಕರಡಿಗೆ ಬಿಟ್ಟು ಪೂಜೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್: ನಾನು ಅರ್ಥವೇನೆಂದು ಹೇಳುವುದಕ್ಕೆ ಹೋಗಲಿಲ್ಲ, ಅವರಿಗೆ ಹೇಳಿದರೇನು ಪ್ರಯೋಜನ?

ಶ್ರೀ ಕ್ಯಾತಸಂದ್ರ.ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಹಳ್ಳಿಯಲ್ಲಿ ಕೆಲವು ಸಾರಿ ಜಾಣಮರೆವು ಎಂದು ಇರುತ್ತದೆ. ಕಿವುಡರಿರುತ್ತಾರೆ ಕೆಲವರಿಗೆ ಜಾಣ ಕಿವುಡು ಎನ್ನುತ್ತಾರೆ ಕೆಲವು ಸಾರಿ ಅವರಿಗೆ ಬೇಕಾಗಿರುವುದನ್ನು ಕೇಳಿಸಿಕೊಳ್ಳುತ್ತಾರೆ, ಅವರಿಗೆ ಬೇಕಿಲ್ಲದೆ ಇರುವುದನ್ನು ಹೇಳಿದರೆ, ನಮಗೆ ಕೇಳಿಸಲಿಲ್ಲವೆಂದು ಹೇಳುತ್ತಾರೆ. ಅದೇ ರೀತಿ ಒಂದೇ ವರ್ಷದಲ್ಲಿ ಸರ್ಕಾರಕ್ಕೆ 500 ಕೋಟಿ ರೂಪಾಯಿಗಳ ಹೆಚ್ಚಿನ ಆದಾಯ ಬರುವಂತೆ ಮಾಡುವುದೇನೂ ಸಾಮಾನ್ಯವಾದ ಕೆಲಸವೇನಲ್ಲ ಸರ್ಕಾರದ ಅದೊಂದು ಸಾಧನೆಯೇ ಅಂತಹ ಒಳ್ಳೆಯ ಮಾತನ್ನು ಹೇಳಿದಾಗ ಪೇಪರ್ ಓದುತ್ತಿರುವುದು ಅಥವಾ ಬೇರೆ ಕಡೆ ಮಾತನಾಡುವುದು. ಅದೇ ಯಾವುದೋ ಟೀಕೆ , ವೈಪಲ್ಯತೆ ಬಗ್ಗೆ ಮಾತನಾಡುವುದಾದರೆ ಅದಕ್ಕೆ ಆಗಲೇ ಧ್ವನಿಗೂಡಿಸುತ್ತಾರೆ. ಅದಿರಲಿ, ಅದನ್ನು ಹೆಚ್ಚು ಅವಲಂಬಿಸುವುದು ಬೇಡ, ಹೀಗಾಗಿ ಈ ಒಂದು ರೈತರ ಅಭಿವೃದ್ಧಿಯ ಬಗ್ಗೆ ಕಡಿಮೆ ಬಡ್ಡಿದರದಲ್ಲಿ ಸಾಲಸೌಲಭ್ಯವನ್ನು ಕೊಡುವುದನ್ನು ಪ್ರಸ್ತಾಪ ಮಾಡಿದೆ ಆದರೆ ಈ ರೈತರಲ್ಲೂ ಕೂಡ ಅವರ ಅಭಿವೃದ್ಧಿಗೆ ಅವರ ಸಹಕಾರ ಯಾವ ರೀತಿ ಬೇಕಾಗುತ್ತದೆ ಎನ್ನುವ ವಿಚಾರ, ನಮ್ಮ ರಾಷ್ಟ್ರದಲ್ಲಿನ ಒಂದು ರೀತಿಯ ವಿಪರ್ಯಾಸವೆಂದರೆ, ನೀವು ಯಾವುದೇ ಒಂದು ವಸ್ತುವನ್ನು ಕೊಂಡುಕೊಳ್ಳುವುದಕ್ಕೆ ಹೋದರೂ ಕೂಡ, ಆ ವಸ್ತುವಿನ ಬೆಲೆಯನ್ನು ಯಾರು ಉತ್ಪಾದನೆ ಮಾಡುತ್ತಾನೆ ಅವನು ನಿಗದಿಮಾಡುತ್ತಾನೆ. ಆದರೆ ರೈತ ಮಾತ್ರ ಎಷ್ಟೇ ದೊಡ್ಡ ರೈತನಾಗಿರಲಿ, ಅವನು ಎಷ್ಟೇ ದೊಡ್ಡ ಗೌರವ ಅಂತಸ್ತು ಸಂಪಾದನೆ ಮಾಡಿದರೂ ಕೂಡ ಅವನು ಉತ್ಪಾದನೆ ಮಾಡಿದ ವಸ್ತುವಿನ ಬೆಲೆ ನಿಗದಿ ಮಾಡುವವರು ಕೊಂಡುಕೊಳ್ಳುವವರು. ಇದೊಂದು ನಮ್ಮ ರಾಷ್ಟ್ರದಲ್ಲಿರುವ ವಿಪರ್ಯಾಸವೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಒಂದು ಹಿನ್ನೆಲೆಯಲ್ಲಿ ರೈತ ತನ್ನ ಫಸಲಿಗೆ ತಾನೇ ಬೆಲೆಯನ್ನು ನಿಗದಿಮಾಡುವ ವಾತಾವರಣವನ್ನು ಸೃಷ್ಟಿ ಮಾಡಬೇಕಾದರೆ ಆತನಲ್ಲಿ ಆರ್ಥಿಕ ಸಬಲತೆ ಬಂದಾಗ ಮಾತ್ರ ಸಾಧ್ಯ. ಅವನು ಸಾಲ ಕೂಪದಲ್ಲಿದ್ದು, ನಾವು ಹಳ್ಳಿಗಾಡಿನ ಜೀವನವನ್ನು ವಿವರಣೆ ಮಾಡಲು ಹೊರಟರೆ, ಯಾರಾದರೂ ಭತ್ತ, ರಾಗಿ,ಕಡಲೆಕಾಯಿಯನ್ನು ಮಾರಲು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ, ಅವನು ಮಾರಾಟ ಮಾಡಲು ಹೋಗುತ್ತಿದ್ದಂತೆ ತೆಗೆದುಕೊಂಡು ಹಾಕುತ್ತಿದ್ದಂತೆ ಅವನ ಹತ್ತಿರ ದುಡ್ಡು ಪಡೆದುಕೊಳ್ಳುತ್ತಾರೆ, ಅದಕ್ಕಿಂತ ಮುಂಚೆ ಚೀಲ ತರುವುದಕ್ಕೂ ಕೂಡ ಅವನ ಹತ್ತಿರವೇ ಹಣವನ್ನು ಪಡೆದುಕೊಂಡಿರುತ್ತಾರೆ. ರೈತ ಆ ಒಂದು ಹಿಡಿತದಲ್ಲಿ ಸಿಕ್ಕಿರುವುದರಿಂದ, ತೆಗೆದುಕೊಂಡು ಹೋದ ರೈತ ಮಾರುಕಟ್ಟೆಯಲ್ಲಿ ಎಷ್ಟು ಬೆಲೆಗಾದರೂ ಕೇಳಿದರಷ್ಟೇ ಕೊಟ್ಟೆ ಬರಬೇಕಾಗುತ್ತದೆಯೇ ಹೊರತು ಬೇರೆ ದಾರಿಯೇ ಇಲ್ಲ. ಇವತ್ತು ಬೆಲೆ ಕಡಿಮೆಯಾಗಿದೆ ನಾನು ಮಾರಾಟ ಮಾಡುವುದಿಲ್ಲ ಎಂದು ಹೇಳುವಂತಹ ಪರಿಸ್ಥಿತಿ ಇವತ್ತು ರೈತನಿಗಿಲ್ಲ. ಆದುದರಿಂದ ನಾವು ಸಹಕಾರ ಸಂಘಗಳಲ್ಲಿ ಇರಬಹುದು, ಬೇರೆ ಸಂಘ ಸಂಸ್ಥೆಗಳಲ್ಲೂ ಕೂಡ, ಏನು ಪ್ರೊಡ್ಯೂಸ್ ಲೋನ್ ಸ್ಕೀಂ ಎನ್ನುವುದಿದೆ, ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದರ ಮೂಲಕ ರೈತರಿಗೆ ಡಿಸ್ಟ್ರೆಸ್ ಸೇಲ್ ಮಾಡುವುದಕ್ಕೆ ಅಲ್ಪ ಸ್ವಲ್ಪ ಸಹಾಯ ಮಾಡಿ, ಅವರಿಗೆ ಆ ಒಂದು ಸಂದರ್ಭದಲ್ಲಿ ಸಹಾಯವಾಗುವಂತೆ

ಪ್ರೊಡ್ಯೂಸ್ ಲೋನ್ ಅನ್ನು ಎಪಿಎಂಸಿಯಲ್ಲಿ ಕೊಡುವ ವ್ಯವಸ್ಥೆ ಇದೆ ಅದನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದರಿಂದ ರೈತರಿಗೆ ಸಹಾಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ಅಪೆಕ್ಸ್ ಬ್ಯಾಂಕ್‌ಗೆ ಅಧ್ಯಕ್ಷರೂ ಕೂಡ ಆಗಿದ್ದಾರೆ, ಇಲ್ಲಿ ಅವರು ಆರು ಪರ್ಸೆಂಟ್ ಸಾಲದ ಬಡ್ಡಿ ವಿಷಯವನ್ನು ಅವರು ಪ್ರಸ್ತಾಪ ಮಾಡಿದರು. ಅವರೂ ಕೂಡ ಆ ಸ್ಥಾನದಲ್ಲಿ ಕುಳಿತಿದ್ದಾರೆ, ಹಳೆಯ ಸಾಲವನ್ನು ತೀರಿಸಲು ರೈತನಿಗೆ ಅವಕಾಶ ಮಾಡದೆ ಹೋದರೆ, ಆ ಸಾಲದ ಬಡ್ಡಿಯನ್ನು ಮನ್ನಾ ಮಾಡದೇ ಹೋದರೆ, ನೀವು ಕೊಡುವ ಆರು ಪರ್ಸೆಂಟ್ ಸಾಲ ಕೂಡ ಶ್ರೀಮಂತ ರೈತನಿಗೆ, ಉದ್ದಿಮೆದಾರನಿಗೆ ಸಿಗುತ್ತದೆಯೇ ಹೊರತು, ರೈತನಿಗೆ ಸಿಗುವುದಿಲ್ಲ. ಏಕೆಂದರೆ ಅವನ ಪಹಣಿ ಖಾತೆ ಎಲ್ಲವನ್ನೂ ಯಾರಿಗೋ ಒತ್ತೆ ಇಟ್ಟಿರುತ್ತಾನೆ, ಸಾಲ ತೀರಿಸುವುದಕ್ಕೆ ನೀವು ಏನೂ ವ್ಯವಸ್ಥೆ ಮಾಡದೆ, ಆರು ಪರ್ಸೆಂಟ್‌ಗೆ ಸಾಲ ಕೊಟ್ಟೆವು, ಆ ಪರ್ಸೆಂಟ್‌ಗೆ ಸಾಲ ಕೊಟ್ಟೆವು ಎಂದು ಭಾಷಣ ಮಾಡುತ್ತಾ ಹೋದರೆ, ಯಾರಾದರೂ ಹೊಸದಾಗಿ ಸಾಲವನ್ನು ನೀವು ರಿನ್ಯೂ ಮಾಡದೆ ಹೋದರೆ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನೀವು ಬಡ್ಡಿಯನ್ನು ನಿಲ್ಲಿಸದೆ ಹೋದರೆ ಯಾರೂ ಬಂದು ಕಟ್ಟುವುದಿಲ್ಲ. ಎರಡನೆಯದಾಗಿ, ಈಗ ಅಸಲಿನಷ್ಟೇ ಬಡ್ಡಿ ಆದವರಿಗೆ ಮುಂದಿನ ಸಾಲವನ್ನು ವಜಾ ಮಾಡುತ್ತೇವೆಂದಿರಿ. ಇವತ್ತು ರಿಜಿಸ್ಟ್ರಾರ್ ಸರ್ಕ್ಯುಲರ್ ಕೊಡಬೇಕಾದರೆ ಎಷ್ಟು ಸಲ ತಿರುಚಿಕೊಟ್ಟಿದ್ದಾರೆ, ಆದರಿಂದ ಯಾರಿಗಾದರೂ ಪ್ರಯೋಜನವಾಗಿದೆಯೇ ಎಂಬುದರ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಬೇಕು ಸ್ವಾಮಿ. He is heading an Institution. - ಈ ರಾಜ್ಯದ ಅಫೆಕ್ಸ್ ಬ್ಯಾಂಕ್‌ನ ಅಧ್ಯಕ್ಷರು ರಾಜಣ್ಣನವರು ಇಡೀ ವಿಎಸ್‌ಎಸ್‌ಎನ್ ಸಂಸ್ಥೆಗೆ ಸಾಲ ಕೊಡಿಸುತ್ತಿರುವ ಅಧ್ಯಕ್ಷರು, ಯಾವುದಾದರೂ ಸಹಕಾರ ಸಂಘಗಳಲ್ಲಿ ಇವತ್ತು ನಾವು ಸಾಲ ತೆಗೆದುಕೊಳ್ಳುವುದಕ್ಕಾಗುತ್ತಿದೆಯೇ? ನೀವೇನು ಆರು ಪರ್ಸೆಂಟ್ ಎಂದು ಘೋಷಣೆಯನ್ನು ಮಾಡಿದ್ದೀರಿ ನಾವೆಲ್ಲ ಸುಸ್ತಿಯಾದ ಮೇಲೆ ಡಿಫಾಲ್ಟರ್ ಆದ ಮೇಲೆ ಘೋಷಣೆ ಮಾಡಿದ್ದೀರಿ, ಅದನ್ನು ತೀರಿಸಿ ಹೊಸದಾಗಿ ಲೋನ್ ಅಪ್ಲಿಕೇಶನ್ ಕೊಡುವುದಕ್ಕೆ ಒಂದು ಸ್ಕೀಂ ಕೊಡಬೇಕಲ್ಲಾ ಸ್ವಾಮಿ, ಆ ಬಗ್ಗೆ ಸ್ವಲ್ಪ ಬೆಳಕನ್ನು ಚೆಲ್ಲಬೇಕು.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಮಾನ್ಯ ಮಾಧುಸ್ವಾಮಿಯವರೂ ಕೂಡ ಹಿರಿಯ ಸಹಕಾರಿಗಳೇ ಅವರು ಕೆಎಂಎಫ್ ಅಧ್ಯಕ್ಷರಾಗಿದ್ದರು, ಯೂನಿಯನ್ ಅಧ್ಯಕ್ಷರಾಗಿದ್ದರು. ಆದುದರಿಂದ ಅವರಿಗೂ ಕೂಡ ಸಹಕಾರಿ ರಂಗದಲ್ಲಿರುವ ಒಳ್ಳೆಯದು ಕೆಟ್ಟದು ನನಗಿಂತ ಹೆಚ್ಚು ಅವರಿಗೆಲ್ಲಾ ಗೊತ್ತಿರುತ್ತದೆ, ಏಕೆಂದರೆ ಅವರು ಜಾಸ್ತಿ ಅಧ್ಯಯನ ಮಾಡಿದ್ದಾರೆ. ಆದರೆ ನಾವು ಜಾಸ್ತಿ ಅಧ್ಯಯನ ಮಾಡುವುದಿಲ್ಲ. ನಾವು ಪ್ರಾಕ್ಟಿಕಲ್ ಆಗಿ ಇರುವ ಅಂಶವನ್ನು ಹೇಳತಕ್ಕಂಥವರು. ಅವರೇನು ಆರು ಪರ್ಸೆಂಟ್ ಬಡ್ಡಿ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದು ದಿನಾಂಕ 1.4.2004 ರಿಂದ ಈಚೆಗೆ ಯಾರು ಸಾಲ ತೆಗೆದುಕೊಳ್ಳುತ್ತಾರೆ ಅವರಿಗೆ ಅನ್ವಯವಾಗುತ್ತದೆಂದು ಸರ್ಕಾರಿ ಆದೇಶವಿರುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಶ್ರೀನಿವಾಸಗೌಡರು ಈಗ ಹೇಳಬೇಕು. ಮಾನ್ಯ ರಾಜಣ್ಣನವರು ಹೇಳುವುದು ನಿಜವಾದರೆ, ರೈತರಿಗೇನೂ ಬೆನಿಫಿಟ್ ಇಲ್ಲ, ಮುಂದೆ ಸಾಲ ತೆಗೆದುಕೊಳ್ಳುವವರಿಗೂ ಪ್ರಯೋಜನವಿಲ್ಲ, ಹಿಂದೆ ಸಾಲ ತೆಗೆದುಕೊಂಡವರಿಗೂ ಏನೂ ಪ್ರಯೋಜನವಿಲ್ಲ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ ಒಂದು ಗಾದೆ ಇದೆಯಲ್ಲಾ, ಅಕ್ಕನ ಮಕ್ಕಳು ಬಡವರಾಗಬಾರದು, ಅಕ್ಕಿ ಮುಗಿಯಬಾರದು ಹಾಗೆ ಇತ್ತ ರೈತರ ಪರವಾಗಿ ಮಾತನಾಡಬೇಕು, ರೈತರಿಗೆ ಏನೂ ಉಪಯೋಗಬಾರದು.

ಶ್ರೀ ಕೆ.ಶ್ರೀನಿವಾಸ ಗೌಡ (ಕೃಷಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಎಲ್ಲಾ ಸಹಕಾರ ಸಂಘಗಳು ಈ ಪರಿಸ್ಥಿತಿಯಲ್ಲಿಲ್ಲ, ಅದರಲ್ಲೂ ಕೆಲವು ಮುಖ್ಯವಾಗಿ ಹಳೆಯ ಮೈಸೂರು ಭಾಗದಲ್ಲಿ ಸಹಕಾರ ಸಂಘಗಳ ಪರಿಸ್ಥಿತಿ ಈ ರೀತಿ ಇದೆ. ಇವತ್ತು ನಾರ್ತ್ ಕೆನರಾದಲ್ಲಿ ನೂರಕ್ಕೆ ನೂರು ಭಾಗ ರಿಕವರಿಯಾಗಿದೆ, ಸೌತ್ ಕೆನರಾದಲ್ಲಾಗಿದೆ, ಬೆಳಗಾಂನಲ್ಲಾಗಿದೆ, ಕೂರ್ಗ್‌ನಲ್ಲಾಗಿದೆ. ಏತಕ್ಕೆ ಹೇಳುತ್ತೇನೆಂದರೆ, ನಾವೆಲ್ಲರೂ ಈ ಭಾಗದಿಂದ ಬಂದಿರುವುದರಿಂದ ಅದನ್ನೇ ಯೋಚನೆ ಮಾಡುತ್ತೇವೆ. ಇದಕ್ಕೆ ನಾಳೆ ಆಯವ್ಯಯದಲ್ಲಿ ಕೂಡ ನಮ್ಮ ಉಪಮುಖ್ಯಮಂತ್ರಿಗಳು ಈಗಾಗಲೇ ಆ ವಿಚಾರವಾಗಿ ಹೇಳಿದ್ದಾರೆ. ಅವರು ಹೇಳಿದ ಮೇಲೆ ಮತ್ತೆ ನಾನು ಹೇಳುವುದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ಸಹಕಾರ ಸಂಘಗಳಿಗೆ ಸ್ವಲ್ಪ ಉತ್ತೇಜನ ಕೊಡುವುದಕ್ಕೆ, ಕೇಂದ್ರ ಸರ್ಕಾರದವರೂ ಕೂಡ ಮುಂದೆ ಬಂದಿದ್ದಾರೆ, ಆ ದಿಕ್ಕಿನಲ್ಲಿ ಎಲ್ಲಾ ಸರಿಹೋಗುತ್ತದೆ ಅಲ್ಲಿಯವರೆಗೆ ಸ್ವಲ್ಪ ಸುಧಾರಿಸಿಕೊಳ್ಳಿ, ಎಲ್ಲಾ ಸಹಕಾರ ಸಂಘಗಳ ಮೂಲಕ ಆರು ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಡುವ ಪರಿಸ್ಥಿತಿಗೆ ಬರುತ್ತೇವೆ.

ಅಧ್ಯಕ್ಷರು : ಇದರ ಬಗ್ಗೆಯೇ ಪ್ರತಿಯೊಬ್ಬರೂ ವಾಖ್ಯಾನ ಮಾಡುತ್ತಾ ಹೋದರೆ, ಎಲ್ಲರು ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ, ಮಾನ್ಯ ರಾಜಣ್ಣನವರೆ, ಬೇಗ ಮುಗಿಸಬೇಕು .

ಶ್ರೀ ಕೆ.ಪ್ರಭಾಕರ್ ಬಂಗೇರ : ಸನ್ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಪಾವತಿ ಮಾಡಿರುವ ರೈತರು ಹೊಸ ಸಾಲವನ್ನು ಪಡೆದಿದ್ದಾರೆ ಇವರು, ದಿನಾಂಕ 1.4.04 ನಂತರ ಸಾಲ ತೆಗೆದುಕೊಂಡವರಿಗೆ ಮಾತ್ರ ಶೇಕಡ 6ರ ಬಡ್ಡಿಯಲ್ಲಿ ಸಾಲವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಮೊದಲು ಕಟ್ಟಿದವರಿಗೆ ಏನು? 30ನೇ ತಾರೀಖಿನ ಒಳಗಾಗಿ ಕಟ್ಟಿದವರಿಗೆ ನಿಜವಾದ ಪ್ರಾಮಾಣಿಕವಾದ ರೈತರುಗಳು ಅದನ್ನು ಕಟ್ಟಿದ್ದಾರೆ. ಮತ್ತು ಅದರ ಮೊದಲೇ ಅವರು ಸಾಲವನ್ನು ತೆಗೆದಿದ್ದಾರೆ. ಮಾರ್ಚ್ ಒಳಗೆ ತೆಗೆದಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ನೀವು ಡಿಫಾಲ್ಟರ್ ಆದರೆ ಮಾತ್ರ ನಿಮಗೆ ಲಾಭ ಡಿಫಾಲ್ಟರ್ ಆಗದಿದ್ದರೆ ಏನೂ ಲಾಭ ಇಲ್ಲ.

ಶ್ರೀ ಕೆ. ಪ್ರಭಾಕರ ಬಂಗೇರ : ಪ್ರಾಮಾಣಿಕವಾಗಿ ಕಟ್ಟಿದ ರೈತನಿಗೆ ಇಲ್ಲವೆಂದಾಗುತ್ತದೆ. ಅದಕ್ಕೆ ಸರ್ಕಾರ ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ : ಮಾನ್ಯ ಸಚಿವರು ಹೇಳಿದ ಅಂಕಿಸಂಖ್ಯೆ ಸತ್ಯಕ್ಕೆ ದೂರವಾದುದು. ನಾನು ಹೇಳುತ್ತೇನೆ, ನೀವು ನಮ್ಮ ಜಿಲ್ಲೆಯಲ್ಲಿ ನೂರಕ್ಕೆ ನೂರು ವಸೂಲಿಯಾಗಿದೆ ಎಂದು ಹೇಳುತ್ತೀರಿ. ಅದು ಆಗಿಲ್ಲ. ನಮ್ಮ ಹತ್ತಿರ ಈಗಲೂ ಬರುತ್ತಿದ್ದಾರೆ. ನಮ್ಮ ಜಪ್ತಿಗೆ ಬರುತ್ತಿದ್ದಾರೆ, ಅದಕ್ಕಾಗಿ ಬ್ಯಾಂಕಿಗೆ ಒಂದು ಫೋನ್ ಮಾಡಿ ಎಂದು ಬರುತ್ತಾರೆ. ದಯವಿಟ್ಟು ನಮ್ಮನ್ನು ಉಳಿಸಿ ಎಂದು ಹೇಳಿಕೊಂಡು ಜನರು ಬರುತ್ತಿದ್ದಾರೆ. ನೂರಕ್ಕೆ ನೂರು ಸಾಲ ವಸೂಲಿಯಾಗಿಲ್ಲ.

ಅಧ್ಯಕ್ಷರು : ಮಾನ್ಯ ರಾಜಣ್ಣನವರು ಮಾತನಾಡಿ.

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಬಂಗೇರ ಅವರು ನಮ್ಮ ಹಳೆಯ ಸ್ನೇಹಿತರು. ಅವರು ಕೇಳಿದಾಗ ನಾನು ಈಲ್ಡ್ ಆಗದಿದ್ದರೆ ತಪ್ಪಾಗುತ್ತದೆ. ಏಕೆಂದರೆ ಅವರು ನಮ್ಮ ಹಳೆಯ ವಿಶ್ವಾಸದ ಸ್ನೇಹಿತರು. ಈ ಆರು ಪರ್‌ಸೆಂಟ್ ಬಡ್ಡಿ ದಿನಾಂಕ 1–4–2004 ರ ಹಿಂದೆ ತೀರಿಸಿದವರಗಲ್ಲ. 1–4–2004 ರ ನಂತರ ಯಾರು ಸಾಲವನ್ನು ತೆಗೆದುಕೊಳ್ಳುತ್ತಾರೋ ಅವರಿಗೆ, ಅವರು ಹಿಂದೆ ತೀರಿಸಿದವರೇನು ಎಂದು ಕೇಳಿದರಲ್ಲಾ. ಅದಕ್ಕೋಸ್ಕರ ಹೇಳಿದೆ. ಈಗ ಅದರ ಬಗ್ಗೆ ಏನಾದರೂ ಗೊಂದಲಗಳಿದ್ದಾವೆ ಕೆಲವು ಎಂದು ನಿಮ್ಮ ಅನಿಸಿಕೆಯಾದರೆ ಆ ಒಂದು ಗೊಂದಲಗಳನ್ನು ನಿವಾರಣೆ ಮಾಡತಕ್ಕದ್ದು ಮತ್ತೆ ರೈತರಿಗೆ ಸಹಾಯವಾಗುವ ನಿಟ್ಟಿನಲ್ಲಿ ಸರ್ಕಾರ ಚಿಂತನೆಯನ್ನು ಮಾಡಬೇಕೆನ್ನುವ ನಿಮ್ಮ ಸಲಹೆ ಏನು ಇದೆ, ಅದನ್ನು ನಾನೂ ಕೂಡ ಒಪ್ಪುತ್ತೇನೆ. ಏಕೆಂದರೆ ಮಾನ್ಯ ಶ್ರೀನಿವಾಸಗೌಡರು ಕೂಡ ಅವರು ಹಿರಿಯ ಸಹಕಾರಿಗಳೇ. ಅವರಿಗೂ ಕೂಡ ಇದೆಲ್ಲಾ ಗೊತ್ತಿದೆ. ಮಾನ್ಯ ಶ್ರೀನಿವಾಸಗೌಡರ ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಕೂಡ ಈ ರೀತಿ ರೈತರು ಸಾಲವನ್ನು ತೆಗೆದುಕೊಂಡವರು ಸರಿಯಾಗಿ ಕಟ್ಟದೇ ಇವತ್ತು ಆ ಬ್ಯಾಂಕ್ ಕೂಡ ದುಸ್ಥಿತಿಗೆ ಬಂದಿರತಕ್ಕಂಥದ್ದು ಆಗುತ್ತಿದೆ. ಯಾರು ಅವರು ಸಾಲವನ್ನು ತೆಗೆದುಕೊಳ್ಳುತ್ತಾರೆ, ತೆಗೆದುಕೊಂಡವರು ಕಟ್ಟುವುದಕ್ಕೆ ಶಕ್ತಿ ಇಲ್ಲದಿದ್ದರೆ ಸರಿ. ಶಕ್ತಿವಂತರೇ ಕಟ್ಟುವುದಿಲ್ಲ. ಈ ಬಡವರು ಭಯಬಿದ್ದು ಎರಡು–ಮೂರು ಸಾವಿರ ರೂಪಾಯಿಗಳೇನಾದರೂ ಇದ್ದರೆ ಏಕಪ್ಪ ಬೇಕು, ನಾಳೆ ಬೆಳಿಗ್ಗೆ ಜಪ್ತಿಗಿಪ್ತಿ ಮಾಡುತ್ತಾರೆಂದು ಹೇಳಿ ಕಟ್ಟುತ್ತಾರೆ. ಚಿಕ್ಕಮಗಳೂರಿನಲ್ಲಿ ಧರ್ಮೇಗೌಡರೇ ಅಧ್ಯಕ್ಷರು. ಮೂಡಿಗೆರೆ ಒಂದರಲ್ಲೇ ಸುಮಾರು ಮೂವತ್ತು ಜನರು ನಲವತ್ತು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಆ ಮೂಡಿಗೆರೆ ತಾಲ್ಲೂಕಿನವರು ಕಟ್ಟಿದರೆ ಸಾಕು. ಆ ಬ್ಯಾಂಕ್ viable ಆಗುತ್ತದೆ. ಇಂಥ ಎಲ್ಲಾ ಪರಿಸ್ಥಿತಿಗಳು ಕೆಲವು ಕಡೆ ಇವೆ. ನಾವು ಕಾಫಿ ಗ್ರೋಯರ್ಸ್ ಬಗ್ಗೆ ಚಿಂತನೆಯನ್ನು ಮಾಡಬೇಕಾ? ರಾಗಿ ಬೆಳೆಯುವ ಬಗ್ಗೆ ಚಿಂತನೆಯನ್ನು ಮಾಡಬೇಕಾ ಎನ್ನುವ ಒಂದು ಪ್ರೈಯಾರಿಟಿಯನ್ನು ಕೂಡ ನಾವು ಸಾರಿ ಇಟ್ಟುಕೊಳ್ಳಬೇಕಾಗುತ್ತದೆ. ಕಾಫಿ ಬೆಳೆಗಾರರಿಗೆ ಸಹಾಯ ಮಾಡಬಾರದು ಎಂದು ಇಟ್ಟುಕೊಳ್ಳಬಾರದು. ರಾಗಿ ಬೆಳೆಯುವವರಿಗೆ ಮೊದಲು ಸಹಾಯ ಮಾಡಿ. ಆಮೇಲೆ ಕಾಫಿ ಬೆಳೆಯುವವರಿಗೆ, ಮಾಡಿ ಎಂದು ನಮ್ಮ ವಾದ. ಅವರವರ ಸಮಸ್ಯೆ ಅವರವರಿಗೆ ದೊಡ್ಡದು ಇರುತ್ತದೆ. ಚಿಕ್ಕ ಮನುಷ್ಯನಿಗೆ ಚಿಕ್ಕ ಸಮಸ್ಯೆ ಆ ಸಮಸ್ಯೆ ಅದೇ ಬೆಟ್ಟ. ನಿಮ್ಮಗಳಿಗೆ ನಿಮ್ಮದೇ ದೊಡ್ಡ ಸಮಸ್ಯೆಗಳು. ಅವರವರಿಗೆ ಅವರವರ ಮಟ್ಟಕ್ಕೆ ಅವರದೇ ಸಮಸ್ಯೆಗಳು. ಆದ್ದರಿಂದ ಸಮಸ್ಯೆಗಳನ್ನು ಬಗೆಹರಿಸಬೇಕೆಂದೇ ಸರ್ಕಾರ ಪ್ರಯತ್ನವನ್ನು ಮಾಡುವುದಕ್ಕೆ ಹೊರಟಿದೆ ಎಂದು ನಾನು ಹೇಳಿದ್ದೇನೆಯೇ ಹೊರತು ಈ ಸಮಸ್ಯೆಗಳು ಏನಿವೆ ಎನ್ನತಕ್ಕಂಥದ್ದು ಮತ್ತು ಆ ಸಮಸ್ಯೆಗಳಿಗೆ ಯಾರು ಕಾರಣಕರ್ತರು, ಇದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುತ್ತಿಲ್ಲ. ' ನನ್ನ ಸರ್ಕಾರವು ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ ಹಿಂದುಳಿದ ವರ್ಗದ ಜನರನ್ನು, ಅಲ್ಪಸಂಖ್ಯಾತರನ್ನು ಮುಖ್ಯವಾಹಿನಿಗೆ ತರಲು ಅವರ ಕಲ್ಯಾಣಕ್ಕಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ ' ಎಂದು ಹೇಳಿದ್ದಾರೆ. ಗಂಗಾಕಲ್ಯಾಣದಲ್ಲಿ ಸುಮಾರು 6500 ಕೊಳವೆ ಬಾವಿಗಳನ್ನು ಹಿಂದಿನಿಂದಲು ಕೊರೆಸಿ ಎನರ್ಜೈಸ್ ಆಗದೇ ಇರುವುದನ್ನು ಈಗ ಎನರ್ಜೈಸ್ ಮಾಡುವುದಕ್ಕೆ ಹೊರಟಿದ್ದೇವೆ. ಇದು ಸರ್ಕಾರದ ಸಾಧನೆಯಲ್ಲವೇ? ನಾವು ಆಗತಕ್ಕ ಒಳ್ಳೆಯ ಕೆಲಸಗಳನ್ನು

ನಾವು ಹೇಳದಿದ್ದರೆ ಅವರಿಗೆ ಇನ್ನೂ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಹುಮ್ಮಸ್ಸು ಬರುವುದಿಲ್ಲ, ಉತ್ತೇಜನ ಬರುವುದಿಲ್ಲ. ಏನಪ್ಪ ಇವರು, ಏನು ಮಾಡಿದರೂ ನಮ್ಮನ್ನು ಟೀಕೆ ಮಾಡುತ್ತಿರುತ್ತಾರೆ. ಏನೂ ಮಾಡುವುದು ಬೇಡ, ಹೀಗೆಯೇ ಇರೋಣ ಬಿಡು ಎಂದರೆ ಏನು ಮಾಡುವುದಕ್ಕಾಗುತ್ತದೆ? ಮಾಡತಕ್ಕ ಕೆಲಸಕ್ಕೆ ನಾವು ಅವರಿಗೆ ಒಂದು ಒಳ್ಳೆಯ ಮಾತನ್ನು ಹೇಳಿದರೆ ಇನ್ನೂ ಹೆಚ್ಚು ಶಕ್ತಿವಂತರಾಗಿ ಅಥವಾ ಇನ್ನೂ ಹೆಚ್ಚು ಉತ್ಸಾಹದಿಂದ ಇನ್ನು ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಅವರ ಜೊತೆಯಲ್ಲಿ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುವುದು ಎಂದರೆ 2001 ನೇ ಇಸವಿಯಿಂದಲು ಕೆಲವು ಹರಿಜನರು ಗಿರಿಜನರು, ಮತ್ತೆ ಪ್ರವರ್ಗ-1, ನಮ್ಮ ಹೊಳಲ್ಕೆರೆ ಎಂಎಲ್‌ಎ ಉಮಾಪತಿಯವರು ಇದ್ದಾರೆ. ಅದರಲ್ಲಿ ಕೆಲವು ಜನರಿಗೆ ಏನು ಫೀ ಸಬ್‌ಸಿಡೈಸ್ ಮಾಡುತ್ತಾರೆ, ಆ ಹಣ ಇನ್ನೂ ಕೂಡ ಬಿಡುಗಡೆಯಾಗಿಲ್ಲ ಎಂದು. ಅದರ ಬಗ್ಗೆ ಕೂಡ ಸರ್ಕಾರ ಈಗಾಗಲೇ ಕಾರ್ಯೋನ್ಮುಖರಾಗಿ ಆ ಹಣವನ್ನು ಬಿಡುಗಡೆ ಮಾಡತಕ್ಕಂಥದ್ದು, ಆ ವಿದ್ಯಾರ್ಥಿಗಳ ಅನುಕೂಲಕ್ಕೆ ಸಹಾಯವನ್ನು ಮಾಡತಕ್ಕದ್ಧು ಆ ನಿಟ್ಟಿನಲ್ಲಿ ಈಗಾಗಲೇ ಯೋಚನೆಯನ್ನು ಮಾಡಿರತಕ್ಕದ್ದು ಕೂಡ ಸರ್ಕಾರ ಅಭಿನಂದನೆಗೆ ಅರ್ಹವಾದ ಕೆಲಸವನ್ನು ಮಾಡಿದೆ ಎನ್ನುವ ವಿಷಯವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಗಂಗಾಕಲ್ಯಾಣದಲ್ಲಿ ಏನಾಗಿದೆ ಎಂದರೆ ಯಾವುದೋ ಕಾಲದಲ್ಲಿ ಒಂದು ಯೂನಿಟ್ ಕಾಸ್ಟ್‌ನ್ನು ಫಿಕ್ಸ್ ಮಾಡಿರುವುದು ಅರವತ್ತೈದು ಸಾವಿರ. ಈಗ ಬೋರ್‌ವೆಲ್‌ಗಳನ್ನು ಕೊರೆದರೆ 500-600-700 ಅಡಿವರೆಗೂ ಹೊರಟುಹೋಗುತ್ತವೆ. ಯಾರೋ 250-300 ಅಡಿ ಆವ್ರೇಜ್‌ನ್ನು ಇಟ್ಟುಕೊಂಡು ಇವರು ಯೂನಿಟ್ ಕಾಸ್ಟ್‌ನ್ನು ಫಿಕ್ಸ್ ಮಾಡಿದ್ದಾರೆ. ಆ ಯೂನಿಟ್ ಕಾಸ್ಟ್‌ನ್ನು ಎನ್‌ಹ್ಯಾನ್ಸ್ ಮಾಡಬೇಕೆನ್ನುವ ಬೇಡಿಕೆಯೂ ಕೂಡ ನಮ್ಮಲ್ಲಿ ಬಂತು. ನಾವು ಹಳ್ಳಿಗಳಲ್ಲಿ ಪ್ರವಾಸ ಮಾಡತಕ್ಕ ಕಾಲದಲ್ಲಿ ನಮ್ಮ ಗಮನಕ್ಕೆ ಬಂದಿದೆ. ಆ ಯೂನಿಟ್ ಕಾಸ್ಟ್‌ನ್ನು ಜಾಸ್ತಿ ಮಾಡತಕ್ಕ ವಿಷಯದಲ್ಲಿ ಸರ್ಕಾರ ಯೋಚನೆಯನ್ನು ಮಾಡಿ ಅದರ ಬಗ್ಗೆ ಒಂದು ಸಕಾರಾತ್ಮಕ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ. ಜೊತೆಯಲ್ಲಿ ರೆವಿನ್ಯೂ ಇಲಾಖೆಯ ಬಗ್ಗೆ ನಮ್ಮ ಮಂತ್ರಿಗಳಾದ ಪ್ರಕಾಶ್‌ರವರು ಇರುವುದರಿಂದ ಅದರ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ರೆವಿನ್ಯೂ ಇನ್ನೂ ಹಳೆಯ ಕಾಲದಲ್ಲಿಯೇ ಇದೆ. ಸಬ್ ರಿಜಿಸ್ಟ್ರಾರ್ ಆಫೀಸ್‌ಗಳಿಗೆ ಹೊರಟುಹೋದರೆ 1100 ಕೋಟಿ ರೂ.ಗಳಿಗಿಂತ ಹೆಚ್ಚು ಆದಾಯವನ್ನು ತಂದುಕೊಡತಕ್ಕ ಇಲಾಖೆ. ಆ ರೀತಿ ರೆವಿನ್ಯೂ ಹೆಚ್ಚಿದೆ. ಮತ್ತೆ ರೆವಿನ್ಯೂನಲ್ಲೂ ಕೂಡ ಗಣಕೀಕರಣ ಮಾಡತಕ್ಕದ್ದು, ಅವರ ಡಾಕ್ಯುಮೆಂಟನ್ನು ಅರ್ಧ ಗಂಟೆಯೊಳಗೆ ಕೊಡತಕ್ಕದ್ದು. ಇದು ಸರ್ಕಾರದ ಸಾಧನೆಯೇ ಸರಿ. ಅದಕ್ಕೂ ಕೂಡ ಯಾವುದೇ ಒಂದು ರೀತಿಯ ಯಾವುದೇ ಅಪಸ್ವರವಾಗಲೀ ಯಾವುದೇ ಒಂದು ಸಮಸ್ಯೆಯಾಗಲೀ, ಯಾವ ಭಾಗದಿಂದಲೂ ಕೂಡ ಬಂದಿಲ್ಲ. ಅರ್ಧ ಗಂಟೆಗೆ ಡೀಡ್‌ನ್ನು ಕೊಡುತ್ತಾರೆ. ಮೊದಲು ಒಂದು ಹದಿನೈದು ದಿವಸ ಒಂದು ತಿಂಗಳಾದರೂ ಕೊಡುತ್ತಿರಲಿಲ್ಲ. ಇವತ್ತು ರಿಜಿಸ್ಟರ್ ಮಾಡಿಸಿ ಅಲ್ಲಿಯೇ ಇದ್ದರೆ ಅರ್ಧ ಗಂಟೆಗೆ ಡೀಡನ್ನು ನಿಮ್ಮ ಕಡೆಗೆ ಕೊಡುತ್ತಾರೆ. ಅಂಥ ಒಂದು ಉತ್ತಮವಾದ ಕೆಲಸವನ್ನು ಕೂಡ ಸರ್ಕಾರ ಮಾಡಿರತಕ್ಕಂಥದ್ದು. ಅದರ ಜೊತೆಯಲ್ಲಿ ಮಾನ್ಯ ಪ್ರಕಾಶ್‌ರವರೇ, ಆ ಬಿಲ್ಡಿಂಗ್‌ಗಳನ್ನು ನೋಡಬೇಕು. ಏನು ಅಷ್ಟೊಂದು ರೆವಿನ್ಯೂವನ್ನು ತಂದುಕೊಡುತ್ತದೆ, ಅಂಥ ಕಡೆ ನೀವು ಖರ್ಚು ಮಾಡುವುದಿಲ್ಲ. ಯಾವುದೋ

ಬೇಕಿಲ್ಲದ ಆಫೀಸ್‌ಗಳಲ್ಲಿ ಖರ್ಚು ಮಾಡುವುದು, ಆ ರೀತಿ ಮಾಡುವುದಲ್ಲ. ಅಲ್ಲಿ ಯಾರಾದರೂ ಹೋದರೆ ಬಂದರೆ ಕುಳೀತುಕೊಳ್ಳುವುದಕ್ಕೆ ನಿಂತುಕೊಳ್ಳುವುದಕ್ಕೆ ಆದರೂ ಕೂಡ ಜಾಗ ಇರುವುದರಲ್ಲಿ ಚೆನ್ನಾಗಿರುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಲಿಕ್ಕೆ ನೀವೊಂದು ಪ್ರಯತ್ನವನ್ನು ಮಾಡಬೇಕು. ಅದರ ಜೊತೆಯಲ್ಲಿ ಪಹಣಿ ಕಾಪಿಗಳನ್ನು ಕೊಡತಕ್ಕದ್ದು ಬಹಳ ಕಡಿಮೆ ದುಡ್ಡಿನಲ್ಲಿ ಕೊಡುತ್ತಿದ್ದೇವೆ. ಮೊದಲು ಐದು ರೂಪಾಯಿ, ಅವನು ಯಾರೋ ಸೆಕ್ರೆಟರಿಗೆ ಕೊಟ್ಟು ಊರಲ್ಲಿ ತೆಗೆದುಕೊಳ್ಳುತಿದ್ದ. ಅವರು ಅದನ್ನು ಇಲ್ಲಿ ತೆಗೆದುಕೊಳ್ಳುವುದಕ್ಕೆ 50 ರೂಪಾಯಿಗಳನ್ನು ಖರ್ಚು ಮಾಡಬೇಕು. ಅದು ಇರಲಿ. ಆದರೆ ಅವರಿಗೊಂದು ಒಳ್ಳೆಯ ದಾಖಲೆ ಸಿಗುತ್ತೆ. ಕಡಿಮೆ ಸಮಯದಲ್ಲಿ ಸಿಗುತ್ತೆ ಎನ್ನುವ ಸಮಾಧಾನ ಇದೆ.

ಅಧ್ಯಕ್ಷರು : ಮಾನ್ಯ ರಾಜಣ್ಣನವರೆ, ನೀವು ಈಗ ಒಂದು ಗಂಟೆ ಹತ್ತು ನಿಮಿಷ ತೆಗೆದುಕೊಂಡಿದ್ದೀರಿ. ಬಹಳ ಜನರು ಮಾತನಾಡಬೇಕು. ದಯಮಾಡಿ ಬೇಗ ಮುಗಿಸಿ.

ಶ್ರೀ ಕೆ.ಎನ್.ರಾಜಣ್ಣ : ಬೇಡ ಎಂದರೆ ಕುಳಿತುಬಿಡುತ್ತೇನೆ ಬಿಡಿ ಹೋಗಲಿ.

ಅಧ್ಯಕ್ಷರು : ನಾನು ಬೇಡ ಎಂದು ಹೇಳುತ್ತಿದ್ದೇನೆಯೇ?

ಶ್ರೀ ಕೆ.ಎನ್.ರಾಜಣ್ಣ : ಅಲ್ಲ. ಇದೇನಾಗುತ್ತದೆ ಎಂದರೆ ಹಳ್ಳಿಗಳಲ್ಲಿ ಏನು ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದೇನೆ. ನೀವೂ ಕೂಡ ಹಳ್ಳಿಯಿಂದ ಬಂದಿದ್ದೀರಿ. ನೀವು ನಮ್ಮ ರಕ್ಷಣೆಗೆ ಬರುತ್ತೀರಿ ಎಂದು ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ ಆ ಪಹಣಿಯಲ್ಲಿ ಏನಾಗುತ್ತದೆ ಎಂದರ ಏನಾದರೂ ಇವರು ರೈತನ ತಪ್ಪಿಲ್ಲದೆ ಅಧಿಕಾರಿಗಳ ತಪ್ಪಿನಿಂದ ಏನಾದರೂ ಒಂದು ರಾಂಗ್ ಎಂಟ್ರಿ ಹೋದರೆ ಅದನ್ನು ಕರೆಕ್ಷನ್ ಮಾಡಿಸುವುದಕ್ಕೆ ಸುಮಾರು 150 ರೂಪಾಯಿಗಳನ್ನು ಅವನು ಕಟ್ಟಬೇಕಾಗುತ್ತದೆ. ಏನಾದರೂ ಅಧಿಕಾರಿ ಮಟ್ಟದಿಂದ ಒಂದು ಎಂಟ್ರಿ ತಪ್ಪಿ ಹೋದರೆ ಅದನ್ನು ಕರೆಕ್ಷನ್ ಮಾಡಿಸಿಕೊಳ್ಳುವುದಕ್ಕೆ ರೈತ 100–150 ರೂಪಾಯಿಗಳನ್ನು ಕಟ್ಟಬೇಕು. ಅದನ್ನು ತಾವು ಸರಿಪಡಿಸುವ ವ್ಯವಸ್ಥೆಯನ್ನು ಮಾಡಬೇಕು. ರೈತರೇ ತಪ್ಪು ಮಾಹಿತಿ ಕೊಟ್ಟು ಆ ತಪ್ಪು ಮಾಹಿತಿಯಿಂದ ಪಹಣಿಯಲ್ಲಿ ಎಂಟ್ರೀಸ್ ಬಂದಿದ್ದರೆ ಅವನನ್ನು ಫೈನಲೈಜ್ ಮಾಡಿ. ಪಾಪ ಅವನನ್ನು ವಿನಾಕಾರಣ ನಿಮ್ಮ ಅಧಿಕಾರಿಗಳು ಮಾಡಿದ ತಪ್ಪಿಗೆ ಏಕೆ ಫೈನಲೈಜ್ ಮಾಡುತ್ತೀರಿ? ಅವರು ಬೇಕೆಂತಲೇ ತಪ್ಪು ಮಾಡಿರುತ್ತಾರೆ. ಅದನ್ನು ಸರಿಪಡಿಸತಕ್ಕದ್ದು ಆಗಬೇಕು. ರೈತರಿಗೆ ಅಂಥ ಸಂದರ್ಭದಲ್ಲಿ ಅವರೇನು ಹಣವನ್ನು ತುಂಬಬೇಕಾಗುತ್ತದೆ ಕರೆಕ್ಷನ್ ಮಾಡಲಿಕ್ಕೆ, ಅದನ್ನು ವಿನಾಯಿತಿ ಕೊಡುವ ಬಗ್ಗೆ ತಾವು ಹೇಳಬೇಕು.

ಶ್ರೀ ಸಿ.ಎಸ್.ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ರೈತನಿಗೆ ಅವನು ಆ ಶಿಕ್ಷೆಯನ್ನು ತೆಗೆದುಕೊಳ್ಳುತ್ತಾನೆ. ಅಧಿಕಾರಿಗೆ ಏನೂ ಶಿಕ್ಷೆಯಾಗುವುದಿಲ್ಲ. ದಯಮಾಡಿ ಇದು ಮಾರ್ಪಾಡು ಆಗಬೇಕು. ಏಕೆಂದರೆ ಯಾವನೋ ಬೇಕು ಎಂದು ಪುಟ್ಟೇಗೌಡನ ಪಹಣಿಯನ್ನು ತಿಮ್ಮೇಗೌಡನಿಗೆ ಬರೆಯುವುದು. ತಿಮ್ಮೇಗೌಡನ ಪಹಣಿಯನ್ನು ಇನ್ನೊಬ್ಬರಿಗೆ ಬರೆಯುವುದು. ಆ ಅಧಿಕಾರಿಗೆ ಏನೂ ಶಿಕ್ಷೆಯಾಗುವುದಿಲ್ಲ. ರೈತ ಮಾತ್ರ ಅವನು ಮಾಡಿದ ಮಿಸ್ಟೇಕ್‌ಗೆ ಇವನು ಸಫರ್‌ಪಡುತ್ತಾನೆ ಇವನು ತನ್ನ ಯಾವುದೋ ಅರ್ಧ ಎಕರೆ, ಒಂದು ಎಕರೆ ಆಸ್ತಿ ಇದ್ದರೆ ಅವನಿಗೆ ವಿಧಾನಸೌಧ.

ನಮಗೆ ವಿಧಾನಸೌಧ ಎಷ್ಟು ದೊಡ್ಡದೋ ಆ ರೈತನಿಗೆ ಅದು ಅವನಿಗೆ ಅಷ್ಟು ದೊಡ್ಡದು. ನಾವು ಆ ಅಧಿಕಾರಿಗೆ ಏನೂ ಮಾಡುವುದಿಲ್ಲ. ಅವನು ಪ್ರಮೋಷನನ್ನು ತೆಗೆದುಕೊಂಡು ನಮ್ಮನ್ನು ಹಿಡಿದು ಲೆಟರ್ ತೆಗೆದುಕೊಂಡು ಇಲ್ಲೇ ಹತ್ತಿರಕ್ಕೆ ಹಾಕಿಕೊಡಿ ಕಾಸು ಬರುವ ಕಡೆಗೆ ಹಾಕಿಕೊಡಿ ಸ್ವಾಮಿ ಎಂದು ಹೇಳುತ್ತಾನೆ. ನೀವು ಇದಕ್ಕೇನು ಮಾಡಬೇಕೆಂದರೆ ಯಾವನು ಅಧಿಕಾರಿ ತಪ್ಪು ರೆಕಾರ್ಡ್ ಮಾಡುತ್ತಾನೆ, ಅವನನ್ನು ಆ ಘಳಿಗೆಯಿಂದಲೇ ಯಾವನಾದರೂ ರೈತ ಅವನ ಮೇಲೆ ಕೇಸ್ ಹಾಕುವುದಕ್ಕೆ ಅವನಿಗೆ ಅವಕಾಶ ಇರಬೇಕು. ಇದು ರೆವಿನ್ಯೂ ಇಲಾಖೆಯಲ್ಲಿ ಬಹಳ ಮಾರ್ಪಾಡಾಗಬೇಕು. ದಯಮಾಡಿ ಇದನ್ನು ಮಾರ್ಪಾಡು ಮಾಡಿಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು : ಈಗ ಎಲ್ಲಾ ಮಧ್ಯೆ ಮಧ್ಯೆ ಈ ರೀತಿ ನಿಂತುಕೊಂಡು ಸಲಹೆ ಕೊಡುವುದು ಮಾಡಿದರೆ ಹೇಗೆ? ಏನೆಂದರೆ ನಾವು ನಿಯಮಾವಳಿಗಳ ಪ್ರಕಾರ ಹೋಗೋಣ. ನಿಮಗೆಲ್ಲರಿಗೂ ಅವಕಾಶ ಸಿಗುತ್ತದೆ. ಈ ರೀತಿಯಾದರೆ ಅವಕಾಶ ಸಿಗುವುದಿಲ್ಲ. ಕೆಲವೇ ಜನ ಮಾತನಾಡುತ್ತೀರಿ. ಹಿಂದಿನ ಬೆಂಚ್‌ನವರು ಗಲಾಟೆ ಮಾಡಿಕೊಂಡು ಹೋಗುತ್ತಾರೆ. ಅಷ್ಟೇ ಪ್ರಯೋಜನ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆಯಲ್ಲಿ ಸಾಮಾನ್ಯವಾಗಿ ಮಧ್ಯೆ ಅವರು ಇವರು ಮಾತನಾಡುವುದು ಸಂಪ್ರದಾಯ. ಒಂದೇ ಸಮನೆ ಹೇಳಿಕೊಂಡು ಹೋದರೆ ಚರ್ಚೆಗೆ ಮೆರುಗು ಇರುವುದಿಲ್ಲ.

ಅಧ್ಯಕ್ಷರು : ಮಾನ್ಯ ನಾಗರಾಜ್ ಅವರೇ, ಸಂಪ್ರದಾಯವನ್ನು ನಾನು ಒಪ್ಪುತ್ತೇನೆ. ಎಷ್ಟು ಇರಬೇಕೋ ಅಷ್ಟು ಇರಬೇಕು. ಆದರೆ ಎಲ್ಲರೂ ನಿಂತುಕೊಂಡು ಅವರವರಿಗೆ ಹೊಳೆದದ್ದನ್ನು ಹೇಳುತ್ತಾ ಹೋದರೆ ಹೇಗೆ ಆಗುತ್ತದೆ?

ಶ್ರೀ ವಾಟಾಳ್ ನಾಗರಾಜ್ : ಚರ್ಚೆಗೆ ಮೆರುಗು ಬರತಕ್ಕದ್ದು ಆಗಲೇ.

ಅಧ್ಯಕ್ಷರು : ಮೆರುಗು ಸರಿ. ಆದರೆ ಮೆರುಗಿನಿಂದ ಹಿಂದಿನವರಿಗೆ ಯಾರಿಗೂ ಅವಕಾಶ ಇರುವುದಿಲ್ಲ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಕ್ಕೆ ನಾನೂ ಕೂಡ ಸಹಮತ ವ್ಯಕ್ತಪಡಿಸುತ್ತೇನೆ. ಕಾರಣ ಇಷ್ಟೇ. ಮೊನ್ನೆ ನಮ್ಮ ರಾಯಚೂರು ಜಿಲ್ಲೆಗೆ ಮಾನ್ಯ ಕಂದಾಯ ಸಚಿವರು ಬಂದಂತಹ ಸಂದರ್ಭದಲ್ಲಿ ಈ ವಿಷಯವನ್ನು ನಾನೂ ಕೂಡ ಪ್ರಸ್ತಾಪ ಮಾಡಿದ್ದೆ. ಏನಾಗಿದೆ ಅಂದರೆ ಕೆಲವು ಹಳ್ಳಿಗಳಲ್ಲಿ ಈ ಗಣಕೀಕರಣ ಬಂದ ಮೇಲೆ, ಏನಾಗಿದೆ ಎಂದರೆ ಈ ಒಂದು ಊರನ್ನು ಒಂದಕ್ಷರದಲ್ಲಿಯೇ ಬದಲಾವಣೆ ಮಾಡಿ, ಒಬ್ಬನ ಹೆಸರನ್ನು ದುರ್ಗಪ್ಪ ಎನ್ನುವುದನ್ನು ದುರ್ಗವ್ವ ಎಂದು ಮಾಡುತ್ತಾರೆ. ಮಾಡಿ ಮರಗಪ್ಪ, ಎನ್ನುವುದನ್ನು ಮರಿಗೆಪ್ಪ ಎಂದು ಮಾಡಿ ಮರಗಪ್ಪ, ಮರಿಗೆಪ್ಪನಿಗೆ ಜಗಳ ಹಚ್ಚಿರತಕ್ಕಂಥದ್ದು. ದುರ್ಗಪ್ಪ, ದುರ್ಗವ್ವನಿಗೆ ಜಗಳ ಹಚ್ಚಿರತಕ್ಕಂಥದ್ದು ನಾನು ನೋಡಿದ್ದೇನೆ. ಈ ಮಾತು ಏಕೆ ತಮ್ಮ ಗಮನಕ್ಕೆ ತರುತ್ತೇನೆ ಎಂದರೆ ನಾನು ಈ ವಿಷಯವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದಾಗ, ಅವರು ಹೇಳುತ್ತಿದ್ದರು. ಈ ವಿಷಯವನ್ನು ತಹಶೀಲ್ದಾರ್ ಅವರು ರೆಕ್ಟಿಫೈ ಮಾಡಬೇಕು ಎಂದು ಹೇಳುತ್ತಿದ್ದರು. ಇದನ್ನು ಯಾವಾಗ ರೆಕ್ಟಿಫೈ ಮಾಡುತ್ತಾರೆ? ಆ

ಊರಿನಲ್ಲಿ ಉದ್ದೇಶಪೂರ್ವಕವಾಗಿ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಜಗಳ ಹಚ್ಚಿರತಕ್ಕದ್ದನ್ನು ಸಹ ನಾವು ನೋಡಿದ್ದೇವೆ. ಏನಾಗಿದೆ ಎಂದರೆ ನಮ್ಮ ಮತಕ್ಷೇತ್ರ ದೇವದುರ್ಗ ತಾಲ್ಲೂಕಿನಲ್ಲಿ ಕೊತದಡ್ಡೆ ಎಂಬತಕ್ಕ ಗ್ರಾಮದಲ್ಲಿ ಒಬ್ಬರ ಹೆಸರನ್ನು ಮತ್ತು ಒಬ್ಬರ ಹೊಲಕ್ಕೆ ಇನ್ನೊಬ್ಬರ ಹೆಸರನ್ನು ನಮೂದಿಸಿದ ಮೇಲೆ, ಸೇರಿಸಿ ಆದ ಮೇಲೆ ಅವರು ಪುನಃ ಒಂದು ವರ್ಷವಾದ ಮೇಲೆ ಆ ಬೆಳೆ ಹಾಕುವುದಕ್ಕೆ ಹೋದರು. ಹೋದಂತಹ ಸಂದರ್ಭದಲ್ಲಿ ಒಂದು ವರ್ಷ ಬೆಳೆ ಮಾರಿಕೊಳ್ಳುವ ತನಕ ಸುಮ್ಮನೆ ಇದ್ದಾರೆ. ಮರು ವರ್ಷ ಪುನಃ ಇನ್ನೊಂದು ವರ್ಷದಲ್ಲಿ ಅವನು ಬೆಳೆ ಬಿತ್ತುವುದಕ್ಕೆ ಹೋದಾಗ ಅವನು ಇದು ನಿನ್ನದಲ್ಲ ಹೊಲ, ನನ್ನದು ಎಂದು ಹೇಳಿ ಜಗಳ ಆಯಿತು. ಆ ಕಾಗದ ಪತ್ರಗಳನ್ನು ನೋಡಿದರೆ ಹೊಲದವನ ಹೆಸರು ಇರಲಿಲ್ಲ. ಒರಿಜಿನಲ್ ಮಾಲೀಕನ ಹೆಸರನ್ನು ಬಿಟ್ಟು ಯಾರದೋ ಒಬ್ಬರ ಹೆಸರು ಸೇರಿಸಿದ ಮೇಲೆ ಅದು ಕೋರ್ಟಿಗೆ ಹೋಯಿತು. ಕೋರ್ಟಿಗೆ ಹೋದ ಆ ಮನುಷ್ಯ. ಕೋರ್ಟಿಗೆ ಹೋದ ಮೇಲೆ ಕೋರ್ಟಿನಲ್ಲಿ ಏನು ನಿರ್ಣಯ ಆಗುತ್ತದೆ, ಅಲ್ಲಿಯತನಕ ನೀನು ಹೀಗೆಯೇ ಇರು ಅಂದ. ಮತ್ತೆ ಯಾವನು ಮಾಲೀಕ ಅಲ್ಲದವನು ಅವನು ಹೊಲದಲ್ಲಿ ಹೋಗಿ ಕುಳಿತ. ಕುಳಿತುಕೊಂಡು ಬೆಳೆ ಮಾರಿಕೊಂಡು ತಿಂದ. ಆದರೆ ಯಾವನು ಹೊಲ ಕಳೆದುಕೊಂಡ ಅವನಿಗೆ ಲುಕ್ಸಾನು ಆಗುತ್ತದೆ. ಆ ಲುಕ್ಸಾನನ್ನು ಭರಿಸತಕ್ಕವರು ಯಾರು? ಆದ್ದರಿಂದ ರೈತರಿಗೆ ಅನ್ಯಾಯ ಆಗುತ್ತದೆ? ಏನು ರೈತರಿಗೆ ಉದ್ದೇಶ ಪೂರ್ವಕವಾಗಿ ನಮ್ಮ ಅಧಿಕಾರಿಗಳು ತೊಂದರೆ ಕೊಡಬೇಕು ಎನ್ನುವ ಕಾರಣಕ್ಕಾಗಿಯೇ ಮಾಡತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ. ಅವರನ್ನು ಹೊಣೆಗಾರರನ್ನಾಗಿ ಮಾಡಿದಾಗ ಮಾತ್ರ ಸಮಸ್ಯೆಗಳು ಸೆಟ್ ಆಗುತ್ತವೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇವೆ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು ಎನ್ನುವುದೇ ನಮ್ಮ ಅಭಿಪ್ರಾಯ ಸಹ ಆಗಿದೆ. ಮಾನ್ಯ ಕಂದಾಯ ಸಚಿವರು ಇದ್ದಾರೆ. ಅವರು ಅಧಿಕಾರಕ್ಕೆ ಬಂದ ಕೂಡಲೇ ಒಂದು ಒಳ್ಳೆಯ ಕೆಲಸವನ್ನೂ ಕೂಡ ಮಾಡಿದ್ದಾರೆ. ಎಲ್ಲಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಕೆಟ್ಟದು ಯಾವುದೂ ಮಾಡಿಲ್ಲ. ಅದೊಂದೇ ಒಳ್ಳೆಯದು ಮಾಡಿರುವುದು, ಇನ್ನೆಲ್ಲಾ ಕೆಟ್ಟದ್ದು ಮಾಡಿದ್ದಾರಾ ಎಂದು ಇವರು ಕೇಳಬಹುದು. ಆ ತರಹ ಅಲ್ಲ. ಎಲ್ಲಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಈ ಗ್ರಾಮ ಸಹಾಯಕರ ಪರಿಸ್ಥಿತಿಯ ಬಗ್ಗೆ ನಾನು ಮೊದಲಿನಿಂದಲೂ ಕೂಡ ಪದೇ ಪದೇ ಮೇಲ್ಮನೆ ಸದಸ್ಯನಾಗಿದ್ದಾಗಲೂ ಕೂಡ ಪ್ರಸ್ತಾಪ ಮಾಡುತ್ತಿದ್ದೆ. ಈ ಗ್ರಾಮ ಸಹಾಯಕರು ಸುಮಾರು 9500ರಿಂದ 10 ಸಾವಿರದವರೆಗೆ ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು 150 ರೂಪಾಯಿಗೆ ಹಿಂದೆ ಅಂದರೆ 1976ರಲ್ಲಿ ಕೆಲಸಕ್ಕೆ ಸೇರಿದವರು. ಅವರಿಗೆ ಸಂಬಳ ಅಲ್ಲ, ಗೌರವ ಧನನೋ, ಭತ್ಯೆ ಎಂತಲೋ ಕರೆದುಕೊಳ್ಳುತ್ತಾರೆ. ಏನಾದರೂ ಕರೆದುಕೊಳ್ಳಲಿ. ಅವರ ಹೊಟ್ಟೆಪಾಡಿಗೆ ತೆಗೆದುಕೊಳ್ಳತಕ್ಕಂಥ ಹಣ. 150 ರೂಪಾಯಿಗೆ ಮೊದಲು ಕೆಲಸಕ್ಕೆ ಸೇರಿದ್ದಂಥವರು. ಅವರನ್ನು ಖಾಯಂ ಮಾಡಬೇಕೆಂದು ಹೇಳಿ ಮೊದಲಿನಿಂದಲು ಕೂಡ ಅವರೆಲ್ಲಾ ಹೋರಾಟ ಮಾಡುತ್ತಿದ್ದಾರೆ. ಹೋರಾಟ ಮಾಡಿದಂತಹ ಬಹಳ ಜನ ಸತ್ತು ಹೋಗಿ ಬಿಟ್ಟಿದ್ದಾರೆ. ಆದರೆ ಬಿಜೆಪಿಯವರು ಅವರ ಪ್ರಣಾಳಿಕೆಯಲ್ಲಿಯೇ ಸೇರಿಸಿದ್ದರು. ನಮ್ಮ

ಸರ್ಕಾರ ಬಂದರೆ ನಾವೆಲ್ಲಾ ನಿಮಗೆ ಖಾಯಂ ಮಾಡಿ ಬಿಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಸೇರಿಸಿದ್ದರು. ನಮ್ಮ ಡಾ: ವಿ.ಎಸ್.ಆಚಾರ್ಯ ಅವರು ಆ ಪ್ರಣಾಳಿಕೆಯನ್ನು ನನಗೆ ತೋರಿಸಿದರು. ಈ ವರ್ಷದ ಪ್ರಣಾಳಿಕೆಯಲ್ಲಿ ಅದು ಕಾಣಲಿಲ್ಲ. ಅದಕ್ಕೇ ನಿಮಗೆ ಅವರ್ಯಾರೋ ಓಟು ಹಾಕಲಿಲ್ಲ. ಆದ್ದರಿಂದ ಆ 9500 ಚಿಲ್ಲರೆ ಜನ ಏನು ಗ್ರಾಮ ಸಹಾಯಕರು ಇದ್ದಾರೆ ಅವರಿಗೆ ಒಂದು ಸಾವಿರ ಗೌರವ ಧನ ಏರಿಸಿದ್ದರು. ನಮ್ಮ ಕಂದಾಯ ಸಚಿವರು ಬಂದ ಕೂಡಲೇ ತತ್‌ಕ್ಷಣ ಅದನ್ನು ಎರಡು ಸಾವಿರ ರೂಪಾಯಿಗೆ ಮಾಡಿದರು. ನಿಜಕ್ಕೂ ಕೂಡ ಒಳ್ಳೆಯ ನಿರ್ಧಾರ. ಅಲ್ಲಿ ಕೆಲಸ ಮಾಡತಕ್ಕವರು ಹರಿಜನರು, ಗಿರಿಜನರು, ಮತ್ತೆ ಹಿಂದುಳಿದ ವರ್ಗಕ್ಕೆ ಅದರಲ್ಲೂ ತುಳಿತಕ್ಕೆ ಒಳಗಾದಂತಹ ಸಮಾಜದ ಜನರು ಕೆಲಸ ಮಾಡತಕ್ಕಂಥದ್ದು. ಅದು ಶ್ಲಾಘನೀಯವಾದಂಥದ್ದು. ಕೆಲಸ ಮಾಡುವುದು ಶ್ಲಾಘನೀಯವಲ್ಲ. ಸಾವಿರ ರೂಪಾಯಿನಿಂದ ಎರಡು ಸಾವಿರ ರೂಪಾಯಿ ಮಾಡಿದ್ದು ಶ್ಲಾಘನೀಯ. ಆದ್ದರಿಂದ ಅದರ ಜೊತೆಗೆ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಎಂದು ಹೇಳಿದರೆ ಅದರಲ್ಲಿ ಯಾರು ಅರ್ಹರು ಇದ್ದಾರೆ, ಅವರನ್ನು 'ಡಿ' ದರ್ಜೆ ನೌಕರರು ಎಂದು ಖಾಯಂ ಮಾಡುವ ಬಗ್ಗೆ ನೀವು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಮಾನ್ಯ ಕಂದಾಯ ಸಚಿವರಾದ ಪ್ರಕಾಶ್ ಅವರೇ ಒಂದು ಸ್ವಲ್ಪ ಈ ಕಡೆ ಕೇಳಿ. ನಿಮಗೆ ಶಹಭಾಸ್‌ಗಿರಿ ಹೇಳುತ್ತಿದ್ದೇವೆ. ಏನಪ್ಪ ರಾಜಣ್ಣ ಒಂದು ಒಳ್ಳೆಯ ಮಾತಾದರೂ ಹೇಳಿದ್ದಾನೆ ಎಂದು ತಿಳಿದುಕೊಳ್ಳಲಿ ಎಂದು ಹೇಳುತ್ತಿದ್ದೇನೆ. ಸಾವಿರ ರೂಪಾಯಿನಿಂದ ಎರಡು ಸಾವಿರ ರೂಪಾಯಿಗೆ ಗೌರವಧನ ಹೆಚ್ಚಿಸಿರುವುದಕ್ಕೆ ನಿಮಗೆ ಅವರೆಲ್ಲರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) : ವಂದನೆಗಳು.

ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ : ಈಗ ಅವರನ್ನು ನೀವು ಖಾಯಂ ಮಾಡಿ. ಖಾಯಂ ಮಾಡಿ ಅವರನ್ನು 'ಡಿ' ದರ್ಜೆ ನೌಕರರು ಎಂದು ಹೇಳಿ ಮಾಡಬೇಕು. ಅವರೇನು 1976ನೇ ಇಸವಿಯಿಂದ, ದೇವರಾಜ್ ಅರಸ್ ಅವರ ಕಾಲದಿಂದಲೂ ಬೇಡಿಕೆ ಇದೆ, ಅದನ್ನು ತಾವು ಈಡೇರಿಸಿ ಇನ್ನೊಂದು ಪುಣ್ಯವನ್ನು ಕಟ್ಟಿಕೊಳ್ಳತಕ್ಕಂಥದ್ದನ್ನು ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಮಾನ್ಯ ಮಹಿಮಾ ಪಟೇಲ್ ಅವರು ಟೇಬಲ್ ಕುಟ್ಟುತ್ತಿದ್ದಾರೆ. ಅದರಿಂದಲಾದರೂ ನಿಮಗೆ ಇನ್ನೂ ಹೆಚ್ಚಿನ ಶಕ್ತಿ ಬರುತ್ತದೆ ಎಂದು ಹೇಳಿ ಅಂದುಕೊಂಡಿದ್ದೇನೆ. ತಾವು ಅದರ ಬಗ್ಗೆ ಚಿಂತನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಅವರು ಅಭಿನಂದನೆ ಸಲ್ಲಿಸಿದ್ದಕ್ಕೆ ನಾನು ಕೃತಜ್ಞತೆಯನ್ನು ವ್ಯಕ್ತ ಮಾಡುತ್ತೇನೆ. ಆದರೆ ಈ ವಿಚಾರ ಸುಪ್ರೀಂ ಕೋರ್ಟಿನಲ್ಲಿ ಇದೆ. ಸುಪ್ರೀಂ ಕೋರ್ಟ್‌ನಲ್ಲಿ ಈ ನೌಕರರನ್ನು ಖಾಯಂ ಮಾಡಬೇಕು ಎನ್ನತಕ್ಕ ವಿಚಾರದಲ್ಲಿ ಏಕ ಸದಸ್ಯ ಪೀಠದ ಮುಂದೆ ಬಂದಿತ್ತು. ಅದನ್ನು ಮತ್ತೆ ದ್ವಿಸದಸ್ಯ ಪೀಠಕ್ಕೆ ಕಳುಹಿಸಿದರು. ತ್ರಿಸದಸ್ಯ ಪೀಠಕ್ಕೆ ಕಳುಹಿಸಿದರು. ಈಗ ಮೊನ್ನೆ ತಾನೇ ಅದರ ವಿಚಾರಣೆಗೆ ಬಂದಾಗ ಇಲ್ಲ ಇದು ಬೇರೆ ಬೇರೆ ವಿಚಾರಗಳು ಮತ್ತು ಹಣಕಾಸಿನ ಜವಾಬ್ದಾರಿಗಳು ಬರುತ್ತಿರುವುದರಿಂದ ಪಂಚ ಸದಸ್ಯ ಪೀಠದ ಮುಂದೆ ನಿರ್ಧಾರ ಆಗಲಿ ಎಂದು ಹೇಳಿ ಮುಂದಕ್ಕೆ ಹಾಕಿದ್ದಾರೆ. ಸುಪ್ರೀಂ ಕೋರ್ಟಿನ ನಿರ್ಣಯ ಏನು ಬರುತ್ತದೆ ಅದನ್ನು ನೋಡಿಕೊಂಡು ಅದರ ಬಗ್ಗೆ ಸಹಾನುಭೂತಿ ನಮಗೆ ಇದೆ. ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಕಂದಾಯ ಸಚಿವರು ದಯವಿಟ್ಟು ಇದರಲ್ಲಿ ಸಹಾನುಭೂತಿಯಿಂದ ಪರಿಶೀಲನೆ ಮಾಡಬೇಕು. ಏಕೆಂದರೆ 17 ಸಾವಿರ ಜನ ದಿನಗೂಲಿ ನೌಕರರು ಇದ್ದಾರೆ. ಅವರಿಗೆ ಪೂರ್ಣ ಸಂಬಳ ಕೊಡುವುದಾದರೆ ಸುಮಾರು 20 ಸಾವಿರ ಕೋಟಿ ರೂಪಾಯಿಗಳು ಇದುವರೆಗೂ ಬೇಕಾಗುತ್ತಿತ್ತು. ಸಾವಿರ ಸಾವಿರದ ಇನ್ನೂರು ರೂಪಾಯಿ ಕನ್‌ಸಾಲಿಡೇಟೆಡ್ ಪೇಗೆ ನೀವು ದುಡಿಸಿಕೊಳ್ಳುತ್ತಿದ್ದೀರಿ. ಅವರೆಲ್ಲಾ ರಿಟೈರ್ ಆಗುವಂತಹ ಒಂದು ಪರಿಸ್ಥಿತಿಗೆ ಬಂದಿದ್ದಾರೆ. ಆದ್ದರಿಂದ ಯಾವುದೇ ಕೋರ್ಟ್ ಅವರಿಗೆ ಕೊಡಬೇಡಿ ಎಂದು ಹೇಳಿಲ್ಲ. ನೀವು ಸರ್ಕಾರದವರು ಅಪೀಲ್ ಹೋಗಿದ್ದೀರಿ. ಅದರ ಹಿಂದಕ್ಕೆ ಅವರು ಹೋಗುತ್ತಿದ್ದಾರೆ ಪಾಪ. ಅದರಿಂದಾಗಿ ದಯವಿಟ್ಟು ಪರಿಶೀಲನೆ ಮಾಡಿ. ಆ ನೌಕರರನ್ನು ಬಿಟ್ಟರೆ ನಿಮ್ಮ ಇಲಾಖೆಗಳು ನಡೆಯುವುದಿಲ್ಲ. ಅಂತಹ ಆಯಕಟ್ಟಿನ ಜಾಗದಲ್ಲಿ ಅವರುಗಳು ಇದ್ದಾರೆ. ಅದರಿಂದಾಗಿ ಸಹಾನುಭೂತಿಯಿಂದ ಅವರನ್ನೆಲ್ಲಾ ಕನ್‌ಫರ್ಮ್ ಮಾಡಿರಿ.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಸದಸ್ಯರುಗಳ ಅಭಿಪ್ರಾಯ ಒಪ್ಪುತ್ತೇನೆ. ನಾವು ಅನೇಕ ಬಾರಿ ಇಲ್ಲಿ ಚರ್ಚೆ ಮಾಡಿದ್ದೇವೆ. ನಾವು ಅಭಿವೃದ್ಧಿ ಪರವಾದಂತಹ ಕೆಲಸಕಾರ್ಯಗಳಿಗೆ ಎಷ್ಟು ಹಣ ಇಟ್ಟುಕೊಂಡಿದ್ದೇವೆ ಎಂಬ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ಸರ್ಕಾರಿ ನೌಕರರಿಗೆ ಸಂಬಳ, ಮಂತ್ರಿಗಳು, ಶಾಸಕರು ಬೇರೆ ಬೇರೆ ವಿಚಾರದಲ್ಲಿ ಸಂಬಳ. ಅವರಿಗೆ ಬೇಕಾದಂತಹ ಭತ್ಯೆ,ಪಿಂಚಣಿ. ಈ ಎಲ್ಲಾ ಖರ್ಚುಗಳಿಗೆ ಶೇಕಡಾ 60ರಷ್ಟು ಪಾಲು ಹೋಗುತ್ತಿದೆ ಎಂಬುದನ್ನು ತಾವು ನೋಡಿದ್ದೀರಿ. ಇದರ ಜೊತೆಗೆ ನಮ್ಮ ಸಾಲದ ಬಡ್ಡಿಯನ್ನು ಮರು ಪಾವತಿ ಮಾಡತಕ್ಕ ಡೆಟ್ ಸರ್ವೀಸ್‌ಗೆ ಸುಮಾರು 17 ಪರ್ಸೆಂಟ್‌ನಷ್ಟು ಹೋಗುತ್ತಿದೆ. ಈ ಎಲ್ಲಾ ಹಿನ್ನಲೆಯಲ್ಲಿ ನಾವು ಅವರಿಗೆ ಎಷ್ಟೇ ಒಳ್ಳೆಯದನ್ನು ಮಾಡಿ ಅವರನ್ನು ಖಾಯಂ ಮಾಡಿ ಉದ್ಯೋಗ ಕೊಡಬೇಕು ಎನಿಸಿದರೂ ಸಹ ಸರ್ಕಾರಿ ಯಂತ್ರವೇ ಉದ್ಯೋಗ ಕೊಡತಕ್ಕಂಥದ್ದು ಅಲ್ಲ. ಆ ಕಾರಣಕ್ಕಾಗಿಯೇ ಮಾನ್ಯ ಹಾರನಹಳ್ಳಿ ರಾಮಸ್ವಾಮಿ ಅವರ ಆಯೋಗದ ಶಿಫಾರಸ್‌ಗಳನ್ನು ಈ ಸದನವೇ ಒಪ್ಪಿದೆ. ಈ ಹಿನ್ನೆಲೆಯಲ್ಲಿ ತಾವು ಹೇಳಿದಂತಹ ಮಾತು ಎಷ್ಟೇ ಸ್ವಾಗತಾರ್ಹವಾದರೂ ಕೂಡ ಹಣಕಾಸಿನ ಪರಿಸ್ಥಿತಿ ಬಹಳ ದುಸ್ತರವಾಗಿರುವುದರಿಂದ ನ್ಯಾಯಾಲಯದಿಂದ ಏನು ನಿರ್ಣಯ ಬರುತ್ತದೆ ಆನಿರ್ಣಯವನ್ನು ಕಾದು ನೋಡಿ ನಿರ್ಣಯ ತೆಗೆದುಕೊಳ್ಳೋಣ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : 1978ನೇ ಇಸವಿಯಿಂದ ಹಿಂದೆ ಯಾರು ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದರು, ಅವರನ್ನೆಲ್ಲಾ ಖಾಯಂ ಮಾಡಿ ಎಂದು ಹೇಳಿ ಆದೇಶ ಬಂತು. ಆಗ ಅವರನ್ನು ಎಲ್ಲಾ ಖಾಯಂ ಮಾಡಿದೆವು. ಪಿಡಬ್ಲ್ಯೂಡಿಯಲ್ಲಿ, ಬೇರೆ ಬೇರೆ ಇಲಾಖೆಗಳಲ್ಲಿ ಗ್ಯಾಂಗ್‌ಮನ್ ಆಗಿದ್ದಂತವರು, ಇಂಥಿಂಥವರನ್ನೆಲ್ಲಾ ಖಾಯಂ ಮಾಡಲಾಯಿತು. ಏನು ಗ್ರಾಮ ಸಹಾಯಕರು ಎಂದು ಹೇಳಿ 150 ರೂಪಾಯಿಗೆ 1976ನೇ ಇಸವಿಯಿಂದ ದುಡಿಸಿಕೊಳ್ಳುತ್ತಿದ್ದೇವೆ. ಅವರಿಗೆ 300 ರೂಪಾಯಿ ಮಾಡಿದರು. 700 ರೂಪಾಯಿ ಮಾಡಿದರು. 1000ರೂ ಮಾಡಿದರು. ಈಗ ಇವರು ಬಂದ ಮೇಲೆ ಎರಡು ಸಾವಿರ ರೂಪಾಯಿ ಮಾಡಿದ್ದಾರೆ. ಅದಕ್ಕೆ ನಾವು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಆದರೆ ಪ್ರಶ್ನೆ ಏನು ಅಂದರೆ ಸರ್ಕಾರಿ ನೌಕರರಿಗೆ 65 ಪರ್ಸೆಂಟ್ ನಮ್ಮ ಆದಾಯದಲ್ಲಿ ಹೋಗುತ್ತಿದೆ. ನಾವು ಇನ್ನೂ ಹೆಚ್ಚು ಮಾಡಲಿಕ್ಕೆ ಸರ್ಕಾರಕ್ಕೆ ಹೊರೆ ಬೀಳುತ್ತದೆ

ಎಂಬ ಭಾವನೆ ಇದೆ. ಸರ್ಕಾರಕ್ಕೆ ಹೊರೆ ಬೀಳುವುದಾದರೆ ನೀವು ಐದನೇ ವೇತನ ಆಯೋಗ ವನ್ನು ಏಕೆ ಮಾಡುತ್ತೇವೆ ಎಂದು ಹೇಳಿದಿರಿ? ನೀವು ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎಂದು ಮನಸ್ಸಿನಲ್ಲಿ ಇಟ್ಟುಕೊಂಡು ಮಾಡತಕ್ಕದ್ದು ಅಲ್ಲ. ಗ್ರಾಮ ಸಹಾಯಕರು ಏನು ಇದ್ದಾರೆ ಅವರು ಇಲ್ಲದಿದ್ದರೆ ನಿಮ್ಮ ಇಲಾಖೆಯೇ ನಡೆಯುವುದಿಲ್ಲ. ಅಂತಹ ಒಂದು ಜನರು ಇದ್ದಾರೆ. ಅವರು ದಿನದ 24 ಗಂಟೆಯೂ ದುಡಿಯುತ್ತಾರೆ. ಅವರನ್ನು 'ಡಿ' ದರ್ಜೆ ನೌಕರರು ಎಂದು ಮಾಡಬೇಕೆಂಬ ಬಗ್ಗೆ ಬೇಡಿಕೆ ಇದೆ. ಆ ಬೇಡಿಕೆಯನ್ನು ಮಾಡಲು ಆಗುವುದಿಲ್ಲ ಎಂದು ಹೇಳಿ ನೀವು ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಿದ್ದೀರಿ ನೀವು ಮಾಡುತ್ತೇವೆಂದರೆ ಅದು ಮುಗಿದೇ ಹೋಯಿತು. ಅವರ ಅಪೀಲೂ ಇರುವುದಿಲ್ಲ. ಸದಸ್ಯ ಪೀಠಕ್ಕೂ ಹೋಗುವುದಿಲ್ಲ, ಯಾವುದೂ ಹೋಗುವುದಿಲ್ಲ. ಆದ್ದರಿಂದ ಇದರಲ್ಲಿ ವಾದಕ್ಕೋಸ್ಕರ ವಾದ ಮಾಡುತ್ತಿದ್ದೇನೆ ಎಂಬ ಭಾವನೆ ಆಗಬಾರದು. ಈ ವಿಚಾರದಲ್ಲಿ ಸಹಾನುಭೂತಿಯಿಂದ ನೋಡಬೇಕು. ಅವರು ಇಷ್ಟು ವರ್ಷದಿಂದ ಕೆಲಸ ಮಾಡಿದ್ದಾರೆ. ಅವರಿಗೇನಾದರೂ ಒಂದು ನ್ಯಾಯ ದೊರಕಿಸಿ ಕೊಡಬೇಕು ಎನ್ನತಕ್ಕಂಥ ಒಂದು ಉದಾತ್ತವಾದಂತಹ ಗಮನವನ್ನು ಇಟ್ಟುಕೊಂಡು ತಾವು ತೀರ್ಮಾನ ಮಾಡಿ ಎನ್ನತಕ್ಕದ್ದು ನನ್ನ ಬೇಡಿಕೆ ಅಷ್ಟೆ.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗಿರತಕ್ಕದ್ದು ಸರ್ಕಾರ ಅಲ್ಲ. ಅಪೀಲ್ ಹೋಗಿರತಕ್ಕವರು ನೌಕರದಾರರೇ. ಆದ್ದರಿಂದ ಅವರು ನಮ್ಮನ್ನು ಖಾಯಂಗೊಳಿಸಿ ಎಂದು ಹೋಗಿದ್ದಾರೆ. ಮತ್ತೆ ಬೇರೆ ನೌಕರದಾರರನ್ನು ಖಾಯಂ ಮಾಡಿಕೊಳ್ಳತಕ್ಕದ್ದು 1984ನೇ ಇಸವಿಯನ್ನು ಕಟಾಫ್ ಡೇಟ್ ಮಾಡಿ ಮಾನ್ಯ ಶರ್ಮಾ ಅವರು ದಿನಗೂಲಿ ನೌಕರರ ಪರವಾಗಿ ಹೋರಾಟವನ್ನು ಮಾಡಿ ತೆಗೆದುಕೊಂಡು ಬಂದರು. ಆದರೆ, ಉಚ್ಚ ನ್ಯಾಯಾಲಯದ ತೀರ್ಮಾನಗಳು ಇದಕ್ಕೆ ವ್ಯತಿರಿಕ್ತವಾಗಿರುವುದರಿಂದ ಪ್ರಕರಣ ಈಗ ಸುಪ್ರೀಂಕೋರ್ಟ್‌ನಲ್ಲಿದೆ. ನಮಗೆ ಖಂಡಿತವಾಗಿಯೂ ಅವರ ಬಗ್ಗೆ ಸಹಾನುಭೂತಿ ಇದೆ. ಗ್ರಾಮ ಸಹಾಯಕರಲ್ಲಿ ನೂರಕ್ಕೆ ಶೇಕಡ 75–80ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದವರಿದ್ದಾರೆ. ಆ ಕಾರಣಕ್ಕಾಗಿ ಅವರುಗಳನ್ನು ಹೆಚ್ಚು ಸಹಾನುಭೂತಿಯಿಂದ ನೋಡಬೇಕಾದ ಅಗತ್ಯವಿದೆ. ಆದರೆ, ಪ್ರಕರಣ ಸುಪ್ರೀಂಕೋರ್ಟ್‌ಮುಂದಿರು ವುದರಿಂದ ತೀರ್ಮಾನಕ್ಕಾಗಿ ನಾವು ಕಾಯುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಾನು ಕಂದಾಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈಗಾಗಲೇ ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಹೇಳಿರುವಂತೆ ಗ್ರಾಮ ಸಹಾಯಕರಲ್ಲಿ ಬಹಳಷ್ಟು ಜನರು ನಿವೃತ್ತಿಯಾಗುವ ಹಂತಕ್ಕೆ ಬಂದಿದ್ದಾರೆ. ಎಲ್ಲರಿಗೂ ಬಹಳಷ್ಟು ವಯಸ್ಸಾಗಿದ್ದು, ಸುಮಾರು 25–30 ವರ್ಷಗಳಿಂದಲೂ ಗ್ರಾಮ ಸಹಾಯಕರ ಹುದ್ದೆಯಲ್ಲಿ ಜೀತದಾಳುಗಳಂತೆ ದುಡಿದಿದ್ದಾರೆ. ಈ ಹಿನ್ನಲೆಯಲ್ಲಿ ನೀವು ಸುಪ್ರೀಂಕೋರ್ಟಿನ ಮನವೊಲಿಸುವ ಪ್ರಯತ್ನವೇನಾದರೂ ಮಾಡಿದ್ದೀರಾ? ತಮಗೆ ನ್ಯಾಯ ಸಿಗಬೇಕೆಂದು ಕೋರಿ ಅವರೆಲ್ಲರೂ ಸುಪ್ರಿಂಕೋರ್ಟ್ ಮೊರೆ ಹೋಗಿರುವುದು ನಿಜ. ಸುಮಾರು ವರ್ಷಗಳಿಂದ ಗ್ರಾಮ ಸಹಾಯಕರಾಗಿ ದುಡಿದಿರುವವರನ್ನು ಸರ್ಕಾರ ಖಾಯಂಗೊಳಿಸಿದ್ದರೆ ಅವರು ಸುಪ್ರಿಂಕೋರ್ಟಿಗೆ ಹೋಗುವ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಗ್ರಾಮ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವವರು

ನಿವೃತ್ತಿ ಹೊಂದಲು ಇನ್ನು 7-8 ವರ್ಷಗಳಿರುವ ಈ ಸನ್ನಿವೇಶದಲ್ಲಾದರೂ ಸರ್ಕಾರಿ ಸಂಬಳ ಪಡೆದುಕೊಂಡು ಅವರು ನೆಮ್ಮದಿಯಿಂದ ನಿವೃತ್ತಿಯಾಗಲೆಂದು ಸಹಾನುಭೂತಿಯಿಂದ ಪರಿಶಿಲಿಸದಿದ್ದರೆ, ಮತ್ತು ಗ್ರಾಮ ಸಹಾಯಕರಲ್ಲಿ ಶೇಕಡ 75-80ರಷ್ಟು ಮಂದಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಾಗಿರುವುದರಿಂದ ಅವರಿಗೇನು ಲಾಭವಾಗುತ್ತದೆ? ಆದುದರಿಂದ, ಈ ನಿಟ್ಟಿನಲ್ಲಾದರೂ ಅವರಿಗೆ ಅನುಕೂಲವಾಗುವ ದಿಸೆಯಲ್ಲಿ ನೀವಾದರೂ ಒಂದು ನಿರ್ಧಾರ ಕೈಗೊಳ್ಳುತ್ತೀರಾ? ಒಂದು ನಿಲುವು ವ್ಯಕ್ತಪಡಿಸುತ್ತಿರಾ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಗ್ರಾಮ ಸಹಾಯಕರ ಬಗ್ಗೆ ನಿಮಗೆ ಸಹಾನುಭೂತಿ ಇದ್ದರೆ 'ನಾವು ಕೊಡುತ್ತೇವೆ, ಅವರ ಬೇಡಿಕೆ ಈಡೇರಿಸುತ್ತೇವೆ ' ಎಂದರೆ, ಸುಪ್ರಿಂಕೋರ್ಟ್‌ನಲ್ಲಿ ಸಲ್ಲಿಸಿರುವ ಪಿಟಿಶನ್ ಅನ್ನು ವಾಪಸ್ಸು ತೆಗೆದುಕೊಳ್ಳಬಹುದಲ್ಲ. ಪಿಟಿಶನ್ ವಾಪಸ್ಸು ತೆಗೆದುಕೊಂಡರೆ ಅಲ್ಲಿಗೇ ಮುಗಿದುಹೋಯಿತು. 'ನಾವು ಅವರ ಬೇಡಿಕೆಗಳನ್ನು ಒಪ್ಪುತ್ತೇವೆ ' ಎಂದು ಒಂದು ಅಫಿಡವಿಟ್ ಸಲ್ಲಿಸುವ ಮೂಲಕ ಸುಪ್ರಿಂಕೋರ್ಟ್‌ನಲ್ಲಿ ಅವರು ಸಲ್ಲಿಸಿರುವ ಪಿಟಿಶನ್ ವಾಪಸ್ಸು ತೆಗೆದುಕೊಂಡರೆ ಮುಗಿದುಹೋಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಇಲ್ಲಿ ಭರವಸೆ ಕೊಟ್ಟರೆ, ನಾಳೆ ನಾವು ಅವರನ್ನೆಲ್ಲಾ ಕರೆದು ಮನವಿ ಮಾಡಿಕೊಂಡು, ಸುಪ್ರಿಂಕೋರ್ಟ್‌ನಲ್ಲಿ ಸಲ್ಲಿಸಿರುವ ಪಿಟಿಶನ್ ವಾಪಸ್ಸು ತೆಗೆದು ಕೊಳ್ಳುವಂತೆ ಹೇಳುತ್ತೇವೆ. ಆದರೆ, ಅವರೆಲ್ಲರನ್ನೂ 24 ಗಂಟೆಯೊಳಗೆ ಖಾಯಂ ಗೊಳಿಸು ತ್ತೇವೆಂದು ತಾವು ಭರವಸೆ ನೀಡಿದರೆ, ಪಿಟಿಶನ್ ವಾಪಸ್ಸು ತೆಗೆದುಕೊಳ್ಳುವಂತೆ ನಾವು ಅವರ ಮನ ವೊಲಿಸುತ್ತೇವೆ. 'ಆಡಳಿತ ಮತ್ತು ವಿರೋಧ ಪಕ್ಷದವರೆಲ್ಲರೂ ಈ ವಿಷಯದಲ್ಲಿ ಒಟ್ಟಾಗಿ ಸೇರಿದ್ದೇವೆ. ಆದಕಾರಣ, ಸುಪ್ರಿಂಕೋರ್ಟ್‌ನಲ್ಲಿ ನೀವು ಸಲ್ಲಿಸಿರುವ ಪಿಟಿಶನ್ ವಾಪಸ್ಸು ತೆಗೆದುಕೊಳ್ಳಬೇಕು' ಎಂದು ನಾವು ಹೇಳುತ್ತೇವೆ. ನಾಳೆಯಿಂದಲೇ ಅವರೆಲ್ಲರನ್ನೂ ಖಾಯಂ ಗೊಳಿಸುತ್ತೇವೆಂದು ಹೇಳಿದರೆ ನಾವು ಆ ರೀತಿ ಹೇಳಲು ಸಿದ್ದರಿದ್ದೇವೆ.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಸಭಾಧ್ಯಕ್ಷರೆ, ಎಲ್ಲಿ ಆ ಗೂಟ ನಮ್ಮನ್ನೂ ಒತ್ತುತ್ತದೆಂಬುದು ಆಡಳಿತ ನಡೆಸುವವರಿಗೇ ಗೊತ್ತು. " If the wishes were to be the horses, the beggars would have ride " ಎನ್ನತಕ್ಕಂಥ ಒಂದು ಗಾದೆ ಮಾತಿದೆ. ಅವರ ಬಗ್ಗೆ ನಮಗೆ ಎಷ್ಟೇ ಸಹಾನುಭೂತಿ ಇದ್ದರೂ ಕೂಡ ಜೊತೆಗೆ ಹಣಕಾಸಿನ ಸಂಕಷ್ಟಗಳೂ ಇದೆ. ಬರೀ ಸಹಾನುಭೂತಿ ಇದೆಯೆನ್ನುವ ಕಾರಣಕ್ಕಾಗಿ ಒಂದು ಸಾವಿರ ರೂಪಾಯಿ ಇದ್ದುದ್ದನ್ನು ಒಂದೇ ವರ್ಷದಲ್ಲಿ ಏಕ್‌ದಂ ಎರಡು ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಆ ಹಣದಲ್ಲಿ ಗಂಡ-ಹೆಂಡತಿ ಎರಡು ಹೊತ್ತು ಊಟ ಮಾಡುವುದಕ್ಕಾಗುವುದಿಲ್ಲ ಎಂಬುದು ತಮಗೆ ಗೊತ್ತಿದೆ. ಖಾಯಂ ಆಗಿರುವನು 14000-15000ರೂ ಸಂಬಳ ತೆಗೆದುಕೊಳ್ಳುತ್ತಾನೆ. ಆದರೆ ಇವರು ಕಳೆದ 10-12 ವರ್ಷಗಳಿಂದ ಕೇವಲ ಒಂದು ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಂಡು ದುಡಿಯುತ್ತಿದ್ದಾರಲ್ಲಾ, ಇವರು ಪಡೆದುಕೊಳ್ಳುತ್ತಿರುವ ಈ ಸಂಬಳದಲ್ಲಿ ಗಂಡ-ಹೆಂಡತಿ ಎರಡು ಹೊತ್ತು ಊಟ ಮಾಡುವುದಕ್ಕಾಗುತ್ತದೆಯೇ?

ಶ್ರೀ ಎಂ.ಪಿ.ಪ್ರಕಾಶ್ : ಬಡವರ ಪರಿವಾಗಿರುವ ತಮ್ಮ ಈ ಕಳಕಳಿಯನ್ನು ನಾನು ಸ್ವಾಗತಿಸುತ್ತೇನೆ. ಆದರೆ, ನಮ್ಮೆಲ್ಲರ ಕಳಕಳಿ ಈ ದೇಶದಲ್ಲಿ ನೂರಕ್ಕೆ ಶೇಕಡ ನಲವತ್ತರಷ್ಟು ಬಡತನ ಸೀಮಾರೇಖೆಯಿಂದ ಕೆಳಗಿರುವವರನ್ನು ಮೇಲೆತ್ತಲು ಸಾಧ್ಯವಾಗಿದೆಯೇ? ನಾವು-ನೀವೆಲ್ಲರೂ ಎಲ್ಲಾ ಕಡೆಗಳಲ್ಲೂ ಕಂಠ ಶೋಷಣೆ ಮಾಡಿಕೊಂಡು ಭಾಷಣ ಮಾಡಿದ್ದೇವೆ. ಆದರೆ, ಪ್ರಗತಿಯ ಹಂತಕ್ಕೆ ಬರುವ ಸಂದರ್ಭದಲ್ಲಿ ನಮ್ಮ ಮೊದಲ ಆದ್ಯತೆ ಯಾವುದೆಂದು ಗುರ್ತಿಸಬೇಕಲ್ಲಾ. ಸಂಬಳ-ಸಾರಿಗೆಗಳಿಗೆ ನಾವು ಹಣ ಕೊಡಬೇಕಾಗಿದ್ದರೆ, ಅಭಿವೃದ್ಧಿ ಕೆಲಸ-ಕಾರ್ಯಗಳಿಗೆ ಏನು ಮಾಡಬೇಕಾಗುತ್ತದೆ? ತೆರಿಗೆ ಹೆಚ್ಚು ಮಾಡಿದಾಗ, ಹೆಚ್ಚಾಗಿದೆಯೆಂದು ಹೇಳುತ್ತೀರಿ. ತಾವು ಆ ರೀತಿ ಹೇಳುತ್ತೀರೆಂದಲ್ಲ, ಎಲ್ಲರೂ ಕೂಡ ಹೇಳುತ್ತಾರೆ. ಹೆಚ್ಚು ತೆರಿಗೆ ಸಂಗ್ರಹಿಸುವ ರಾಜ್ಯ ಕರ್ನಾಟಕವೆಂದರೆ ಇದರ ಬಗ್ಗೆ ಟೀಕೆ ಬರುತ್ತದೆ. ಸಂಪನ್ಮೂಲಗಳಲ್ಲಿ ಸರ್ಕಾರದ ಖರ್ಚು ವೆಚ್ಚವಾಗಬಾರದೆಂಬ ಮಾತನ್ನು ಹೇಳುತ್ತೇವೆ. ಸರ್ಕಾರದ ಖರ್ಚು ಹೆಚ್ಚಾಗಬಾರದು ಎಂದಾಗ, ಮತ್ತೊಂದೆಡೆ ಇವರನ್ನು ಖಾಯಂಗೊಳಿಸಬೇಕೆಂದು ಹೇಳುತ್ತೀರಿ. ಕೆಲಸಕ್ಕೆ ನೇಮಿಸಿಕೊಳ್ಳುವ ಸಂದರ್ಭಗಳಲ್ಲಿ ನಿಮ್ಮನ್ನು ದಿನಗೂಲಿ ನೌಕರರುಗಳನ್ನಾಗಿ ಸೇರಿಸಿಕೊಳ್ಳುತ್ತೇವೆಂದು ಹೇಳುತ್ತೇವೆ. ಆದರೂ ಕೂಡ ತಾವು ತಪ್ಪಾಗಿ ಭಾವಿಸಬಾರದು. ಬಿಸಿಯೂಟದ ಕಾರ್ಯಕ್ರಮಕ್ಕೆ ಅಡುಗೆ ತಯಾರಿಸಲು ದಿನಗೂಲಿ ಲೆಕ್ಕದಲ್ಲಿ ಅಡುಗೆಯವರನ್ನು ನೇಮಿಸಿಕೊಳ್ಳಲಾಯಿತು. ಆದರೆ, ಸಂಘಟಿತ ಕಾರ್ಮಿಕರು ಎನ್ನುವ ರೀತಿಯಲ್ಲಿ ಈಗಾಗಲೇ ಅವರೆಲ್ಲರೂ ಸೇರಿಕೊಂಡು 'ನಮ್ಮೆಲ್ಲರನ್ನೂ ಖಾಯಂಗೊಳಿಸಬೇಕು' ಎಂದು ಹೇಳುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂಗೊಳಿಸುವ ವಿಚಾರ ಬಹಳ ವರ್ಷಗಳಿಂದ ಇದೆ. ಅದು ಒಂದು ಯೋಜನೆಯಾಗಿದೆ. ಆದರೆ, ಬಿಸಿಯೂಟದ ಕಾರ್ಯಕ್ರಮಕ್ಕೆ ಅಡುಗೆಯವರನ್ನು ತಾತ್ಕಾಲಿಕ ಆಧಾರದ ಮೇಲೆ ನೇಮಿಸಿಕೊಂಡಿರುವಾಗ ನಮ್ಮ ಮುಂದಿರುವ ಆರ್ಗ್ಯುಮೆಂಟ್ ಏನು? Government is a model employer. ನೀವು ಈ ರೀತಿ ಮಾಡತಕ್ಕಂಥಾದ್ದು ಸರಿಯಲ್ಲ. ಎರಡು ಗಂಟೆ ಕಾಲ ಮಾತ್ರ ತಾವು ಅಡುಗೆ ಮಾಡಿ ತೆರಳುವುದಷ್ಟೇ ನಿಮ್ಮ ಕೆಲಸವೆಂದಾಗ, 'ಇಲ್ಲ, ನಮ್ಮನ್ನೂ ಖಾಯಂಗೊಳಿಸಬೇಕು. ಎಲ್ಲರಿಗೂ ಕೊಡುವಂತೆ ನಮಗೂ ಸಂಬಳ-ಸಾರಿಗೆ ನೀಡಬೇಕು' ಎಂದಾಗ ಬಿಸಿಯೂಟ ಸೌಲಭ್ಯ ಒದಗಿಸಿಕೊಟ್ಟು ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳಿಗೂ ಸದರಿ ಕಾರ್ಯಕ್ರಮವನ್ನು ವಿಸ್ತರಿಸುವುದರ ಜೊತೆಗೆ ಅಡುಗೆ ಮಾಡುವವರನ್ನೂ ಖಾಯಂಗೊಳಿಸಿ, ಅವರಿಗೂ ಸಂಬಳ ಕೊಡಬೇಕೆಂದರೆ, ಅಷ್ಟು ಸಂಪನ್ಮೂಲಗಳು ಸರ್ಕಾರದಲ್ಲಿ ಇದೆಯೇ ಎನ್ನುವುದನ್ನು ಯೋಚನೆ ಮಾಡಿದಾಗ, ನಾವು ನಿಮ್ಮ ವಾದವನ್ನು ಸಂಪೂರ್ಣ ಒಪ್ಪಿದರೂ ಕೂಡ ಅಸಹಾಯಕ ಸ್ಥಿತಿಯಲ್ಲಿ ನಾವಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಹೇಳಿರುವಂತೆ ಆ ಪಕ್ಷ, ಈ ಪಕ್ಷವೆಂಬ ಪ್ರಶ್ನೆಯಲ್ಲ. ಎಲ್ಲರೂ ಇದರ ಬಗ್ಗೆ ಚರ್ಚಿಸೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಬಿಸಿಯೂಟ ಕಾರ್ಯಕ್ರಮದಲ್ಲಿ ಅಡುಗೆ ಮಾಡುವವರು ತಮ್ಮನ್ನು ಖಾಯಂಗೊಳೀಸಬೇಕೆಂದು ಎಲ್ಲಿಯೂ ಕೇಳಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಕಮ್ಯುನಿಸ್ಟ್ ಪಕ್ಷದವರು ಮೊನ್ನೆ ದಿವಸ ಒಂದು ಸಂಘಟನೆ ನಡೆಸಿದಾಗ, ಅದರಲ್ಲಿ ಆ ಬೇಡಿಕೆ ಇರಲಿಲ್ಲ. ನಿಮ್ಮ ಬೇಡಿಕೆಯಲ್ಲಿ 'ಸೇವಾ ಭದ್ರತೆ ನೀಡುವ ಮೂಲಕ ಸೇವೆಯನ್ನು ಮುಂದುವರೆಸಬೇಕು, ಅವರುಗಳನ್ನು ತೆಗೆದುಹಾಕಬಾರದು' ಎಂದು ಇದೆ. ಅದನ್ನು ತಾವು ಹೇಳಿದಿರಿ. ಆದರೆ, ಇನ್ನಿತರೆ ಸಂಘಟನೆಗಳ ಬೇಡಿಕೆಗಳಲ್ಲಿ 'ಬಿಸಿಯೂಟದ ಕಾರ್ಯಕ್ರಮದಲ್ಲಿ ಅಡುಗೆ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸಬೇಕು' ಎಂದು ತಿಳಿಸಿವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅದು ಸರಿಯಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಕುರಿತು ನಾನು ಹೇಳುವುದೇನೆಂದರೆ, ಆ ಕಡೆಯವರು, ಈ ಕಡೆಯವರು ಎಂದಲ್ಲ. ಇತ್ತೀಚಿನ ದಿವಸಗಳಲ್ಲಿ ನಾವು ಕೆಲವು ರಾಜ್ಯಗಳನ್ನು, ದೇಶವನ್ನು ಆಳಿದ್ದೇವೆ. ಆದರೆ, ಇವೊತ್ತಿನ ಪರಿಸ್ಥಿತಿಯಲ್ಲಿ ವೋಟಿಗಾಗಿ ಯಾವುದೋ ಒಂದು ರೀತಿಯಲ್ಲಿ ಭರವಸೆ ಕೊಟ್ಟು, ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡುವಂಥ ಸಾಂಕ್ರಾಮಿಕ ರೋಗ ನಮ್ಮನ್ನು ತಟ್ಟುತ್ತಿದೆ. ಇದರಿಂದಾಗಿ ಅಭಿವೃದ್ಧಿ ಕೆಲಸ-ಕಾರ್ಯಗಳು ಹಾಳಾಗುತ್ತಿದೆ. ಸರ್ಕಾರದ ಬಿಸಿಯೂಟ ಕಾರ್ಯಕ್ರಮಕ್ಕೆ ಅಡುಗೆಯವರನ್ನು ನೇಮಿಸಿ 'ಎರಡು ಗಂಟೆ ಅಡುಗೆ ಮಾಡಿ ಮಕ್ಕಳನ್ನು ನೋಡಿಕೊಳ್ಳಿ' ಎಂದರೆ, ಈ ಹಿಂದೆ ಒಬ್ಬೊಬ್ಬ ವಿದ್ಯಾರ್ಥಿಗೂ ಇಂತಿಷ್ಟು ಕಿಲೋ ಅಕ್ಕಿ ನೀಡಿದಾಗ, ಮಕ್ಕಳು ಅದನ್ನು ಮನೆಗೆ ತೆಗೆದುಕೊಂಡು ಹೋಗಿ ಅಡುಗೆ ಮಾಡಿಕೊಂಡು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಕೊಡುತ್ತಿದ್ದರು. ನಾವು ಬಿಸಿಯೂಟದ ಕಾರ್ಯ ಕ್ರಮವನ್ನು ಜಾರಿಗೊಳಿಸುವ ಮೂಲಕ ಮಕ್ಕಳಿಗೆ ಉಚಿತವಾಗಿ ಆಹಾರ ಒದಗಿಸಿಕೊಡುತ್ತೇವೆಂದಾಗ, ನಾವಾಗಿಯೇ ಹೊಸ ಹೊಸ ಸಮಸ್ಯೆಗಳನ್ನು ..... ಈ ಕಾರ್ಯಕ್ರಮ ಜಾರಿಗೊಳಿಸಿದ್ದು ತಪ್ಪೆಂದು ನಾನು ಹೇಳುವುದಿಲ್ಲ. ಆದರೆ, ಸಮಸ್ಯೆಗಳು ಹೇಗೆ ಉದ್ಭವಿಸುತ್ತವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೋಸ್ಕರ, ಅದನ್ನೂ ಇದನ್ನೂ ಹೋಲಿಕೆ ಮಾಡದೆ, ತಾವು ಮಾತನಾಡುವಾಗ, ಗ್ರಾಮ ಸಹಾಯಕರು ಸುಪ್ರಿಂಕೋರ್ಟ್‌ಗೆ ತೆರಳಿದ್ದಾರೆಂದೂ ಹೇಳಿ ಅನಂತರ, ಸರ್ಕಾರದಲ್ಲಿ ಹಣಕಾಸಿನ ಸಮಸ್ಯೆ ಇರುವುದಾಗಿ ಹೇಳಿದಿರಿ. ಈ ದಿಸೆಯಲ್ಲಿ ನಾನು ತಮಗೆ ಹೇಳುವುದೇನೆಂದರೆ, ತಾವು ಮನಸ್ಸು ಮಾಡುವ ಮೂಲಕ ನಮ್ಮ ರಾಜ್ಯದಲ್ಲಿರುವ ಎಲ್ಲಾ ಚೆಕ್‌ಪೋಸ್ಟ್‌ಗಳಿಗೆ ಯಾರಾದರೊಬ್ಬರನ್ನು ನೇಮಿಸಿದಲ್ಲಿ, ವರ್ಷವೊಂದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಉಳಿಸಬಹುದು. ಬರೀ ಚೆಕ್‌ಪೋಸ್ಟ್‌ಗಳನ್ನು ಬಿಗಿ ಮಾಡುವುದಲ್ಲದೆ, ಸರ್ಕಾರದ ಬೊಕ್ಕಸಕ್ಕೆ ಆದಾಯ ಹೆಚ್ಚಿಸಿ ಕೊಳ್ಳುವುದಕ್ಕೂ ಅನೇಕ ರೀತಿಯ ಮಾರ್ಗೋಪಾಯಗಳಿವೆ. ಅದರರ್ಥ ತುಳಿತಕ್ಕೊಳಗಾಗಿರುವ, ಶೋಷಿತ ವರ್ಗಕ್ಕೆ, ಜೀತದಾಳುಗಳಂತೆ ದುಡಿಯುತ್ತಿರುವವರಿಗೆ ನಿಮ್ಮ ಕಾಲದಲ್ಲಾದರೂ ಮುಕ್ತಿ ಸಿಗಲಿ. ಇದಕ್ಕೊಂದು ಪರಿಹಾರ ಹುಡುಕುವ ಮೂಲಕ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ನಾವು ಗ್ರಾಮ ಸಹಾಯಕರನ್ನು ಕರೆಸುತ್ತೇವೆ, ಅವರೊಂದಿಗೆ ಕುಳಿತು ಮಾತನಾಡಿ, ಸುಪ್ರಿಂಕೋರ್ಟ್‌ನಲ್ಲಿ ಸಲ್ಲಿಸಿರುವ ಪಿಟಿಶನ್ ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳೋಣ. ಅವರಿಗೆ ಸಂಬಳ-ಸಾರಿಗೆ, ಭತ್ಯೆಗಳನ್ನು ನಿಗದಿಪಡಿಸಿ, ಅವರುಗಳನ್ನು ಉಳಿಸುವ ನಿಟ್ಟಿನಲ್ಲಿ ಏನಾದರೂ ಕಾರ್ಯಕ್ರಮ ರೂಪಿಸಬಹುದೇ ಎಂಬುದರ ಬಗ್ಗೆ ಯೋಚನೆ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್ : ಸಂಪನ್ಮೂಲಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಳೆದ ಎಂಟು ತಿಂಗಳಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಸದಸ್ಯರಾದ ಕ್ಯಾತ್ಸಂದ್ರ ರಾಜಣ್ಣನವರು ಮಾತನಾಡುತ್ತಾ, ಸರ್ಕಾರವನ್ನು ಸಂಪೂರ್ಣವಾಗಿ ಅಭಿನಂದಿಸಿದ್ದಾರೆ. ಅದೇ ರೀತಿ ಅಬಕಾರಿ ಇಲಾಖೆ ಮತ್ತು ವಾಣಿಜ್ಯ ಇಲಾಖೆಯಿಂದ ಸಂಗ್ರಹಿಸಿರುವ ಸಂಪನ್ಮೂಲಗಳ ಬಗ್ಗೆಯೂ ತಾವು ದೊಡ್ಡ ಮನಸ್ಸು ಮಾಡಿ ಅಭಿನಂದನೆ ಮಾಡಿ. ಸೋರಿಹೋಗುತ್ತಿರುವ ಆದಾಯದ ಬಗ್ಗೆ ನಾವು ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಕುರಿತು ನಿಮಗೆ ಎಷ್ಟು ಬೇಕಾದರೂ ಅಭಿನಂದನೆಗಳನ್ನು ಸಲ್ಲಿಸೋಣ. ಆದರೆ, ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ ತಾವು ಹೇಳಲಿಲ್ಲ. ಆ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವು ಪ್ರಕಟಿಸಬೇಕು. ಬರೀ ಸಹಾನುಭೂತಿ ಸೂಚಿಸುವುದಾದರೆ, ಎಣ್ಣೆ ಮಾರುವವರು 'ಅಯ್ಯೋ' ಎಂದರೆ ತಲೆಗೆ ಎಣ್ಣೆ ಬರುವುದಿಲ್ಲ! ಲೋಕೋಪಯೋಗಿ ಇಲಾಖೆಯೂ ಒಳಗೊಂಡಂತೆ ಇನ್ನಿತರ ಬೇರೆ ಬೇರೆ ಇಲಾಖೆಗಳಲ್ಲಿ ಕಳೆದ 10-15 ವರ್ಷಗಳೀಂದ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವವರನ್ನು ಖಾಯಂಗೊಳಿಸುವ ಬಗ್ಗೆ ಏನಾದರೊಂದು ನಿರ್ಧಾರಕ್ಕೆ ಬರಬೇಕಲ್ಲಾ. ಪ್ರತಿ ಬಾರಿಯೂ 'ಸಹಾನುಭೂತಿ' ಎಂದರೆ ಏನು ಬಂತು?

ಶ್ರೀ ಎಂ.ಪಿ.ಪ್ರಕಾಶ್: 'ಸಹಾನುಭೂತಿ' ಒಂದೇ ವಿಚಾರ ಪ್ರಸ್ತಾಪಿಸಲಿಲ್ಲ. ಇದರ ಬೇರೆ ಆಯಾಮಗಳ ಬಗ್ಗೆಯೂ ಚರ್ಚಿಸಿದೆ. ತಾವು ಸ್ಪಷ್ಟವಾಗಿ ಗಮನಿಸಿದರೋ? ಇಲ್ಲವೋ? ಗೊತ್ತಿಲ್ಲ. ಸುಪ್ರಿಂಕೋರ್ಟ್‌ನಲ್ಲಿ ಈ ಪ್ರಕರಣ ಇರುವುದರಿಂದ, ಸುಪ್ರಿಂಕೋರ್ಟ್‌ನ ತೀರ್ಮಾನಕ್ಕಾಗಿ ನಾವು ಕಾಯುತ್ತಿದ್ದೇವೆ. ತೀರ್ಮಾನ ಬಂದ ನಂತರ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದ್ದೇವೆ.

ಅಧ್ಯಕ್ಷರು : ಈ ಕುರಿತಾದ ಚರ್ಚೆ ಮುಗಿದ ಬಳಿಕ ಪ್ರಶ್ನೋತ್ತರ ಕಲಾಪ ಪ್ರಾರಂಭಿಸಬೇಕೇ ಅಥವಾ ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೇ ಎಂಬುದು ನಮ್ಮ ಮುಂದಿರುವುದರಿಂದ, ಕ್ಯಾತ್ಸಂದ್ರ ರಾಜಣ್ಣನವರೆ, ತಮ್ಮ ಭಾಷಣವನ್ನು ಬೇಗ ಮುಗಿಸಬೇಕು. ಮಾನ್ಯ ವಿರೊಧ ಪಕ್ಷದ ನಾಯಕರು ನಾಳೆ ಮಾತನಾಡುತ್ತಾರೆ.

ಡಾ: ಕೆ.ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಗ್ರಾಮ ಸಹಾಯಕರ ಬಗ್ಗೆ ಒಂದು ನಿಮಿಷ ಮಾತನಾಡಬಯಸುತ್ತೇನೆ. ಈ ರಾಜ್ಯದಲ್ಲಿ ಬಹಳಷ್ಟು ವರ್ಷಗಳಿಂದ ಗ್ರಾಮ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸಾವಿರಾರು ಮಂದಿಯಲ್ಲಿ ಬಹುತೇಕ ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರಾಗಿದ್ದಾರೆ. ತಮ್ಮ ಸೇವೆಯನ್ನು ಖಾಯಂಗೊಳಿಸಬೇಕೆಂದು ಕೋರಿ ಇವರು ಹಲವು ರೀತಿಯಲ್ಲಿ ಹೋರಾಟ ನಡೆಸಿಕೊಂಡು ಬರುತ್ತಿದ್ದರೂ ಖಾಯಂಗೊಳಿಸುವ ದಿಸೆಯಲ್ಲಿ ಇದುವರೆಗೂ ಸರ್ಕಾರ ಯಾವುದೇ ರೀತಿಯ ಪ್ರಯತ್ನ ಕೂಡ ಮಾಡಿರುವುದಿಲ್ಲ. ಅನುಸೂಚಿತ ವರ್ಗದಲ್ಲಿರುವ ಗ್ರಾಮ ಸಹಾಯಕರು ನಾಲ್ಕನೇ ದರ್ಜೆ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು, ಇವರ ಜೀವನ ಬಹಳ ಕಷ್ಟಕ್ಕೆ ಸಿಲುಕಿದೆ. ಈ ವರ್ಗಕ್ಕೆ ಸೇರಿರುವ ಎಷ್ಟೋ ಮಂದಿ ಕಂದಾಯ ಸಚಿವರಾಗಿ ಹೋಗಿದ್ದರೂ ಇವರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಲಿಲ್ಲವೆಂಬ ವಿಚಾರವನ್ನು ನಾನು ಇವೊತ್ತು ಸದನದ ಮುಂದಿಡುತ್ತಿದ್ದೇನೆ. ಈ ಸರ್ಕಾರದಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಗ್ರಾಮ

ಸಹಾಯಕರ ಹುದ್ದೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತ ವರ್ಗಕ್ಕೆ ಸೇರಿರುವವರು ಇವೊತ್ತು ತೀವ್ರತರವಾದ ಸಂಕಷ್ಟದಲ್ಲಿರುವುದರಿಂದ, ಅವರ ಸೇವೆಯನ್ನು ಸರ್ಕಾರ ಖಾಯಂಗೊಳಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಗ್ರಾಮದಲ್ಲಿ ತೋಟಿ, ತಳವಾರರಾಗಿ ಕೆಲಸ ಮಾಡುತ್ತಾ, ನಮತರ ಗ್ರಾಮ ಸಹಾಯಕರ ಹುದ್ದೆಗೆ ನೇಮಕಗೊಳ್ಳುವ ಮೂಲಕ ಬಹಳಷ್ಟು ವರ್ಷಗಳಿಂದ ಬಡತನದ ಬೇಗೆಗೆ ಸಿಲುಕಿದ್ದರೂ ಅವರ ಸೇವೆಯನ್ನು ಖಾಯಂಗೊಳಿಸುವತ್ತ ಸರ್ಕಾರ ಗಮನಹರಿಸದಿರುವುದು ಬಹಳ ನೋವಿನ ಸಂಗತಿಯಾಗಿದೆಯೆಂದು ಹೇಳಬಯಸುತ್ತೇನೆ. ಗ್ರಾಮ ಸಹಾಯಕಾರಾಗಿ ನಾಲ್ಕನೇ ದರ್ಜೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುಸೂಚಿತ ವರ್ಗದವರಿಗೆ ನ್ಯಾಯ ದೊರಕಿಸಿಕೊಟ್ಟಾಗ ಮಾತ್ರ ಸಂವಿಧಾನವನ್ನು ಗೌರವಿಸಿದಂತಾಗುತ್ತದೆಂಬ ಮಾತನ್ನು ಹೇಳುತ್ತಾ, ಅವರ ಸೇವೆಯನ್ನು ಖಾಯಂಗೊಳಿಸಬೇಕೆಂದು ಮತ್ತೊಮ್ಮೆ ಸರ್ಕಾಠವನ್ನು ಒತ್ತಾಯಿಸಲು ಇಷ್ಟಪಡುತ್ತೇನೆ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೆ, ಗ್ರಾಮ ಸಹಾಯಕರದ್ದು ಬಹಳ ವರ್ಷಗಳಿಂದ ಬಂದಿರತಕ್ಕದ್ದು. ಮಾನ್ಯ ಪ್ರಕಾಶ್‌ರವರ ಕಾಲದಲ್ಲಾದರೂ ಅದಕ್ಕೆ ಮುಕ್ತಿ ಬರುತ್ತದೆಂದು ಪಕ್ಷಭೇದವನ್ನು ಮರೆತು ಎಲ್ಲರೂ ಅದಕ್ಕೆ ಒತ್ತಾಯ ಮಾಡಿರತಕ್ಕದ್ದು.

ಡ್ರಿಪ್ ಇರಿಗೇಷನ್ ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರು ಬೆಳಿಗ್ಗೆ ಹೇಳುತ್ತಿದ್ದರು. ಇಡೀ ರಾಜ್ಯದ ಡ್ರಿಪ್ ಇರಿಗೇಷನ್ ಬಗ್ಗೆ ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ. ಡ್ರಿಪ್ ಇರಿಗೇಷನ್‌ನನ್ನು encourage ಮಾಡಬೇಕು, ರೈತರಿಗೆ ನೀರನ್ನು ಉಳಿಸಬೇಕು, ರೈತರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಅವರು ಮಾಡಿರತಕ್ಕದ್ದು ಹೊರಗಡೆ ಹೇಳಿಕೆಗಳು ಬಂದಿರತಕ್ಕದ್ದು ಅದಕ್ಕೆ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಅದಕ್ಕೆ ಹೆಚ್ಚು ಹಣವನ್ನು ಮುಂದಿನ ಬಜೆಟ್‌ನಲ್ಲಿ ಒದಗಿಸಿಕೊಡುವ ಬಗ್ಗೆ ಚಿಂತನೆ ಮಾಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಎಲ್ಲಾ ಜಿಲ್ಲೆಗಳಿಗೂ ಡ್ರಿಪ್ ಇರಗೇಷನ್‌ಗೆ ನಿಮ್ಮ ನಾರ್ಮ್ಸ್ ಪ್ರಕಾರ ಏನು ಸಬ್ಸಿಡಿ ಇದೆ ಅದನ್ನು ಕೊಡತಕ್ಕದ್ದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಅದರಿಂದ ನೀರು ಮಿತವ್ಯಯವಾಗುತ್ತದೆ. ಈಗಾಗಲೇ underground water table deplete ಆಗುತ್ತಿದೆ. 8 ರಿಂದ 15 ಮೀಟರ್ ಕೆಳಕ್ಕೆ ಹೋಗಿದೆ ಎನ್ನತಕ್ಕದ್ದನ್ನು ನಾವು ನೋಡುತ್ತಿದ್ದೇವೆ, ಹೀಗೇ ಹೋದರೆ ಮುಂದೆ ಸಿಗತಕ್ಕ ನೀರು ಸಂಪೂರ್ಣವಾಗಿ ಫ್ಲೋರೈಡ್ ಆಗುತ್ತದೆ, ಅದು ಯಾರಿಗೂ ಉಪಯೋಗವಾಗುವುದಿಲ್ಲ. ಆದ್ದರಿಂದ ನೀವು ವಾಟರ್ ಟೇಬಲ್‌ನ್ನು ಮೇನ್‌ಟೇನ್ ಮಾಡುವುದಕ್ಕೆ ರೈತರಿಗೆ ಸಹಾಯವಾಗುವುದಕ್ಕೆ ಡ್ರಿಪ್ ಇರಿಗೇಷನ್‌ಗೆ ಎನ್‌ಕರೇಜ್ ಮಾಡುವುದಕ್ಕೆ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಹಾಯಧನ ಕೊಡತಕ್ಕದ್ದನ್ನು ತಾವು ಎಕ್ಸಟೆಂಡ್ ಮಾಡಬೇಕೆಂದು ಹೇಳುತ್ತೇನೆ. ಈ ಎಲ್ಲಾ ಸಮಸ್ಯೆಗಳನ್ನೇ ಹೇಳತಕ್ಕದ್ದಲ್ಲ, ಸಮಸ್ಯೆಗಳೇನಿದೆ ಅದು ನಿರಂತರವಾಗಿರತಕ್ಕದ್ದು, ಎಂತೆಂಥ ಸಮಸ್ಯೆಗಳನ್ನು ಮಾನ್ಯ ಧರ್ಮಸಿಂಗ್ ಸರ್ಕಾರದಲ್ಲಿ ನಿಭಾಯಿಸಿದ್ದಾರೆ. ವೀರಪ್ಪನ್ ಸಮಸ್ಯೆ ಹೋಯಿತು, ಹಿಂದಿನ ವರ್ಷ ಎಲ್ಲಾ ರಿಸರ್‌ವ್ವಾಯರ್‌ಗಳಲ್ಲಿ ನೀರು ಇರಲಿಲ್ಲ, ಈಗ ಎಲ್ಲಾ ರಿಸರ್‌ವ್ವಾಯರ್‌ಗಳು ತುಂಬಿಹೋಯಿತು, ಹಾಗೆ ಕೆಲವು ಸಮಸ್ಯೆಗಳು ತಾನಾಗಿಯೇ ಬಗೆಹರಿದಿವೆ. ಆದ್ದರಿಂದ ಇವೆಲ್ಲಾ ಸಣ್ಣಪುಟ್ಟ ಸಮಸ್ಯೆಗಳೇನಿದೆ ಅದು ಇವರ ಕಾಲದಲ್ಲಿ ಬಗೆಹರಿಯುತ್ತದೆ ಎಂಬ ನಂಬಿಕೆಯನ್ನಿಟ್ಟುಕೊಂಡಿದ್ದೇವೆ. ಮನುಷ್ಯನ ಶರೀರದಲ್ಲಿ ರಕ್ತ ಚಲನೆಯಾಗುತ್ತಿದ್ದರೆ ಹೇಗೆ ಮನುಷ್ಯ

ಜೀವಂತನಾಗಿರುತ್ತಾನೋ ಆ ರಕ್ತ ಚಲನೆ ನಿಂತುಹೋದರೆ ಅವನು ಸತ್ತೇ ಹೋಗುತ್ತಾನೆ, ಹಾಗೆ ಸಮಸ್ಯೆಗಳು ನಿರಂತರವಾಗಿ ಇರಲೇ ಬೇಕು, ಅದಕ್ಕೆ ಪರಿಹಾರವನ್ನು ಕೂಡ ಕಂಡುಕೊಳ್ಳತಕ್ಕದ್ದೇ ಜೀವನ ಮತ್ತು ಸಮಾಜದ, ಬದುಕಿನ ಒಂದು ಅಂಗ ಎಂಬುದನ್ನು ಮತ್ತೊಮ್ಮೆ ಹೇಳಬಯಸುತ್ತೇನೆ. ನಾನು ಮಾನ್ಯ ಶ್ರೀನಿವಾಸಗೌಡರನ್ನು ನೆನಪಿಸುತ್ತೇನೆ, ಯಾವುದೇ ಸಮಸ್ಯೆ ಇದ್ದರೂ ಪೆಸಿಫಿಕ್ ಓಷನ್ ಮೂಲಕ ಇನ್ನೊಂದು ಓಷನ್‌ಗೆ ಹೋಗಾದರೂ ಪರಿಹಾರ ಮಾಡುತ್ತಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲ ಮಾಡತಕ್ಕದ್ದು ಇದೆ. ನಾನು ಆ ಒಂದು ವಿಚಾರದಲ್ಲಿ ಸರ್ಕಾರವನ್ನು ಅಭಿನಂದಿಸಿ ಏನು ಕೇಂದ್ರ ಸರ್ಕಾರ ಸಿ.ಇ.ಟಿ.ಬಗ್ಗೆ ಕಾಯ್ದೆಯನ್ನು ಮಾಡತಕ್ಕದ್ದೆಂದು ಎಲ್ಲರೂ ಒತ್ತಾಯ ಮಾಡುತ್ತಿದ್ದೇವೆ, ನಾನು ಇದುವರೆಗೆ ಬಹಳ ಜನರಿಗೆ ಪ್ರಶ್ನೆ ಮಾಡಿದಾಗ ಉತ್ತರ ಎಲ್ಲೂ ದೊರಕಿಲ್ಲ. ಇದು ಬಹಳ ಮುಖ್ಯವಾದಂಥದ್ದು. ಎಲ್ಲಾ ಸದಸ್ಯರುಗಳು ಸೇರಿ 75 : 25 ಎಂದು ನಾವು ಕಾಯ್ದೆ ಮಾಡುತ್ತೇವೆ, ಆಮೇಲೆ ನಾವೇ ಹೋಗಿ ಅದು ಸರಿಯಿಲ್ಲವೆಂದು ಸುಪ್ರಿಂ ಕೋರ್ಟ್‌ನಲ್ಲಿ ದಾವೆ ಹಾಕುತ್ತೇವೆ. ಇದನ್ನು ನಾವು ಪ್ರಶ್ನೆ ಮಾಡಿಕೊಳ್ಳಬೇಕು. ನಾವು ಇಲ್ಲಿ 75 : 25 ಕ್ಕೆ ಒಪ್ಪಿಕೊಂಡು ಹೋಗಿ ಅಲ್ಲಿ ಸುಪ್ರಿಂ ಕೋರ್ಟ್‌ನಲ್ಲಿ ಒಪ್ಪುವುದಿಲ್ಲವೆಂದು ಅರ್ಜಿ ಹಾಕಿಕೊಂಡರೆ ನಮ್ಮ ಬಗ್ಗೆ ಜನರು ಏನು ತಿಳಿಯುತ್ತಾರೆ ಎಂಬ ಬಗ್ಗೆ ಗಮನಹರಿಸುತ್ತೀರಿ ಎಂಬ ಮಾತನ್ನು ಹೇಳಿ ಮತ್ತೊಮ್ಮೆ ಸರ್ಕಾರದ ರೂಪುರೇಷೆಗಳ ಬಗ್ಗೆ, ರಾಜ್ಯಪಾಲರ ಮೂಲಕ ಈ ನಾಡಿನ ಜನರಿಗೆ ಏನು ಮಾರ್ಗಸೂಚನೆಯನ್ನು ಕೊಟ್ಟಿದ್ದಾರೆ ಅದು ನಿಜಕ್ಕೂ ಅಭಿನಣದನಾರ್ಹವಾದದ್ದು, ಈ ಎಲ್ಲಾ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗುವ ನಿಟ್ಟಿನಲ್ಲಿ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಂಡು ಸರ್ಕಾರಕ್ಕೆ ಇನ್ನೂ ಹೆಚ್ಚಿನ ಆದಾಯವನ್ನು ಗಳಿಸತಕ್ಕ ನಿಟ್ಟಿನಲ್ಲಿ ಸಹ ಗಮನ ಹರಿಸಬೇಕು ಮತ್ತು ಖರ್ಚು ಮಾಡತಕ್ಕ ಸಂದರ್ಭದಲ್ಲೂ worth while expenditure ಇರಬೇಕು. ವಿನಾಕಾರಣ ಅದು ಹಾಳು ಮಾಡತಕ್ಕ ದಿಕ್ಕಿನಲ್ಲಿ ಆಗಬಾರದು ಎನ್ನತಕ್ಕದ್ದೂ ಸಹ ಈ ಭಾಷಣದ ಮೂಲಕ ನಮಗೆಲ್ಲಾ ಅರಿವಾಗುತ್ತದೆ, ಈ ಭಾಷಣವನ್ನು ದಯಪಾಲಿಸಿದಂಥ ಘನತೆವೆತ್ತ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಅನುಮೋದನೆಯನ್ನು ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೂ ವಂದಿಸಿ ನನ್ನೆರಡು ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಐದು ಗಂಟೆಯಾಗಿದೆ, ಆರು ಗಂಟೆಗೆ ಸಭೆಯನ್ನು ಮುಂದೂಡಬೇಕಾಗಿದೆ, ಏಕೆಂದರೆ ಸಿ.ಪಿ.ಎ.ಸಭೆ ಇದೆ. ಆದ್ದರಿಂದ ಈಗ ಪ್ರಶ್ನೋತ್ತರಕ್ಕೆ ಹೋಗಿಬಿಡೋಣ.

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಮಾನ್ಯ ಉದಾಸಿಯಲ್ ಪ್ರಶ್ನೆ. ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು ಬಂದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡಲು ಮಂತ್ರಿಗಳೇ ಇಲ್ಲ.

ಶ್ರೀ ಡಿ.ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೌನ್ಸಿಲ್‌ನಲ್ಲಿದ್ದಾರೆ, ಆದ್ದರಿಂದ ದಯಮಾಡಿ ಈ ಪ್ರಶ್ನೆಯನ್ನು ನಾಳೆ ದಿವಸ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾಳೆ ಎಲ್ಲಿ ತೆಗೆದುಕೊಳ್ಳಲು ಆಗುತ್ತದೆ?